# ಕಾರ್ಮಿಕ ದೃಷ್ಟಿಕೋನ

ಸಂಪುಟ: 38, ಸಂಚಿಕೆ: 04 ಜೂನ್ 2025, ಬೆಲೆ: ರೂ. 7/-

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ SUCI(C) ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ




ಹಾಡಿ ಮಕ್ಕಳ ಕೂಗು

ಒಳ ಪುಟಗಳಲ್ಲಿ.....


ಪುಟ 4 ಜುಲೈ 9ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಿ!

ಪುಟ 6 ಟ್ರಂಪ್ ನೇತೃತ್ವದಲ್ಲಿ ಶಿಕ್ಷಣ, ಸಂಶೋಧನೆ, ಆರೋಗ್ಯ ಸೇವೆ ಮತ್ತು ಕಲೆ ನಿರ್ನಾಮ!

ಪುಟ 9 ನ್ಯಾಯಮೂರ್ತಿ ಮನೆಯಲ್ಲಿ ಸುಟ್ಟ ನೋಟುಗಳು ಪತ್ತೆ : ಹಲವು ಸಂದೇಹ

ಪುಟ 10 ಹಿಟ್ಲರನ ಫ್ಯಾಷಿವಾದವನ್ನು ಹತ್ತಿಕ್ಕಿದ ವಿಜಯಕ್ಕೆ 80 ವರ್ಷ


# ಜನಪರ ನೀತಿಗಳ ಜಾರಿಗೆ ಆಗ್ರಹಿಸಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆ

**ಮೇ 14,2025 ರಂದು ನಮ್ಮ ಪಕ್ಷ ಎಸ್‌ಯುಸಿಐ (ಕಮ್ಯುನಿಸ್ಟ್) ಕರ್ನಾಟಕ ರಾಜ್ಯ ಸಮಿತಿಯು ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ, ಸರ್ಕಾರಿ ಶಿಕ್ಷಣ ಸಂಸ್ಥೆ-ಆಸ್ಪತ್ರೆಗಳಿಗೆ ಮೂಲ ಸೌಕರ್ಯ, ಉದ್ಯೋಗ ಖಾತ್ರಿ ಕೂಲಿ ದಿನಗಳನ್ನು 200 ದಿನಕ್ಕೆ ಹೆಚ್ಚಿಸುವುದು, ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆ, 6000 ಸರ್ಕಾರಿ ಶಾಲೆ ಮುಚ್ಚಬಾರದು, ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವುದು ಹಾಗೂ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸುವುದು, ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೆ ಕಾರ್ಮಿಕರ ಸ್ಥಾನಮಾನ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯ ಮಟ್ಟದ 'ಜನ ಹೋರಾಟ' ವನ್ನು ಸಂಘಟಿಸಿತು.**

ಕೇಂದ್ರದಲ್ಲಿ ಮೂರನೇ ಅವಧಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರವು ದೇಶದ ಸಂಪತ್ತನ್ನು ಲಂಗು ಲಗಾಮಿಲ್ಲದೆ ಲೂಟಿ ಮಾಡಲು ಅಂಬಾನಿ-ಅದಾನಿಗಳಿಗೆ ಮಣೆ ಹಾಕಿ ದೇಶದ ಜನಸಾಮಾನ್ಯರನ್ನು ಹಸಿವೆ, ಬಡತನ, ನಿರುದ್ಯೋಗಕ್ಕೆ ತಳ್ಳುವ ನೀತಿಗಳನ್ನು ಅನುಸರಿಸುತ್ತಾ, ಅವುಗಳ ಬಗ್ಗೆ ಧ್ವನಿಯೆತ್ತುವವರ, ದಮನಿತರ ಜನತಾಂತ್ರಿಕ ಹಕ್ಕುಗಳನ್ನು ಹೊಸಕಿ ಹಾಕುತ್ತಿರುವಾಗ, ಇನ್ನೊಂದೆಡೆ ರಾಜ್ಯದಲ್ಲಿ ಬಿಜೆಪಿ ದುರಾಡಳಿತದಿಂದ ಬೇಸತ್ತ ಜನರಿಗೆ ಪರ್ಯಾಯವೆಂಬಂತೆ ರಾಜ್ಯದ ಅಧಿಕಾರ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರ್ಕಾರವು ಗ್ಯಾರಂಟಿಗಳೇ ಜನಪರ ನೀತಿಗಳೆಂದು ಬಿಂಬಿಸುತ್ತಾ ಜನರ ಬದುಕನ್ನು ಮೇಲೆತ್ತುವ ಜವಾಬ್ದಾರಿಯನ್ನು ಕೈಗೊಳ್ಳದಿರುವ ಸಂದರ್ಭದಲ್ಲಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಈ ಜನ ಹೋರಾಟವನ್ನು ಕೈಗೆತ್ತಿಕೊಂಡಿತು.ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಜನರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಹಸ್ರಾರು ಜನರು ಸರಕಾರದ ವಿರುದ್ಧ ತಮ್ಮ ಆಕ್ರೋಶವನ್ನು ಹೊರಹಾಕುವಂತಹ ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗುವುದರ ಮೂಲಕ ಪ್ರತಿಭಟನೆ ಆರಂಭಗೊಂಡಿತು.

ಈ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯುರೋ ಸದಸ್ಯರಾದ ಕಾ. ಕೆ ರಾಧಾಕೃಷ್ಣ ಅವರು ಮಾತನಾಡುತಾ , "ಜಗತ್ತಿನಾದ್ಯಂತ ಪರಿಸ್ಥಿತಿ ಗಂಭೀರವಾಗಿದೆ. ಯುದ್ಧದ ವಾತಾವರಣ ಸೃಷ್ಟಿಯಾಗಿದೆ. ಭಾರತ- ಪಾಕಿಸ್ತಾನ ನಡುವಿನ ಇತ್ತೀಚಿನ ಮಿಲಿಟರಿ ಕಾರ್ಯಾಚರಣೆ, ಇಸ್ರೇಲ್-ಪ್ಯಾಲೆಸ್ತೀನ್, ರಷ್ಯಾ-ಉಕ್ರೇನ್ ನಡುವಿನ ಸಮರ ಮೊದಲಾದವು ಇಂತಹ ಯುದ್ಧಗಳಿಗೆ ಇತ್ತೀಚಿನ ಉದಾಹರಣೆಗಳು. ಇಸ್ರೇಲ್ - ಪ್ಯಾಲೇಸ್ತೀನ್ ನಡುವೆ ಕದನ ವಿರಾಮದ ನಡುವೆಯೂ ಗಾಜಾ ಪಟ್ಟಿಯ ಮೇಲೆ ನಿರಂತರ ದಾಳಿ ಮುಂದುವರೆದಿರುವುದು ಯುದ್ಧದ ಕಾರ್ಯಾಚರಣೆ

2ನೇ ಪುಟಕ್ಕೆ....



ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಕಾ.ಕೆ.ರಾಧಾಕೃಷ್ಣ



ಪ್ರತಿಭಟನೆಯ ಮುಂಚೂಣಿಯಲ್ಲಿ ರಾಜ್ಯ ನಾಯಕರು

## ಎಸ್‌ಯುಸಿಐ(ಸಿ) ಕರ್ನಾಟಕ ವೆಬ್ ಸೈಟ್ ಲೋಕಾರ್ಪಣೆ:

### "ಪಕ್ಷದ ಕ್ರಾಂತಿಕಾರಿ ಚಿಂತನೆಗಳು ಕನ್ನಡ ನಾಡಿನ ಮೂಲೆಮೂಲೆ ತಲುಪಲಿ": ಕಾ. ಕೆ.ರಾಧಾಕೃಷ್ಣ

31.05.2025: ನಮ್ಮ ಪಕ್ಷ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್)ದ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಕೆ.ರಾಧಾಕೃಷ್ಣರವರು, ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಜಾಲತಾಣವನ್ನು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅವರು, ಇಂದಿನ ದಿನಮಾನಗಳಲ್ಲಿ ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿರುವ ಸಾಮಾಜಿಕ ಮಾಧ್ಯಮಕ್ಕೆ ನಮ್ಮ ಪಕ್ಷದ ವೆಬ್ ಸೈಟ್ ಸಹ ಸೇರ್ಪಡೆಯಾಗುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ ಕೆಲವು ಮಾತುಗಳನ್ನಾಡಿದರು:

"ಇಂದು ಬಹುತೇಕ ಚಾನೆಲ್‌ಗಳು, ಪತ್ರಿಕೆಗಳು ಬಂಡವಾಳಶಾಹಿಗಳ ಮುಖವಾಣಿಗಳಾಗಿರುವಾಗ, ಕಾರ್ಮಿಕವರ್ಗದ ಪಕ್ಷವಾಗಿರುವ ಎಸ್‌ಯುಸಿಐ(ಸಿ)ಯ ವೆಬ್‌ಸೈಟ್ ಶೋಷಿತರ, ದಮನಿತರ ಧ್ವನಿಯಾಗಿ ಜನರನ್ನು ತಲುಪಲಿದೆ. ಶೋಷಕ ಬಂಡವಾಳಶಾಹಿ ವ್ಯವಸ್ಥೆ ತನ್ನ ಮರಣಾಸನ್ನ ಅವಸ್ಥೆಯನ್ನು ತಲುಪಿರುವ ಈ ಕಾಲಘಟ್ಟದಲ್ಲಿ, ಅದಕ್ಕೆ ಕೊನೆ ಹಾಕಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಕಾರ್ಮಿಕವರ್ಗ ಪಕ್ಷದ ನೇತೃತ್ವದಲ್ಲಿ


2ನೇ ಪುಟಕ್ಕೆ....



ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ವೆಬ್ ಸೈಟ್‌ನ QR ಕೊಡ್

ಕಾ. ಕೆ.ರಾಧಾಕೃಷ್ಣರವರವರಿಂದ ಎಸ್‌ಯುಸಿಐ(ಸಿ) ಕರ್ನಾಟಕ ವೆಬ್‌ಸೈಟ್ ಲೋಕಾರ್ಪಣೆ. ಅವರ ಬಲಗಡೆ: ಕಾ.ಎಂ.ಎನ್. ಶ್ರೀರಾಮ್, ಕಾ. ವಿ.ಜ್ಞಾನಮೂರ್ತಿ, ಎಡಗಡೆ: ಕಾ.ಕೆ.ಉಮಾ

## ಭಾರತದ ಆರೋಗ್ಯ ವ್ಯವಸ್ಥೆಯನ್ನು ಅಸ್ವಸ್ಥಗೊಳಿಸುತ್ತಿರುವ ನಕಲಿ ಔಷಧಿಗಳ ಹಾವಳಿ; ಗಗನಕ್ಕೇರುತ್ತಿರುವ ಔಷಧದ ಬೆಲೆ!




**ಭಾರತವೀಗ ಕಲಬೆರಕೆ ಹಾಗೂ ಕಳಪೆ ದರ್ಜೆಯ ಔಷಧಿಗಳ ಜಾಗತಿಕ ಮಾರುಕಟ್ಟೆಯಲಿ ಮುಂಚೂಣಿಯಲ್ಲಿದೆ. ಈ ಸಾಧನೆಯ ಹಿಂದೆ ಕೇವಲ ಸರ್ಕಾರದ ಇಚ್ಛಾಶಕ್ತಿಯ ಕೊರತೆಯಷ್ಟೆಯೋ ಅಥವಾ ಸರ್ಕಾರ, ಆಡಳಿತ ಮತ್ತು ಫಾರ್ಮಾ ಮಾಫಿಯಾಗಳ ಪರಸ್ಪರ ಸಂಬಂಧವೇನಾದರೂ ಇದೆಯೋ ಎಂಬುದೇ ಒಂದು ಗಂಭೀರವಾದ ಪ್ರಶ್ನೆ. ಕಲಬೆರಕೆ ಔಷಧಿಗಳಿಂದಾಗುವ ಪ್ರಾಣಹಾನಿಯ ಪ್ರಕರಣಗಳು ಇತ್ತಿಚಿನ ದಿನಗಳಲ್ಲಿ ಹೆಚ್ಚುತ್ತಿರುವುದು ಕಳವಳಕಾರಿಯಾದ ಬೆಳವಣಿಗೆಯಾಗಿದೆ.**

ಇತ್ತಿಚಿನ ಕೆಲವು ಪ್ರಕರಣಗಳನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಕಳೆದ ವರ್ಷ ಕರ್ನಾಟಕದ ವಿವಿಧ ಜಿಲ್ಲಾ ಅಸ್ಪತ್ರೆಗಳಲ್ಲಿ ಸರಣಿ ಬಾಣಂತಿ ಸಾವುಗಳು ವರದಿಯಾಗಿದ್ದವು. ಆರೋಗ್ಯವಂತರಾಗಿದ್ದ ತಾಯಂದಿರು, ಅಕಾರಣವಾಗಿ ಅಸ್ವಸ್ಥರಾಗಿ ಅಸು ನೀಗುತ್ತಿದ್ದರು. ತನಿಖೆಯಲ್ಲಿ ಕಂಡುಬಂದ ಅಂಶವೆಂದರೆ, ತಾಯಂದಿರಿಗೆ ನೀಡುತ್ತಿದ್ದ ರಿಂಗರ್ ಲ್ಯಾಕ್ಟೇಟ್ ದ್ರಾವಣ ಕಲುಷಿತವಾಗಿತ್ತು. ಪಶ್ಚಿಮ್ ಬಂಗಾ ಎನ್ನುವ ಕಂಪನಿಯಿಂದ ಸರಬರಾಜಾಗುತ್ತಿದ್ದ ಇದೇ, ತಾಯಂದಿರ ಸಾವಿಗೆ ಕಾರಣ ಎಂಬುದು ತನಿಖೆಯಿಂದ ತಿಳಿದುಬಂದಿತ್ತು. ಕರ್ನಾಟಕ ಸರ್ಕಾರವು, ಸದರಿ ಕಂಪನಿಯ ಬಗ್ಗೆ ಬಂಗಾಳದ ಸರ್ಕಾರಕ್ಕೆ ಈ ವಿಷಯ ತಿಳಿಸಿದ್ದರೂ ಸಹ, ಬಂಗಾಲದಲ್ಲಿ ಈ ಔಷಧಗಳ ಉಪಯೋಗ ಹಾಗೇ ಮುಂದುವರೆಯಿತು. ಇತ್ತಿಚಿಗಷ್ಟೇ, ಪಶ್ಚಿಮ ಬಂಗಾಳದ ಮೇದಿನಿಪುರ ಮೆಡಿಕಲ್ ಕಾಲೇಜಿನಲ್ಲಿ ಗರ್ಭಿಣಿಯೊಬ್ಬರು ಇದೇ ಕಂಪನಿಯ ರಿಂಗರ್ ಲಾಕ್ಟೇಟ್‌ನಿಂದಾಗಿ ಮರಣಹೊಂದಿದರು. ಆರಂಭದಲ್ಲಿ, ಕಾರ್ಯನಿರತ ವೈದ್ಯರ ಮೇಲೆ ತಪ್ಪನ್ನು ಆರೋಪಿಸಿ ಹನ್ನೆರಡು ಮಂದಿ ವೈದ್ಯರನ್ನು

5ನೇ ಪುಟಕ್ಕೆ....

...1ನೇ ಪುಟದಿಂದ

ಜಾರಿಯಲ್ಲಿರುವುದನ್ನು ಸೂಚಿಸುತ್ತದೆ. ಭಯೋತ್ಪಾದನೆ ಮಟ್ಟಹಾಕುವ ಹೆಸರಿನಲ್ಲಿ ಇದೆಲ್ಲಾ ಜರುಗುತ್ತಿದೆ. ಭಯೋತ್ಪಾದನೆ ಕೆಟ್ಟದ್ದು, ಖಂಡನೀಯ.. ಆದರೆ ಇದೆಲ್ಲಾ ಯಾಕೆ ನಡೆಯುತ್ತದೆ? ಮೇಲ್ನೋಟಕ್ಕೆ ಭಯೋತ್ಪಾದನೆ ಕಂಡುಬಂದರೂ, ಇದರ ಹಿಂದೆ ಇರುವುದು ಮಾರುಕಟ್ಟೆ ಸಂಘರ್ಷ, ದೊಡ್ಡ ದೊಡ್ಡ ಬಂಡವಾಳಗಾರರು, ಮಾಲೀಕರ ನಡುವೆ ನಡೆಯುವ ಜಗಳ, ಲಾಭಕ್ಕಾಗಿ ನಡೆಯುವ ಜಗಳ. ಇದಕ್ಕೂ ಜನರ ಜೀವನಕ್ಕೂ ಯಾವುದೇ ಸಂಬಂಧವಿಲ್ಲ" ಎಂದರು.

ಮುಂದುವರೆದು ಮಾತನಾಡಿದ ಅವರು, "ಇತ್ತೀಚೆಗೆ ಭಾರತ–ಪಾಕಿಸ್ತಾನದ ಮಧ್ಯ ಕದನ ವಿರಾಮದ ಹೆಸರಿನಲ್ಲಿ ಶಾಂತಿ ಪಾಠ ಮಾಡಲು ಬರುವ ಅಮೇರಿಕಾದ ಟ್ರಂಪ್ ಕೊಲೆಗಡುಕ! ಪ್ಯಾಲೆಸ್ತೇನಿನ ಸಾವಿರಾರು ಜನರ ಕಗ್ಗೊಲೆಗೆ ಕಾರಣನಾದ ಅಮೆರಿಕಾ, ಭಾರತ ಪಾಕಿಸ್ತಾನದ ನಡುವೆ ಮೂಗು ತೂರಿಸಿದ್ದು ಕೇವಲ ಬೂಟಾಟಿಕೆ, ಇದು ಎರಡು ದೇಶಗಳ ನಡುವಿನ ವಿವಾದ, ಮೂರನೇ ದೇಶದ ಮಧ್ಯಸ್ಥಿಕೆ ಬೇಕಿರಲಿಲ್ಲ. ಕೇಂದ್ರ ಸರ್ಕಾರ ಇದಕ್ಕೆ ಆಸ್ಪದ ಮಾಡಿಕೊಟ್ಟಿದ್ದು ತಪ್ಪು" ಎಂದರು. "ದೇಶದ ಜನರಿಗೆ ಶಾಂತಿ ಬೇಕು. ನೆಮ್ಮದಿಯ ಬದುಕು ಬೇಕು. ಆದರೆ ಬಂಡವಾಳಗಾರರು–ಸಾಮ್ರಾಜ್ಯಶಾಹಿಗಳಿಗೆ ಯುದ್ಧ ಬೇಕು, ಯುದ್ಧ ಇಲ್ಲದಿದ್ದರೆ ಅವು ಸಾಯುತ್ತವೆ. ಈ ದೇಶದ ಜನರ ಜೀವನ ಸಂಕಟಮಯವಾಗಿದೆ, ಏಕೆಂದರೆ, ಸರ್ಕಾರಗಳ ಅದಾನಿ, ಅಂಬಾನಿ ಮುಂತಾದ ಕಾರ್ಪೊರೇಟ್‌ಗಳ ಪರ ನೀತಿಗಳು. ಶೇ 5 ರಷ್ಟು ಕೆಲವೇ ಜನ ದೇಶದ ಶೇ 60 ರಷ್ಟು ಸಂಪತ್ತಿನ ಒಡೆಯರಾಗಿದ್ದಾರೆ, ಇನ್ನು ಬಹುಸಂಖ್ಯಾತ ಶೇ 55 ರಷ್ಟು ಸಾಮಾನ್ಯ ಜನ ಕೇವಲ ಶೇ 3 ರಷ್ಟು ಸಂಪತ್ತು ಹೊಂದಿದ್ದಾರೆ. ಹಸಿವೆ, ನಿರ್ಗತಿಕತನ, ನಿರುದ್ಯೋಗ ತಾಂಡವವಾಡುತ್ತಿವೆ. ಜನರ ಕೊಳ್ಳುವಶಕ್ತಿ ಅಂದರೆ ಮಾರುಕಟ್ಟೆ ಸಂಕುಚಿತಗೊಳ್ಳುತ್ತಿದೆ. ಅಂತೆಯೇ ದೇಶದೇಶಗಳ ಮಧ್ಯೆ ಮಾರುಕಟ್ಟೆ ಯುದ್ಧ ನಡೆಯುತ್ತಿದೆ. ಈ ತಿಕ್ಕಾಟವೇ ಎಲ್ಲದಕ್ಕೂ ಮೂಲ. ಮಾರುಕಟ್ಟೆ ಬಿಕ್ಕಟ್ಟಿನ ಶಮನಕ್ಕಾಗಿ ಮಿಲಿಟರೀಕರಣದ ಮೂಲಕ ಕೃತಕ ಮಾರುಕಟ್ಟೆ ಸೃಷ್ಟಿಸಿಕೊಳ್ಳುತ್ತಾರೆ. ಅಮೇರಿಕಾದಿಂದ ಹಿಡಿದು ಭಾರತದಂತಹ ದೊಡ್ಡ ದೊಡ್ಡ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಆರ್ಥಿಕತೆಯನ್ನು ಮಿಲಿಟರೀಕರಣಗೊಳಿಸಿವೆ. ಭಯೋತ್ಪಾದಕರನ್ನು, ಅಲ್ಲಿಂದ ಯುದ್ಧವನ್ನೂ ಸಹ ಇವರೇ ಹುಟ್ಟು ಹಾಕುತ್ತಾರೆ" ಎಂದರು.

ಅಂತೆಯೇ, "ಈ ಅನ್ಯಾಯ, ಅಸಮಾನತೆ ವಿರುದ್ಧ ರೈತ–ಕಾರ್ಮಿಕರು ಧ್ವನಿಯೆತ್ತದಂತೆ ಸರ್ಕಾರಗಳು ಅವರ ಬದುಕನ್ನು, ಬದುಕಿನ ಹಕ್ಕನ್ನು ನಿರ್ದಯವಾಗಿ ಕಿತ್ತುಕೊಳ್ಳುತ್ತಿವೆ. ಈ ಶೋಷಕ ವ್ಯವಸ್ಥೆಯ ವಿರುದ್ಧ ಬಲಿಷ್ಠ ಹೋರಾಟ ಕಟ್ಟುತ್ತಾ, ಅಂತಿಮವಾಗಿ ಶೋಷಣೆ, ದೌರ್ಜನ್ಯಗಳಿಲ್ಲದ ಸಮಾಜವಾದಿ ವ್ಯವಸ್ಥೆಯ ಕಡೆ ಆ ಹೋರಾಟಗಳನ್ನು ಬೆಳೆಸಬೇಕು" ಎಂದು ಅವರು ಕರೆ ನೀಡಿದರು.

ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಕಾ.ಕೆ.ಉಮಾರವರು ಈ ಜನ ಹೋರಾಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ "ದೇಶದಲ್ಲಿ 20 ಕೋಟಿ ಜನ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ, 7000 ಜನ ಹಸಿವೆಯಿಂದ ಸಾಯುತ್ತಿದ್ದಾರೆ, ಅವರಲ್ಲಿ ಮಕ್ಕಳ ಸಂಖ್ಯೆ 4000 ದಷ್ಟು ಇದೆ. ಪ್ರತಿ 5 ಜನರಲ್ಲಿ 3 ಜನ ನಿರುದ್ಯೋಗಿಗಳು. 6.20 ಲಕ್ಷ ಜನ ನಿರ್ಗತಿಕರಿದ್ದಾರೆ. ಒಂದೆಡೆ ಅದಾನಿ ಆಸ್ತಿ 11.5 ಲಕ್ಷ ಕೋಟಿ, ಅಂಬಾನಿಯದು 10.5 ಲಕ್ಷ ಕೋಟಿ ಇದೆ, ಆದರೆ ಜನ ಸಾಮಾನ್ಯ ದಿನಕ್ಕೆ ಕೇವಲ 33 ರೂ. ಸಂಪಾದಿಸುತ್ತಾನೆ. ಇಷ್ಟೊಂದು ಭಾರೀ ಅಸಮಾನತೆ ತಾಂಡವವಾಡುತ್ತಿದೆ. ವಿದ್ಯಾಭ್ಯಾಸ ದುಬಾರಿಯಾಗಿ ಬಡವರಿಗೆ ಸಿಗುತ್ತಿಲ್ಲ, ಇರುವ ಸರ್ಕಾರಿ ಶಾಲೆಗಳು ಸೌಕರ್ಯಗಳಿಲ್ಲದೆ ಮುಚ್ಚುತ್ತಿವೆ. 1 ವರ್ಷದಲ್ಲಿ 10,000 ರೈತರು ಆತ್ಮಹತ್ಯೆ ಮಾಡಿಕೊಂಡರೆ, ಮಾನಸಿಕ ಖಿನ್ನತೆಯಿಂದ 2022ರಲ್ಲಿ 13,000 ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. 11 ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಿದ್ದಾಳೆ. ಆಸ್ತಿಗಾಗಿ ಮಗ ತಂದೆಯನ್ನು ಸಾಯಿಸಿದ ಅಮಾನುಷ ಘಟನೆ ನಡೆದಿದೆ. ಬೆಲೆಗಳು ಗಗನಕ್ಕೇರುತ್ತಿವೆ, ಸರ್ಕಾರಿ ಆಸ್ಪತ್ರೆಗಳು ನರಕದ ಕೂಪಗಳಾಗಿವೆ. ಕೇವಲ ಎರಡೇ ವರ್ಷದಲ್ಲಿ 3000 ಬಾಣಂತಿಯರು ಸಾವನ್ನಪ್ಪಿದ್ದಾರೆ. ಇಂತಹ ಸಂದರ್ಭದಲ್ಲಿ ಜನ ಹೋರಾಟ ಬೆಳೆಸುವುದು ಅನಿವಾರ್ಯವಾಗಿದೆ. ಆದರೆ ಅವರ ನಡುವೆ ಜಾತಿ–ಕೋಮಿನ ವಿಷಬೀಜ ಬಿತ್ತಿ ಒಗ್ಗಟ್ಟನ್ನು ಮುರಿಯಲಾಗುತ್ತಿದೆ. ಜನರು ಈ ಎಲ್ಲಾ ಭೇದಭಾವಗಳನ್ನು ಮೀರಿ ಒಂದಾಗಿ ಹೋರಾಟಕ್ಕೆ ಮುಂದಾಗಬೇಕು" ಎಂದರು.

ರಾಜ್ಯ ಸೆಕ್ರೆಟೇರಿಯೆಟ್ ಸದಸ್ಯರಾದ ಕಾ. ರಾಮಾಂಜಿನಪ್ಪ ಮಾತನಾಡಿ, "ಅಧಿಕಾರದಲ್ಲಿರುವ ರಾಜ್ಯ–ಕೇಂದ್ರ ಸರ್ಕಾರಗಳು ಅಧಿಕಾರದ ಕಿತ್ತಾಟದಲ್ಲಿ ಮುಳುಗಿವೆ. ಚುನಾವಣೆ ಮೂಲಕ ಗದ್ದುಗೆಯೇರಲು ಕೆಳಮಟ್ಟದ ಪ್ರಚಾರದಲ್ಲಿ ತೊಡಗಿವೆ. 40% ಕಮಿಷನ್ ಬಿಜೆಪಿ ಸರ್ಕಾರ ಅಂತ ಹೇಳಿ ಗ್ಯಾರಂಟಿ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ 50% ಕಮಿಷನ್ ನಲ್ಲಿ ಮುಳುಗಿದ ಅಪಖ್ಯಾತಿಗೊಳಗಾಗಿದೆ. ಗ್ಯಾರಂಟಿಗಳಿಂದ ಬಡವರ–ದುಡಿಯುವ ಜನರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರ ನರೇಗಾಕ್ಕೆ ರೂ. 900 ಕೋಟಿ ಅನುದಾನ ಕಡಿತ ಮಾಡಿದೆ. ಉದ್ಯೋಗ ಸೃಷ್ಟಿಸಲಿಲ್ಲ. ಕೇಂದ್ರದಲ್ಲಿನ ಸರ್ಕಾರ ನೇರವಾಗಿ ದುಡಿಯುವ ಜನರ ಮೇಲೆ ಪ್ರಹಾರ ಮಾಡುತ್ತಿದೆ. ಇಲ್ಲಿ ಕಾಂಗ್ರೆಸ್ ಸರ್ಕಾರ ಸಹ ಅದಕ್ಕೆ ಭಿನ್ನವಾಗಿರದೆ, ರೈತ–ಕಾರ್ಮಿಕರಿಗೆ ಮಾರಕವಾದ ಕಾಯ್ದೆಗಳನ್ನು ಜಾರಿಗೊಳಿಸುತ್ತಿದೆ. ಈ ಎರಡೂ ಸರ್ಕಾರಗಳು ಮಾಲೀಕರ ಪರ ಸರ್ಕಾರಗಳು" ಎಂದು ಟೀಕಿಸಿದರು.

ಪ್ರಮುಖ ಬೇಡಿಕೆಗಳ ಮನವಿಪತ್ರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ನಿಯೋಗವೊಂದು ಭೇಟಿ ಮಾಡಿ ಸಲ್ಲಿಸಿತು. ಈ ಜನಹೋರಾಟದ ಪ್ರತಿಭಟನೆಯ ನೇತೃತ್ವವನ್ನು ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕೆ.ಸೋಮಶೇಖರ್, ಎಂ. ಶಶಿಧರ್, ಎಂ. ಎನ್. ಶ್ರೀರಾಮ್, ಡಾ. ಟಿ. ಎಸ್. ಸುನೀತ್ ಕುಮಾರ್, ಬಿ. ಆರ್. ಅಪರ್ಣ, ವಿ. ಎನ್. ರಾಜಶೇಖರ್, ಬಿ. ರವಿ, ವಿ. ಜ್ಞಾನಮೂರ್ತಿ ಮುಂತಾದವರು ವಹಿಸಿದ್ದರು.

### ಹಕ್ಕೊತ್ತಾಯಗಳು

1. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಿಸಿರುವ ಎಲ್ಲಾ ಬೆಲೆಗಳನ್ನು ಈ ಕೂಡಲೇ ಹಿಂತೆಗೆದುಕೊಳ್ಳಿ.




ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ.ಉಮಾ




ರಾಜ್ಯ ಸಮಿತಿ ಸದಸ್ಯರಾದ ಕಾ. ರಾಮಾಂಜನಪ್ಪ ಆಲ್ದಳ್ಳಿ

2. ಎಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ. ಜೊತೆಗೆ ಅವಶ್ಯಕ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿ.
3. ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಗ್ರಾಮೀಣ ಕೃಷಿ ಕಾರ್ಮಿಕರಿಗೆ ಕೆಲಸದ ದಿನಗಳನ್ನು 200 ಕ್ಕೆ ಹೆಚ್ಚಿಸಿ. ಅವರ ಕೂಲಿಯನ್ನು ರೂ. 600ಕ್ಕೆ ನಿಗದಿಗೊಳಿಸಿ.
4. ಬೆಲೆಕುಸಿತದಿಂದ ಕಂಗಾಲಾಗಿರುವ ರೈತ ಸಮುದಾಯಕ್ಕೆ ಸರಕಾರದಿಂದ ನೆರವು ನೀಡಿ ಮತ್ತು ರೈತರು ಬೆಳೆದ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸಿ.
5. ವಿದ್ಯುತ್ ಮಸೂದೆ–2022 (ತಿದ್ದುಪಡಿ)ನ್ನು ಹಿಂತೆಗೆದುಕೊಳ್ಳಿ. ಸ್ಮಾರ್ಟ್ ಮೀಟರ್ ಅಳವಡಿಕೆ ನಿಲ್ಲಿಸಿ.
6. 6000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ಕೂಡಲೇ ಕೈಬಿಡಿ ಹಾಗೂ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು, ಶಿಕ್ಷಕ ಸಿಬ್ಬಂದಿಯನ್ನು ಒದಗಿಸಿ.
7. ನಿರುದ್ಯೋಗದಿಂದ ತತ್ತರಿಸಿರುವ ಯುವಜನರಿಗೆ ಉದ್ಯೋಗ ನೀಡಲು ತಕ್ಷಣವೇ ಸರಕಾರಿ ಇಲಾಖೆಗಳ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ಕೆ.ಪಿ.ಎಸ್.ಸಿ ಸೇರಿದಂತೆ ನೇಮಕಾತಿಯಲ್ಲಿ ನಡೆಯುವ ಎಲ್ಲಾ ಹಂತದ ಭ್ರಷ್ಟಾಚಾರವನ್ನು ಮಟ್ಟ ಹಾಕಿ.
8. ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಘೋಷಿಸಿ. ಅಲ್ಲಿಯವರೆಗೆ ಕನಿಷ್ಠ ವೇತನ ಪಾವತಿಸಿ. ಎಲ್ಲಾ ಇಲಾಖೆಗಳಲ್ಲಿರುವ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಿ.
9. ಈ ಕೂಡಲೇ ಹೆಚ್ಚಿಸಿರುವ ದುಬಾರಿ ಬೆಂಗಳೂರು ಮೆಟ್ರೋ ದರಗಳನ್ನು ಹಿಂತೆಗೆದುಕೊಳ್ಳಿ.
10. ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಶೀಘ್ರವೇ ಪಟ್ಟಾ ಒದಗಿಸಿ.
11. ಮಕ್ಕಳ ಮಾನಸಿಕ ಆರೋಗ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆಯನ್ನು ಕಾಪಾಡಲು ಎಲ್ಲಾ ಆನ್‌ಲೈನ್ ಅಶ್ಲೀಲ ಕಾರ್ಯಕ್ರಮಗಳನ್ನು ಈ ಕೂಡಲೇ ನಿಲ್ಲಿಸಿ. ■




ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜನಸ್ತೋಮ

## ಎಸ್‌ಯುಸಿಐ(ಸಿ) ಕರ್ನಾಟಕ ವೆಬ್ ಸೈಟ್ ಲೋಕಾರ್ಪಣೆ:

...1ನೇ ಪುಟದಿಂದ

ಶೋಷಿತ ಜನತೆ ಸಂಘಟಿತರಾಗುವುದು ಅತ್ಯಾವಶ್ಯ. ಈ ನಿಟ್ಟಿನಲ್ಲಿ ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ನಾಯಕರಾದ ಕಾ. ಶಿವದಾಸ್ ಘೋಷ್‌ರವರು ಸ್ಥಾಪಿಸಿರುವ ನಮ್ಮ ಪಕ್ಷ ಎಸ್‌ಯುಸಿಐ(ಸಿ) ಶ್ರಮಿಸುತ್ತಿದೆ. ಕಾ. ಶಿವದಾಸ್ ಘೋಷ್‌ರವರ ಚಿಂತನೆಗಳ ಆಧಾರದಲ್ಲಿ ದೇಶದಾದ್ಯಂತ ನಮ್ಮ ಪಕ್ಷ ಬಲಿಷ್ಠವಾಗಿ ಬೆಳೆಯುತ್ತಿದೆ, ಜೊತೆಗೆ ಅದರ ಮುಂದಳಗಳಾದ ಕಾರ್ಮಿಕ ಸಂಘಟನೆ, ಎಐಯುಟಿಯುಸಿ, ರೈತ–ಕೃಷಿ ಕಾರ್ಮಿಕ ಸಂಘಟನೆ, ಎಐಕೆಕೆಎಂಎಸ್, ವಿದ್ಯಾರ್ಥಿ ಸಂಘಟನೆ, ಎಐಡಿಎಸ್‌ಓ, ಯುವಜನ ಸಂಘಟನೆ, ಎಐಡಿವೈಓ ಮತ್ತು ಮಹಿಳಾ ಸಂಘಟನೆ, ಎಐಎಂಎಸ್‌ಎಸ್, ಇವುಗಳು ದೇಶದಾದ್ಯಂತ ಕ್ರಾಂತಿಕಾರಿ ಬಾವುಟಗಳನ್ನು ಎತ್ತಿ ಹಿಡಿದು ಹೋರಾಟಗಳನ್ನು ಕಟ್ಟುತ್ತಿವೆ. ಜನರು ನಮ್ಮ ಪಕ್ಷ ಮತ್ತು ಸಂಘಟನೆಗಳತ್ತ, ಮಾರ್ಕ್ಸ್‌ವಾದ–ಲೆನಿನ್‌ವಾದ–ಕಾ.ಶಿವದಾಸ್ ಘೋಷ್ ಚಿಂತನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಕೊಳೆತು ನಾರುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ತುತ್ತೂರಿಗಳಾದ ಮಾಧ್ಯಮಗಳು ಬರೀ ಸುಳ್ಳು ಪ್ರಚಾರದ ಮೊರೆ ಹೋಗಿರುವಾಗ, ನಾವು ನ್ಯಾಯ ಮತ್ತು ಸತ್ಯವನ್ನು ಎತ್ತಿ ಹಿಡಿಯುತ್ತಿದ್ದೇವೆ ಎಂಬ ಕಾರಣದಿಂದ ಜನರು ನಮ್ಮ ವಿಚಾರವನ್ನು ತಿಳಿಯಲು ಉತ್ಸುಕರಾಗುತ್ತಿದ್ದಾರೆ. ಹಾಗಾಗಿ ನಮ್ಮ ಮುಖಪತ್ರಿಕೆ ಕಾರ್ಮಿಕ ದೃಷ್ಟಿಕೋನ, ಅದರ ಫೇಸ್‌ಬುಕ್, ಯೂಟ್ಯೂಬ್‌ಗಳ ಜೊತೆಗೆ ನಮ್ಮ ಪಕ್ಷದ ವೆಬ್ ಸೈಟ್ ಸಹ ನಮ್ಮ ಪಕ್ಷದ ಕ್ರಾಂತಿಕಾರಿ ಚಿಂತನೆಗಳನ್ನು ಜನರ ಬಳಿ ಕೊಂಡೊಯ್ಯಲಿದೆ. ದೇಶ–ವಿದೇಶಗಳ ವಿದ್ಯಮಾನಗಳ ಕುರಿತಾದ ಮಾರ್ಕ್ಸ್‌ವಾದಿ ವಿಶ್ಲೇಷಣೆಗಳು, ನಮ್ಮ ಹೇಳಿಕೆಗಳು, ನಮ್ಮ ಹೋರಾಟದ ವರದಿಗಳು, ಕಾ. ಶಿವದಾಸ್ ಘೋಷ್‌ರವರ ಚಿಂತನೆಗಳು, ನಮ್ಮ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್‌ರವರ ಮಾರ್ಗದರ್ಶನ, ಇವೆಲ್ಲವೂ ಕನ್ನಡನಾಡಿನ ಜನರಿಗೆ ತಲುಪಲಿ ಎಂಬ ಉದ್ದೇಶದಿಂದ ಈ ವೆಬ್‌ಸೈಟ್ ಅನ್ನು ಲೋಕಾರ್ಪಣೆ ಮಾಡುತ್ತಿದ್ದೇನೆ.

**ಕಾರ್ಮಿಕ ವರ್ಗದ ಕ್ರಾಂತಿ ಚಿರಾಯುವಾಗಲಿ!**

**ಕಾರ್ಮಿಕವರ್ಗದ ಮಹಾನ್ ನಾಯಕರಾದ ಕಾ. ಶಿವದಾಸ್ ಘೋಷ್ ಲಾಲ್ ಸಲಾಂ!"**

ಈ ಆನ್‌ಲೈನ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾ. ಬಿ.ರವಿ ವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾ.ಕೆ. ಉಮಾ, ರಾಜ್ಯ ಸಮಿತಿಯ ಇತರ ಸದಸ್ಯರಾದ ಕಾ.ಎಂ.ಎನ್.ಶ್ರೀ ರಾಮ್, ಕಾ. ವಿ.ಜ್ಞಾನಮೂರ್ತಿ ಉಪಸ್ಥಿತರಿದ್ದರು. ■

## ಚಾಮರಾಜನಗರ: ವಸತಿ ನಿಲಯ ಕಾರ್ಮಿಕರ ಜಿಲ್ಲಾ ಸಮಾವೇಶ




ವಸತಿನಿಲಯ ಕಾರ್ಮಿಕರ ಜಿಲ್ಲಾಮಟ್ಟದ ಸಮಾವೇಶದಲ್ಲಿ, ಚಾಮರಾಜನಗರ ಜಿಲ್ಲೆಯಾದ್ಯಂತದ ಸಮಾಜ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಂದ ನಡೆಸಲ್ಪಡುವ ವಿವಿಧ ಹಾಸ್ಟೆಲ್‌ಗಳು, ವಸತಿಶಾಲೆಗಳು ಮತ್ತು ಆಶ್ರಮಶಾಲೆಗಳಲ್ಲಿರುವ ಹೊರಗುತ್ತಿಗೆ ಕಾರ್ಮಿಕರು ಪಾಲ್ಗೊಂಡಿದ್ದರು. ಚಾಮರಾಜೇಶ್ವರ ದೇವಸ್ಥಾನದಿಂದ ರಾಚಯ್ಯ ಜೋಡಿ ರಸ್ತೆ ಮೂಲಕ ರೋಟರಿ ಸಭಾಂಗಣದವರೆಗೆ ಕಾರ್ಮಿಕರ ಮೆರವಣಿಗೆಯ ಬಳಿಕ ರೋಟರಿ ಸಭಾಂಗಣದಲ್ಲಿ ಸಮಾವೇಶ ನಡೆಯಿತು. ಸಮಾವೇಶಕ್ಕೆ ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷರಾದ ಕಾ. ಚಂದ್ರಶೇಖರ್ ಮೇಟಿ, ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘ(ರಿ)ದ ರಾಜ್ಯ ಜಂಟಿ ಕಾರ್ಯದರ್ಶಿ ಕಾ. ಮುದ್ದುಕೃಷ್ಣ, ಮೈಸೂರು ಜಿಲ್ಲಾ ಉಪಾಧ್ಯಕ್ಷರಾದ ಕಾ. ರಾಜು, ಹಾಗೂ ಚಾಮರಾಜನಗರ ಕಾರ್ಮಿಕ ಇಲಾಖೆಯ ಕಾರ್ಮಿಕ ಅಧಿಕಾರಿಗಳಾದ ಶ್ರೀಮತಿ ಸವಿತಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಕೆಜಿಬಿವಿ ಗುತ್ತಿಗೆ ನೌಕರರ ರಾಜ್ಯ ಮಟ್ಟದ ಸಮಾವೇಶ




ಸಮಾವೇಶವನ್ನು ಉದ್ದೇಶಿಸಿ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ ಸೋಮಶೇಖರ್ ಮಾತನಾಡುತ್ತಿರುವುದು

ರಾಜ್ಯದ ಶಿಕ್ಷಣ ಇಲಾಖೆ ಸಮಗ್ರ ಶಿಕ್ಷಣ ಅಭಿಯಾನ, ಕರ್ನಾಟಕ ಅಡಿಯಲ್ಲಿ ಬರುವ ಕೆಜಿಬಿವಿ, ಕೆಕೆಜಿಬಿವಿ ಮತ್ತು ಇತರ ವಸತಿಶಾಲೆ, ವಸತಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಗುತ್ತಿಗೆ ನೌಕರರು ಹಿಂದುಳಿದ ಪ್ರದೇಶಗಳ ಅಂಚಿನಲ್ಲಿರುವ ಸಮುದಾಯಗಳಲ್ಲಿ ಬಾಲಕಿಯರಿಗೆ ಶಿಕ್ಷಣವನ್ನು ಖಾತ್ರಿಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಹೊರಗುತ್ತಿಗೆ ಮೂಲಕ ಸೇವೆ ಸಲ್ಲಿಸುತ್ತಿರುವ ಈ ಸಿಬ್ಬಂದಿಗಳಿಗೆ ವೇತನ ಹೆಚ್ಚಳ, ಸೇವಾಭದ್ರತೆ ಮತ್ತು ಶಾಸನಬದ್ಧ ಸೌಲಭ್ಯಗಳಿಗೆ ಆಗ್ರಹಿಸಿ ನಡೆದ ರಾಜ್ಯ ಮಟ್ಟದ ಸಮಾವೇಶದಲ್ಲಿ ವಿವಿಧ ಜಿಲ್ಲೆಗಳಿಂದ 300 ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು.



## ಎನ್‌ಸಿಇಆರ್‌ಟಿ ಪಠ್ಯದಿಂದ ಮೊಘಲ್ ಇತಿಹಾಸಕ್ಕೆ ಕತ್ತರಿ: ಎಸ್‌ಯುಸಿಐ(ಸಿ) ಖಂಡನೆ!

ಎನ್‌ಸಿಇಆರ್‌ಟಿ ಪಠ್ಯದಿಂದ ಮೊಘಲ್ ಇತಿಹಾಸವನ್ನು ಕಿತ್ತೊಗೆದಿರುವ ಸರ್ಕಾರದ ನಡೆಯನ್ನು ಖಂಡಿಸಿ ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಈ ಕೆಳಕಂಡ ಹೇಳಿಕೆ ನೀಡಿದ್ದಾರೆ:

"ಮೊಘಲರು ಮತ್ತು ದೆಹಲಿ ಸುಲ್ತಾನರ ಬಗೆಗಿನ ಎಲ್ಲಾ ಉಲ್ಲೇಖಗಳನ್ನು ಎನ್‌ಸಿಇಆರ್‌ಟಿ ಪಠ್ಯದಿಂದ ತೆಗೆದುಹಾಕಿರುವುದನ್ನು ನಾವು ಅತ್ಯುಗ್ರವಾಗಿ ಖಂಡಿಸುತ್ತೇವೆ. ಇತಿಹಾಸದ ಈ ಭಾಗವನ್ನು ಕಿತ್ತೊಗೆದು ಅದರ ಜಾಗದಲ್ಲಿ "ಪವಿತ್ರ ಭೂಗೋಳ" ಎಂಬ ಶೀರ್ಷಿಕೆಯಡಿ ಹಿಂದೂ ಸಂಸ್ಥಾನಗಳ ಕುರಿತಾಗಿ ಹಾಗೂ ಮಹಾ ಕುಂಭ, ಎರಡು 'ಜ್ಯೋತಿರ್ಲಿಂಗಗಳು', 'ಚಾರ್ ಧಾಮ್ ಯಾತ್ರೆ' , 'ಶಕ್ತಿ ಪೀಠ' ಗಳ ಕುರಿತಾಗಿ ವಿಶೇಷ ಉಲ್ಲೇಖ ನೀಡುವುದರ ಹಿಂದೆ ಶಿಕ್ಷಣವನ್ನು ಕೇಸರೀಕರಣಗೊಳಿಸುವ ಉದ್ದೇಶ ಸ್ಪಷ್ಟವಾಗಿ ಗೋಚರವಾಗುತ್ತದೆ.

ಅಲ್ಲದೆ, ಮೊಘಲ್ ಚಕ್ರವರ್ತಿ ಬಾಬರ್ ಅವರನ್ನು ಆಕ್ರಮಣಕಾರ ಎಂದು ಉಲ್ಲೇಖ ಮಾಡಲಾಗಿದ್ದು, ಬ್ರಿಟಿಷ್ ಆಕ್ರಮಣಕಾರರ ಬಗ್ಗೆ ಅದೇ ಪದ ಬಳಕೆ ಮಾಡಿಲ್ಲ.

ಇತಿಹಾಸ ಇತಿಹಾಸವೇ! ವ್ಯಕ್ತಿಗಳ ಇಷ್ಟಾನಿಷ್ಟಗಳಿಗಿಂತಲೂ ಮಿಗಿಲಾದದ್ದು. ಭಾರತೀಯ ಇತಿಹಾಸದಿಂದ ಬ್ರಿಟಿಷ್ ಆಳ್ವಿಕೆಯ ಅವಧಿಯನ್ನು ಯಾರಿಂದಾದರೂ ಅಳಿಸಲಾದೀತೆ? ಇತಿಹಾಸವು ಸಮಾಜದ ಬೆಳವಣಿಗೆಯ ಪುಟಗಳಲ್ಲಿನ ಅಚ್ಚಳಿಯದ ಸತ್ಯ. ಆಡಳಿತಗಾರನೊಬ್ಬನ ಇಚ್ಛೆಯಂತೆ ಅದನ್ನು ಅಳಿಸುವುದು ಅಸಾಧ್ಯ. ವಿದ್ಯಾರ್ಥಿಗಳನ್ನು ಇತಿಹಾಸದ ಪಾಠಗಳಿಂದ ವಂಚಿತರನ್ನಾಗಿಸುವುದು ಹಾಗೂ ತಿರುಚಲಾಗಿರುವ ಅಸತ್ಯಗಳನ್ನು ಅವರ ತಲೆಗೆ ತುಂಬುವುದು ಆಡಳಿತ ವ್ಯವಸ್ಥೆಯ ಕೊಳಕು ಕೋಮುವಾದಿ ಹಿಂದುತ್ವ ಕಾರ್ಯಸೂಚಿಯನ್ನು ಜಾರಿಗೊಳಿಸುವ ಹೆಜ್ಜೆಯಾಗಿದೆ. ಶಿಕ್ಷಣವನ್ನು ನೀಚ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತಿರುವ ಆಳುವ ಬಂಡವಾಳಶಾಹಿ ವರ್ಗ ಹಾಗೂ ಅದರ ಸೇವಕರ ವಿರುದ್ಧ ಜನತೆ ಪ್ರತಿಭಟಿಸಬೇಕೆಂದು, ಆ ಮೂಲಕ ವಿದ್ಯಾರ್ಥಿಗಳ ಹಿತ ಕಾಯಬೇಕೆಂದು ಎಲ್ಲಾ ಶಿಕ್ಷಣಪ್ರಿಯ ಜನತೆಗೆ ಈ ಮೂಲಕ ಕರೆ ನೀಡುತ್ತೇವೆ."

## ಸಿಪಿಐ (ಮಾವೋವಾದಿ) ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ 26 ಆದಿವಾಸಿ ಜನರ ಹತ್ಯೆ–ಎಸ್‌ಯುಸಿಐ(ಸಿ) ತೀವ್ರ ಖಂಡನೆ

ಸಿಪಿಐ (ಮಾವೋವಾದಿ) ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ 26 ಆದಿವಾಸಿ ಜನರ ಹತ್ಯೆಯನ್ನು ತೀವ್ರವಾಗಿ ಖಂಡಿಸಿ ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ನೀಡಿರುವ ಹೇಳಿಕೆ:

"ಛತ್ತೀಸ್‌ಗಢದಲ್ಲಿ ನಡೆದಿದೆ ಎನ್ನಲಾದ 'ಎನ್‌ಕೌಂಟರ್' ನಲ್ಲಿ ಸಿಪಿಐ (ಮಾವೋವಾದಿ) ಪ್ರಧಾನ ಕಾರ್ಯದರ್ಶಿ ಹಾಗೂ 26 ಬಡ ಆದಿವಾಸಿ ಜನರ ನ್ಯಾಯಾಂಗೇತರ, ಕ್ರೂರ ಹತ್ಯೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಸಿಪಿಐ–ಮಾವೋವಾದಿ ಗುಂಪಿನ ರಾಜಕೀಯ ವಿಧಾನಗಳೊಂದಿಗೆ ನಮಗೆ ಮತಭೇದಗಳಿದ್ದರೂ, ಈ ಘೋರ ಕೊಲೆಯನ್ನು ಯಾವುದೇ ಪ್ರಜಾತಾಂತ್ರಿಕ ಮನೋಭಾವದ ವ್ಯಕ್ತಿಯು ಯಾವ ರೀತಿಯಲ್ಲೂ ಒಪ್ಪುವುದಿಲ್ಲ. ಈ ಭೀಕರ ಘಟನೆಯನ್ನು ವಿರೋಧಿಸಿ ಎಲ್ಲಾ ಪ್ರಗತಿಶೀಲ ಮನೋಭಾವದ ಜನರು ತಮ್ಮ ಪ್ರತಿಭಟನೆಯ ದನಿಯನ್ನು ಎತ್ತುವಂತೆ ಮನವಿ ಮಾಡುತ್ತೇವೆ. ಅಲ್ಲದೆ, ಸತ್ಯವನ್ನು ಹೊರತರಲು ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸುತ್ತೇವೆ.

## ದಾವಣಗೆರೆ: ಬೀದಿಬದಿ ವ್ಯಾಪಾರಿಗಳಿಂದ ಮನವಿ ಸಲ್ಲಿಕೆ



ದಾವಣಗೆರೆ: 26.04.2025 ರಂದು, ದಾವಣಗೆರೆಯ ಕೆ.ಆರ್ ಮಾರುಕಟ್ಟೆಯ ರಾಜ್ಯ ಬೀದಿಬದಿ ವ್ಯಾಪಾರಸ್ಥರ ಸಂಘದ ವತಿಯಿಂದ ಸಂಘಟಿಸಲ್ಪಟ್ಟ ವಿಭಾಗೀಯ ಮಟ್ಟದ ಬೀದಿಬದಿ ವ್ಯಾಪಾರಸ್ಥರ ಆಗ್ರಹ ಸಮಾವೇಶಕ್ಕೆ ಚಿತ್ರದುರ್ಗ, ಶಿವಮೊಗ್ಗ, ಹಾವೇರಿ ಹಾಗೂ ಧಾರವಾಡ ಮುಂತಾದ ವಿವಿಧ ಜಿಲ್ಲೆಗಳಿಂದ ವ್ಯಾಪಾರಸ್ಥರು ಆಗಮಿಸಿದ್ದರು. 8.5.2025 ರಂದು, ಸಂಘದ ಪದಾಧಿಕಾರಿಗಳನ್ನು ಒಳಗೊಂಡ ತಂಡವು ಪೌರಾಡಳಿತ ಹಾಗೂ ಹಜ್ ಸಚಿವರಾದ ಶ್ರೀ. ರಹೀಂ ಖಾನ್‌ರವರನ್ನು ಭೇಟಿ ಮಾಡಿ, ಕೇಂದ್ರ ಸರ್ಕಾರದ ಬೀದಿಬದಿ ವ್ಯಾಪಾರಸ್ಥರ ಜೀವನೋಪಾಯ ಮತ್ತು ನಿಯಂತ್ರಣ ಕಾಯ್ದೆ 2014 ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಮತ್ತು 2020ರಲ್ಲಿ ತಂದಿರುವ ಅಧಿನಿಯಮವನ್ನು ಕೈ ಬಿಟ್ಟು ಹೊಸ ನಿಯಮವನ್ನು ರೂಪಿಸುವಂತೆ ಮನವಿ ಸಲ್ಲಿಸಿತು. ಸಚಿವರು ಈ ಅಧಿನಿಯಮದ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸುವ ಮತ್ತು ಬೀದಿ ಬದಿ ವ್ಯಾಪಾರಸ್ಥರಿಗೆ ಶೀಘ್ರದಲ್ಲೇ ಸ್ಮಾರ್ಟ್ ಕಾರ್ಡನ್ನು ನೀಡುವಂತೆ ಆದೇಶ ನೀಡುವ ಭರವಸೆ ನೀಡಿದ್ದಾರೆ.

## ತುಮಕೂರು: ಎಐಎಂಎಸ್‌ಎಸ್ ವತಿಯಿಂದ ಮಕ್ಕಳ ಶಿಬಿರ




17.5.2025: ತುಮಕೂರು ಜಿಲ್ಲೆಯ ಯಲ್ಲಾಪುರದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಘಟಕ ಸಂಘಟಿಸಿದ್ದ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ರಾಜ್ಯ ಸಮಿತಿ ಸದಸ್ಯರಾದ ಕಾ. ಹರಿಣಿ ಆಚಾರ್ಯ ಉದ್ಘಾಟಿಸುತ್ತಾ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಹೊರಾಂಗಣ ಆಟಗಳಿಂದ ದೂರ ಉಳಿದು ಬೇರೆ ಅವಕಾಶಗಳಿಲ್ಲದೆ, ಮೊಬೈಲ್, ಟಿವಿ, ಸಮೂಹ ಮಾಧ್ಯಮಗಳ ಗೀಳಿಗೆ ಒಳಗಾಗಬೇಕಾದ ಅನಿವಾರ್ಯತೆ ಉಂಟಾಗಿದೆ. ಇಂತಹ ವಾತಾವರಣದಿಂದ ಹೊರಬರಲು ಮೌಲ್ಯಯುತ ನೀತಿ ಕಥೆಗಳು, ಸಮಾಜ ಸುಧಾರಕರ, ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಗಳು ಅವಶ್ಯಕವಾಗಿವೆ. ಇಂತಹ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡ ಶಿಬಿರಗಳು ಮಕ್ಕಳಿಗೆ ಸಹಾಯಕವಾಗಿವೆ ಎಂದರು. ಶಿಬಿರದಲ್ಲಿ ಕೆಲವು ಪೇಪರ್ ಕ್ರಾಫ್ಟ್‌ಗಳನ್ನು ಚಿತ್ರಕಲಾ ಶಿಕ್ಷಕರಾದ ಗಣೇಶ ಗುಡಿಯವರು ಮಕ್ಕಳಿಂದ ಮಾಡಿಸಿದರು. ನೆನಪಿನ ಶಕ್ತಿಯನ್ನು ಹೆಚ್ಚಿಸುವ ಆಟಗಳನ್ನು ಹಾಗೂ ಹೊರಾಂಗಣ ಕ್ರೀಡೆಗಳನ್ನು ಆಡಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಕಾ.ಕಲ್ಯಾಣಿ ಎಂ.ವಿ. ವಹಿಸಿಕೊಂಡಿದ್ದರು.

## ಎಳೆಯರಲ್ಲಿ ಉನ್ನತ ಚಾರಿತ್ರ್ಯ–ಸಾಮಾಜಿಕ ಕಳಕಳಿ ಉದ್ದೀಪಿಸಿದ

# ಎಐಡಿಎಸ್ಓ ಸಂಘಟಿತ ಮಕ್ಕಳ ಬೇಸಿಗೆ ಶಿಬಿರಗಳು







ಸಾಂಸ್ಕೃತಿಕವಾಗಿ ತೀವ್ರ ಬಿಕ್ಕಟ್ಟಿನಲ್ಲಿರುವ ಸಮಾಜದಲ್ಲಿ, ಮೊಬೈಲ್‌ನ ಗೀಳಿಗೆ ಬಲಿಬಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರವಾಗುವ ಅಶ್ಲೀಲತೆ, ಹಿಂಸೆಗಳ ಸತತ ವೀಕ್ಷಣೆಯ ಪರಿಣಾಮವಾಗಿ ಎಳೆಯರು ಸಹ ಲೈಂಗಿಕ ವಿಕೃತಿಗೆ ಒಳಪಟ್ಟು, ಅತ್ಯಾಚಾರ, ಕೊಲೆಗಳಂತಹ ಅಪರಾಧಗಳನ್ನು ಎಸಗುವ, ಮದ್ಯಪಾನ–ಮಾದಕವಸ್ತುಗಳ ದುಶ್ಚಟಗಳೊಂದಿಗೆ, ಆನ್‌ಲೈನ್ ಗೇಂನ ಚಟಕ್ಕೆ ಬಲಿಯಾಗುವ ದುರಂತ ನಮ್ಮ ಮುಂದಿದೆ. ಮಕ್ಕಳಲ್ಲಿ ಉನ್ನತ ಮೌಲ್ಯಗಳು ಹಾಗೂ ಆದರ್ಶಗಳ ಕೊರತೆಯೇ ಈ ಪರಿಸ್ಥಿತಿಗೆ ಕಾರಣ ಎಂಬುದು ಸುಸ್ಪಷ್ಟ. ಹಾಗಾಗಿ, ಎಐಡಿಎಸ್‌ಓ, ಮಕ್ಕಳಲ್ಲಿರುವ ಸಹಜ ಪ್ರತಿಭೆಗಳನ್ನು ಗುರುತಿಸಿ, ನೀರೆ–ರೆದು ಪೋಷಿಸಲು, ವಿಜ್ಞಾನ, ಉನ್ನತ ಸಂಸ್ಕೃತಿ ಹಾಗೂ ಉನ್ನತ ಮೌಲ್ಯಗಳ ಬಗ್ಗೆ, ವಿವೇಕಾನಂದ, ಭಗತ್ ಸಿಂಗ್, ನೇತಾಜಿ ಸುಭಾಷ್‌ಚಂದ್ರ ಬೋಸ್, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಹೀಗೆ ಅನೇಕ ಆದರ್ಶ ವ್ಯಕ್ತಿಗಳ ಕುರಿತು ಆಕರ್ಷಣೆ ಮೂಡಿಸುತ್ತಾ, ಅವರಲ್ಲಿ ಉನ್ನತ ಚಾರಿತ್ರ್ಯವನ್ನು ಬೆಳೆಸುವ ದೃಷ್ಟಿಯಿಂದ ಇಡೀ ರಾಜ್ಯಾದ್ಯಂತ ಶಾಲೆ, ಹಳ್ಳಿ, ಬಡಾವಣೆಗಳ ಮಟ್ಟದಲ್ಲಿ ಮಕ್ಕಳ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿತ್ತು. ಶಿಬಿರದಲ್ಲಿ ಮಹಾನ್ ವ್ಯಕ್ತಿಗಳ ಕುರಿತು ಚರ್ಚೆ ನಡೆಸಲಾಯಿತು, ಸಾಮಾಜಿಕ ಕಳಕಳಿಯುಳ್ಳ ಸಿನಿಮಾ ಪ್ರದರ್ಶನ ಮಾಡಲಾಯಿತು, ಪ್ರಗತಿಪರ ಹಾಡುಗಳು, ನೃತ್ಯ ಹಾಗೂ ನಾಟಕಗಳನ್ನು ಕಲಿಸಲಾಯಿತು. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಹಿನ್ನೆಲೆಯಲ್ಲಿ ಪವಾಡ ರಹಸ್ಯ ಬಯಲು ಕಾರ್ಯಕ್ರಮವನ್ನು ಯೋಜಿಸಲಾಗಿತ್ತು. ಕ್ರಿಯಾತ್ಮಕವಾಗಿ ನಡೆದ ಈ ಚಟುವಟಿಕೆಗಳಲ್ಲಿ ಮಕ್ಕಳು ಬಹಳ ಹರ್ಷದಿಂದ ಪಾಲ್ಗೊಂಡು ಶಿಬಿರದ ಉದ್ದೇಶವನ್ನು ಯಶಸ್ವಿಗೊಳಿಸಿದರು. ■







# ಜುಲೈ 9ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಿ!

## ಕೇಂದ್ರ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಟ ನಡೆಸಲು ಜನತೆಗೆ ಎಸ್ ಯುಸಿಐ (ಕಮ್ಯುನಿಸ್ಟ್) ಪಕ್ಷದ ಮನವಿ

ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು (ಜೆಸಿಟಿಯು) 2025ರ ಜುಲೈ 9 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. 'ಸಂಯುಕ್ತ ಕಿಸಾನ್ ಮೋರ್ಚಾ' (SKM) ಈ ಸಾರ್ವತ್ರಿಕ ಮುಷ್ಕರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ದುಡಿಯುವ ಜನತೆಯ ಈ ಕೆಳಗಿನ ಬೇಡಿಕೆಗಳನ್ನು ಈ ಮುಷ್ಕರವು ಎತ್ತಿಹಿಡಿದಿದೆ:

1. ಹೋರಾಟದಿಂದ ಗಳಿಸಿದ್ದ 29 ಕಾರ್ಮಿಕ ಕಾನೂನುಗಳನ್ನು ಹಿಂಪಡೆದು ಜಾರಿಗೊಳಿಸಿರುವ ಕಾರ್ಮಿಕ ವಿರೋಧಿ, ಬಂಡವಾಳಶಾಹಿ ಪರ 4 ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಿ!
2. ಸಾರ್ವಜನಿಕ ವಲಯಗಳು ಮತ್ತು ಸರ್ಕಾರಿ ಉದ್ಯಮಗಳ ಖಾಸಗೀಕರಣವನ್ನು ನಿಲ್ಲಿಸಿ.
3. ಖಾಸಗೀಕರಣದ ಹೊಸ ಸ್ವರೂಪವಾದ 'ರಾಷ್ಟ್ರೀಯ ಮಾನಿಟೈಸೇಷನ್ ಪೈಪ್‌ಲೈನ್' ಅನ್ನು ರದ್ದುಗೊಳಿಸಿ.
4. ವಿದ್ಯುತ್ (ತಿದ್ದುಪಡಿ) ಮಸೂದೆ –2023ನ್ನು ಹಿಂಪಡೆಯಿರಿ ಮತ್ತು ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯನ್ನು ನಿಲ್ಲಿಸಿ.
5. ಕೆಲಸದ ಸಮಯವನ್ನು ಹೆಚ್ಚಿಸದಿರಿ – ದಿನಕ್ಕೆ 8 ಗಂಟೆ ಮತ್ತು ವಾರಕ್ಕೆ 48 ಗಂಟೆಗಳ ಕೆಲಸದ ಅವಧಿಯನ್ನು ಖಾತ್ರಿಪಡಿಸಿ.
6. ಶಾಶ್ವತ ಉದ್ಯೋಗಗಳ ಕಡಿತಗೊಳಿಸುವಿಕೆಯನ್ನು ಕೈಬಿಡಿ.
7. ನೌಕರ ವಿರೋಧಿ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ/ಏಕೀಕೃತ ಪಿಂಚಣಿ ಯೋಜನೆಗಳನ್ನು ಹಿಂಪಡೆಯಿರಿ ಮತ್ತು ಬೇಷರತ್ತಾಗಿ ಎಲ್ಲಾ ಪಿಂಚಣಿದಾರರಿಗೆ 'ಹಳೆಯ ಪಿಂಚಣಿ ಯೋಜನೆ' (OPS) ಯನ್ನು ಜಾರಿಗೊಳಿಸಿ.
8. ಗುತ್ತಿಗೆ ಪದ್ಧತಿ, ಅನಿಗದಿತ ಅವಧಿಯ ಕೆಲಸ ಮತ್ತು 'ನಿಶ್ಚಿತಾವಧಿ ಉದ್ಯೋಗ'ದಂತಹ ಕರಾಳ ಕ್ರಮಗಳನ್ನು ನಿಲ್ಲಿಸಿ.
9. ಎಲ್ಲಾ ಸ್ಕೀಂ ಕಾರ್ಮಿಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಮತ್ತು ಅದಕ್ಕೆ ಅನುಗುಣವಾಗಿ ಅವರಿಗೆ ಎಲ್ಲಾ ಶಾಸನಬದ್ಧ ಸೌಲಭ್ಯಗಳನ್ನು ಒದಗಿಸಿ.
10. ಎಲ್ಲಾ ವಲಸೆ ಕಾರ್ಮಿಕರಿಗೆ ಸುರಕ್ಷತೆ, ಭದ್ರತೆ ಮತ್ತು ದುಡಿಮೆಗೆ ತಕ್ಕ ವೇತನ ನೀಡಬಲ್ಲ ಶಾಶ್ವತ ಉದ್ಯೋಗ ಒದಗಿಸಿ.
11. ಅಸಂಘಟಿತ ವಲಯದ ಎಲ್ಲಾ ವಿಭಾಗದ ಕಾರ್ಮಿಕರಿಗೆ ಕಲ್ಯಾಣ ಮಂಡಳಿಗಳನ್ನು ರಚಿಸಿ ಮತ್ತು ಅವರಿಗೆ ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸಿ.
12. ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕೆಲಸಗಾರರನ್ನು ಕಾರ್ಮಿಕರೆಂದು ಪರಿಗಣಿಸಿ ಮತ್ತು ಅವರಿಗೆ ಎಲ್ಲಾ ಕಾರ್ಮಿಕ ಕಾನೂನುಗಳ ಅನ್ವಯವನ್ನು ಖಚಿತಪಡಿಸಿ.
13. ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿ, ಉದ್ಯೋಗ ನೀಡುವವರೆಗೂ ನಿರುದ್ಯೋಗ ಭತ್ಯೆ ನೀಡಿ.
14. ಕೆಲಸ ಮಾಡುವ ಹಕ್ಕನ್ನು ಎಲ್ಲರಿಗೂ ಮೂಲಭೂತ ಸಾಂವಿಧಾನಿಕ ಹಕ್ಕನ್ನಾಗಿ ಮಾಡಿ.
15. ಕಾರ್ಮಿಕರಿಗೆ ಯೂನಿಯನ್ ರೂಪಿಸಿಕೊಳ್ಳುವ ಹಕ್ಕು ಹಾಗೂ ಪ್ರಜಾತಾಂತ್ರಿಕ ಹಕ್ಕುಗಳನ್ನು ಖಾತ್ರಿಪಡಿಸಿ.

**ಸಾರ್ವತ್ರಿಕ ಮುಷ್ಕರವು ಈ ಕೆಳಗಿನ ಬೇಡಿಕೆಗಳನ್ನು ಸಹ ಒಳಗೊಂಡಿದೆ:**

1. ಆಹಾರ, ಔಷಧ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಒಳಗೊಂಡಂತೆ ಎಲ್ಲಾ ಸರಕುಗಳ ತೀವ್ರ ಬೆಲೆ ಏರಿಕೆಯನ್ನು ತಡೆಗಟ್ಟಿ.
2. 700 ಕ್ಕೂ ಹೆಚ್ಚು ರೈತರು ತಮ್ಮ ಅಮೂಲ್ಯ ಜೀವಗಳನ್ನು ತ್ಯಾಗ ಮಾಡಿದ, ಒಂದು ವರ್ಷದ ಐತಿಹಾಸಿಕ ರೈತ ಆಂದೋಲನದ ಒತ್ತಡದಿಂದ ಕೇಂದ್ರ ಸರ್ಕಾರವು ಈಗಾಗಲೇ ಹಿಂಪಡೆದ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಹಿಂಬಾಗಿಲಿನಿಂದ ಜಾರಿಗೊಳಿಸಲಾಗುತ್ತಿದೆ. ಇದರ ಷಡ್ಯಂತ್ರವಾಗಿರುವ ರೈತ ವಿರೋಧಿ 'ಕೃಷಿ ಮಾರುಕಟ್ಟೆ ಕುರಿತ ಕರಡು ರಾಷ್ಟ್ರೀಯ ನೀತಿ'ಯನ್ನು ರದ್ದುಗೊಳಿಸಿ.
3. 'C2 + 50%' ಸೂತ್ರದ ಆಧಾರದ ಮೇಲೆ ಶಾಸನಬದ್ಧ ಕನಿಷ್ಠ ಬೆಂಬಲ ಬೆಲೆಯನ್ನು (MSP) ನಿಗದಿಪಡಿಸಿ.
4. ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ಹಿಂಪಡೆಯಿರಿ – ಇದು ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಕೇಂದ್ರೀಕರಿಸಲು, ವಾಣಿಜ್ಯೀಕರಣಗೊಳಿಸಲು ಮತ್ತು ಕೋಮುವಾದೀಕರಣಗೊಳಿಸಲು ಇರುವ ಫ್ಯಾಸಿಸ್ಟ್ ವಿನ್ಯಾಸವಾಗಿದೆ.
5. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಮತ್ತು ಅಪರಾಧಗಳನ್ನು ತಡೆಗಟ್ಟಿ.
6. ಸಮಾಜದ ನೈತಿಕತೆಯನ್ನು ನಾಶಗೊಳಿಸುವ, ಜನಸಾಮಾನ್ಯರ ಮನುಷ್ಯತ್ವವನ್ನೇ ಕಸಿಯುವ, ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಕರ ನೈತಿಕ ಬೆನ್ನೆಲುಬನ್ನು ಮುರಿಯುವ ಸಮೂಹ ಮಾಧ್ಯಮಗಳಲ್ಲಿನ ಅಶ್ಲೀಲತೆಯ ಪ್ರಸಾರವನ್ನು ಮದ್ಯ ಉತ್ಪನ್ನಗಳು, ಮಾದಕ ದ್ರವ್ಯಗಳ ಮಾರಾಟವನ್ನು ನಿಲ್ಲಿಸಿ.

ಸ್ನೇಹಿತರೇ, ದೇಶವು ಸ್ವಾತಂತ್ರ್ಯವನ್ನು ಗಳಿಸಿದ ನಂತರ ಕಳೆದ ಸುಮಾರು 78 ವರ್ಷಗಳ ಜೀವನದ ಕಹಿ ಅನುಭವಗಳು, ಪ್ರಬಲ ಸಂಘಟಿತ ಹೋರಾಟದ ಹೊರತು ದುಡಿಯುವ ಜನರಿಗೆ ಬೇರೆ ದಾರಿಯಿಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ. ನಮ್ಮಂತಹ ಪ್ರಜಾಪ್ರಭುತ್ವದ ದೇಶದಲ್ಲಿ, ಅಸಂಖ್ಯಾತ ಬಡವರು ಮತ್ತು ಅತಿ ಶ್ರೀಮಂತರ ನಡುವಿನ ಅಂತರವು ವೇಗವಾಗಿ ಹೆಚ್ಚುತ್ತಿದೆ. ಕಾರ್ಮಿಕರ ಕಠಿಣ ಶ್ರಮದಿಂದ ಸೃಷ್ಟಿಸಲ್ಪಟ್ಟ ಶೇ 70ರಷ್ಟು ದೇಶದ ಸಂಪತ್ತಿನ ಒಡೆತನವನ್ನು ಜನಸಂಖ್ಯೆಯ ಶೇ 5ರಷ್ಟು ಜನರು ಹೊಂದಿದ್ದಾರೆ. ಕೆಳಮಟ್ಟದ ಶೇ 50% ಜನರು ಕೇವಲ 3% ಸಂಪತ್ತನ್ನು ಹಂಚಿಕೊಂಡಿದ್ದಾರೆ. ಈ ಗಂಭೀರ ಪರಿಸ್ಥಿತಿಯಲ್ಲಿ, ಸಾರ್ವತ್ರಿಕ ಮುಷ್ಕರದ ಕರೆಯು ಅಪಾರ ಮಹತ್ವ ಹೊಂದಿದೆ.

ಆದರೆ, ಪ್ರಬಲ ಸಂಘಟಿತ ಚಳುವಳಿಗಳನ್ನು ಅಭಿವೃದ್ಧಿಪಡಿಸಲು, ದುಡಿಯುವ ಜನರು – ಕಾರ್ಮಿಕರು, ಕೃಷಿ ಕಾರ್ಮಿಕರು, ಬಡ ರೈತರು, ಗ್ರಾಮೀಣ ಮತ್ತು ನಗರ ಕೆಳ ಮಧ್ಯಮ ವರ್ಗ, ಸಾಮಾನ್ಯ ಮಧ್ಯಮ ವರ್ಗ – ಧರ್ಮ, ಜಾತಿ, ಭಾಷೆ, ಪ್ರದೇಶ, ಜನಾಂಗ ಇತ್ಯಾದಿಗಳ ಭೇದವಿಲ್ಲದೆ ಹೋರಾಟದಲ್ಲಿ ಒಂದಾಗುವುದು ಅತ್ಯಗತ್ಯ. ಆಡಳಿತಾರೂಢ ಬಂಡವಾಳಶಾಹಿ ವರ್ಗ ಮತ್ತು ಅದರ ಬಾಲಂಗೋಚಿ ಸರ್ಕಾರಗಳು ತಮ್ಮ ಲಾಭವನ್ನು ಹೆಚ್ಚಿಸುವ ವರ್ಗ ಹಿತಾಸಕ್ತಿಗಾಗಿ ಈ ಐಕ್ಯತೆಯನ್ನು ಮುರಿಯಲು ನಿರಂತರವಾಗಿ ಯತ್ನಿಸುತ್ತವೆ. ವಾಸ್ತವದಲ್ಲಿ, ನಿಜವಾದ ವಿಭಜನೆಯು ಶೋಷಕ ಮತ್ತು ಶೋಷಿತರ ನಡುವೆ, ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವೆ, ಶ್ರೀಮಂತ ಮತ್ತು ಬಡವರ ನಡುವೆ ಇದೆ. ಹಾಗಾಗಿ, ಎಲ್ಲಾ ವಿಭಾಗಗಳ ದುಡಿಯುವ ಜನರು ತಮ್ಮ ಐಕ್ಯತೆಯನ್ನು ಬಲಪಡಿಸಬೇಕು ಮತ್ತು ಅದನ್ನು ತಮ್ಮ ಕಣ್ಮಣಿಯಂತೆ ಕಾಪಾಡಿಕೊಳ್ಳಬೇಕು.

ಸ್ನೇಹಿತರೇ, ಸಾಮಾನ್ಯ ಜನರು ತಮ್ಮ ಹಿತಾಸಕ್ತಿಗಳನ್ನು ಆಳವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ತಮ್ಮ ದೇಶಪ್ರೇಮದ ಭಾವನೆಗಳನ್ನು ಆಳ್ವಿಕರು ರಾಷ್ಟ್ರೀಯ ಯುದ್ಧೋನ್ಮಾದವನ್ನು (jingoism) ಉತ್ತೇಜಿಸುವ ಮೂಲಕ ದುರುಪಯೋಗಪಡಿಸಿಕೊಳ್ಳುವುದನ್ನು ಅರಿಯಬೇಕು. ಇದು ವಿವಿಧ ದೇಶಗಳ ದುಡಿಯುವ ಜನರ ಒಗ್ಗಟ್ಟನ್ನು ಘಾಸಿಗೊಳಿಸುತ್ತದೆ. ಅಮೆರಿಕಾ ಬೆಂಬಲಿತ ಝಿಯೋನಿಸ್ಟ್ ಇಸ್ರೇಲ್, ಪ್ಯಾಲೆಸ್ತೀನ್ ಜನರ ಮೇಲೆ ಹೇರಿದ ಆಕ್ರಮಣಕಾರಿ ಯುದ್ಧ ಮತ್ತು ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಅನುಭವಗಳು, ಯುದ್ಧದಿಂದ ಸಾಮಾನ್ಯ ಜನರ ಜೀವನ ಮತ್ತು ಜೀವನೋಪಾಯವು ನಾಶವಾಗುತ್ತದೆ ಎಂಬುದನ್ನು ಎಲ್ಲರಿಗೂ ಸಾಬೀತುಪಡಿಸಿವೆ. ಇಂದು ಬಂಡವಾಳಶಾಹಿ ವ್ಯವಸ್ಥೆಗೆ ಯುದ್ಧದ ಉದ್ವಿಗ್ನತೆಗಳು, ಸ್ಥಳೀಯ ಯುದ್ಧಗಳು ಬೇಕಾಗಿವೆ, ಆರ್ಥಿಕತೆಯ ಮಿಲಿಟರೀಕರಣದ ಬೇಳೆ ಬೇಯಿಸಿಕೊಳ್ಳಲು, ಯುದ್ಧೋನ್ಮಾದವನ್ನು ಸೃಷ್ಟಿಸುವ ಮೂಲಕ ಜನರ ಗಮನವನ್ನು ಜೀವನದ ಜ್ವಲಂತ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಮತ್ತು ಬೆರಳೆಣಿಕೆಯಷ್ಟು ಬಿಲಿಯನಿಯರ್‌ಗಳ ಅತಿ ಲಾಭದ ಗಳಿಕೆಗೆ ಇದು ಸಹಕಾರಿಯಾಗಿದೆಯಷ್ಟೆ.

ಆದ್ದರಿಂದ, ನಾವು ದುಡಿಯುವ ಜನರಿಗೆ ಮತ್ತು ಎಲ್ಲಾ ವರ್ಗಗಳ ಸಾಮಾನ್ಯ ಜನರಿಗೆ ಧರ್ಮ, ಜಾತಿ, ಭಾಷೆ, ಪ್ರದೇಶಗಳು, ಜನಾಂಗೀಯತೆ ಮುಂತಾದ ಭೇದವಿಲ್ಲದೆ ಸಾಮರಸ್ಯದಿಂದ ಒಂದಾಗಿ ನಿಲ್ಲುವಂತೆ ಮತ್ತು 9 ಜುಲೈ 2025ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು, ಇದರಿಂದಾಗಿ ತಮ್ಮ ಜೀವನದ ನ್ಯಾಯಯುತ ಬೇಡಿಕೆಗಳನ್ನು ಸಾಧಿಸಲು ಮತ್ತಷ್ಟು ವ್ಯಾಪಕ, ಸಂಘಟಿತ, ನಿರಂತರ ಮತ್ತು ಪ್ರಬಲ ಚಳುವಳಿಗಳಿಗೆ ದಾರಿ ಮಾಡಿಕೊಡುವಂತೆ, ಒಡಕು ಸೃಷ್ಟಿಸುವ ಮತ್ತು ಆಂದೋಲನ ವಿರೋಧಿ ಶಕ್ತಿಗಳ ಪಿತೂರಿಗಳನ್ನು ಸೋಲಿಸುವಂತೆ ಜನರಲ್ಲಿ ಮನವಿ ಮಾಡುತ್ತೇವೆ. ■

...1ನೇ ಪುಟದಿಂದ

## ಭಾರತದ ಆರೋಗ್ಯ ವ್ಯವಸ್ಥೆಯನ್ನು ಅಸ್ವಸ್ಥಗೊಳಿಸುತ್ತಿರುವ ನಕಲಿ ಔಷಧಿಗಳ ಹಾವಳಿ; ಗಗನಕ್ಕೇರುತ್ತಿರುವ ಔಷಧದ ಬೆಲೆ!

ಅಮಾನತು ಮಾಡಲಾಗಿತ್ತು. ಆದರೆ, ಕಾರಣೀಭೂತ ಕಂಪನಿಯನ್ನು ವಿಚಾರಣೆಗೂ ಸಹ ಕರೆದಿರಲಿಲ್ಲ. ನಂತರ, ಮೆಡಿಕಲ್ ಸರ್ವಿಸ್ ಸೆಂಟರ್, ಸರ್ವಿಸ್ ಡಾಕ್ಟರ್ಸ್ ಫೋರಂ, ಅಸ್ಪತಾಲ್ ಒ ಜನ್ ಸ್ವಾಸ್ಥ್ಯ ರಕ್ಷಾ ಸಂಘಟನ್ ಮುಂತಾದ ಸಾಮಾಜಿಕ ಸಂಘಟನೆಗಳ ನಿರಂತರ ಪ್ರತಿಭಟನಾ ಒತ್ತಡದಿಂದಾಗಿ, ಟಿಎಂಸಿ ಸರ್ಕಾರ ಆ ಕಂಪನಿಯ ಔಷಧಗಳನ್ನು ನಿಷೇಧಿಸಿತು. ಆದರೆ, ಸ್ವಲ್ಪ ದಿನಗಳ ನಂತರ, ಬಂಗಾಳಿನ ರಾಜ್ಯ ಪ್ರಯೋಗಾಲಯವು ಅವೇ ಕಲಬೆರಕೆ ಔಷಧಗಳನ್ನು ಪಾಸು ಮಾಡಿತು. ಈ ಎಲ್ಲಾ ಗೊಂದಲಗಳು ಆರುವ ಮುನ್ನ, ಕೇಂದ್ರ ಲ್ಯಾಬೊರೆಟರಿಯಿಂದ ರಿಂಗರ್ ಲ್ಯಾಕ್ಟೇಟ್ ಸ್ಯಾಂಪಲ್ಲುಗಳು ಗುಣಪರೀಕ್ಷೆಯಲ್ಲಿ ತೇರ್ಗಡೆಯಾಗದ ವರದಿ ಬಂದಿದೆ. ಇಷ್ಟೇ ಅಲ್ಲದೆ, ಅವಧಿ ಮುಗಿದ ಔಷಧಿಗಳನ್ನು ಅವಧಿಯ ದಿನಾಂಕವನ್ನು ಬದಲಿಸಿ ಮತ್ತೆ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ ಎಂಬುದೂ ತಿಳಿದುಬಂದಿದೆ. ಒಟ್ಟಿನಲ್ಲಿ, ನಕಲಿ, ಕಲಬೆರಕೆ ಹಾಗೂ ಕೆಳದರ್ಜೆ ಔಷಧಗಳು ಮಾರುಕಟ್ಟೆಯನ್ನು ತುಂಬಿವೆ. ಪ್ರತಿ ಬಾರಿಯೂ ಸಾವು ಸಂಭವಿಸದಿದ್ದರೂ ರೋಗಿಗಳಲ್ಲಿ ಅನೇಕ ಬಗೆಯ ದುಷ್ಪರಿಣಾಮಗಳು ಉಂಟಾಗಬಹುದು. ಅವಶ್ಯಕತೆಗಿಂತ ಕಡಿಮೆ ಪ್ರಮಾಣದ ಸಕ್ರಿಯ ಔಷಧಾಂಶಗಳಿದ್ದರೆ, ನಿರೀಕ್ಷಿತ ಪರಿಣಾಮ ಬೀರದೆ, ಚಿಕಿತ್ಸೆ ವಿಫಲವಾಗಬಹುದು. ರೋಗನಿರೋಧಕ ಔಷಧಗಳಲ್ಲಿ ಈ ರೀತಿಯಾದರೆ, ರೋಗನಿರೋಧಕ ಪ್ರತಿರೋಧಕ ಶಕ್ತಿ (antibiotic resistance) ಹರಡಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಧಕ್ಕೆಯುಂಟಾಗುತ್ತದೆ.

ಜನತೆಯ ಜೀವದೊಂದಿಗೆ ಚೆಲ್ಲಾಟವಾಡುತ್ತಿದ್ದೇವೆ ಎಂದು ತಿಳಿದಿದ್ದರೂ ಇಂತಹ ನಕಲಿ ಔಷಧಗಳನ್ನು ಕಂಪೆನಿಗಳು ಏಕೆ ತಯಾರಿಸುತ್ತವೆ? ಇವುಗಳ ಅಪಾಯಕಾರಿ ಪರಿಣಾಮಗಳ ಬಗ್ಗೆ ಅವರಿಗೆ ಗೊತ್ತಿಲ್ಲವೆ? ಸಾರ್ವಜನಿಕ ಹಾಗೂ ಖಾಸಗಿ ಒಡೆತನದ ಫಾರ್ಮಾ ಕಂಪನಿಗಳಲ್ಲಿ, ಗುಣಮಟ್ಟದ ಪರಿವೀಕ್ಷಣೆಗಾಗಿ ತಜ್ಞರು ಇರುತ್ತಾರೆ ಎಂದು ಹೇಳಿಕೊಳ್ಳಲಾಗುತ್ತದೆ. ಔಷಧಗಳ ತಯಾರಿಕೆಗಾಗಿ ಬೇಕಾದ ಒಳ್ಳೆಯ ಕಚ್ಚಾ ಸಾಮಗ್ರಿಗಳನ್ನು ದೊರಕಿಸಲು ಪ್ರತ್ಯೇಕ ಸಂಶೋಧನಾ ಹಾಗೂ ಅಭಿವೃದ್ಧಿ ಇಲಾಖೆಗಳು ಕಾರ್ಯನಿರ್ವಹಿಸುತ್ತವೆ ಎಂದೂ ಹೇಳಿಕೊಳ್ಳಲಾಗುತ್ತದೆ. ಹೀಗಿದ್ದರೂ, ಇಂತಹ ಕುಕೃತ್ಯಕ್ಕೆ ಕೈಹಾಕಲು ಕಾರಣವೇನು? ಒಂದೇ ಕಾರಣವೆಂದರೆ, ಅತ್ಯಧಿಕ ಲಾಭದ ದುರುದ್ದೇಶ.

### ಔಷಧಿಗಳ ಗುಣಮಟ್ಟ ಪರೀಕ್ಷಾ ವ್ಯವಸ್ಥೆಯಲ್ಲಿನ ಕೊರತೆ

ಮೊದಲನೆಯದಾಗಿ, ಭಾರತದ ಯಾವ ರಾಜ್ಯದಲ್ಲೂ ಔಷಧಿಗಳ ಗುಣಮಟ್ಟವನ್ನು ಪರಿಕ್ಷಿಸಲು ಅವಶ್ಯಕ ಸಂಖ್ಯೆಯಷ್ಟು ಸುವ್ಯವಸ್ಥಿತ ಲ್ಯಾಬುಗಳಿಲ್ಲ. ಇರುವ ಕೆಲವು ಲ್ಯಾಬುಗಳಲ್ಲಿ ನುರಿತ ತಂತ್ರಜ್ಞರಿಲ್ಲ ಮತ್ತು ಅವೇ ಹಳೆಯ ಉಪಕರಣಗಳನ್ನು ಬಳಸಲಾಗುತ್ತಿದೆ. ಕೆಲವು ಪ್ರಾಥಮಿಕ ಹಂತದ ಪರೀಕ್ಷೆಗಳನ್ನು ಮಾತ್ರ ಈ ಲ್ಯಾಬುಗಳಲ್ಲಿ ಮಾಡಬಹುದಾಗಿದೆ. ರೋಗಾಣುಗಳ ಹಾಗೂ ರಾಸಾಯನಿಕ ಕಲಬೆರಕೆಗಳನ್ನು ಅಲ್ಲಿ ಪತ್ತೆ ಹಚ್ಚಲಾಗುವುದಿಲ್ಲ. ಜೊತೆಗೆ, ಪರೀಕ್ಷೆಯ ಪರಿಣಾಮದ ವರದಿ ಬರಲು ಕೆಲವೊಮ್ಮೆ ಆರರಿಂದ ಹನ್ನೆರಡು ತಿಂಗಳುಗಳಾಗುತ್ತವೆ. ಕಾನೂನಿನ ಪ್ರಕಾರ ಪರೀಕ್ಷೆಯ ಪರಿಣಾಮ ಬರುವವರೆಗೆ, ಔಷಧಗಳನ್ನು ಬಳಸುವ ಹಾಗಿಲ್ಲವೆಂದಿದ್ದರೂ, ಅನೇಕ ಸರ್ಕಾರಿ ಅಸ್ಪತ್ರೆಗಳಲ್ಲಿ ವರದಿ ಬರುವ ಮುನ್ನವೇ ಬಳಸಲಾರಂಭಿಸಲಾಗುತ್ತದೆ.

ಎರಡನೆಯದಾಗಿ, ಕೊನೆಯ ದಿನಾಂಕ ಮೀರಿದ ಔಷಧಿಗಳನ್ನು 90 ದಿನಗಳ ಒಳಗೆ ತಯಾರಕರಿಗೆ ಮರಳಿಸಬೇಕೆಂಬ ಕಾನೂನಿದೆ. ಆದರೆ, ಬಹಳಷ್ಟು ಬಾರಿ, ಅವುಗಳನ್ನು ಕಪ್ಪು ಮಾರುಕಟ್ಟೆಯ ಮೂಲಕ ಹೊಸ ಪ್ಯಾಕೇಜಿಂಗ್ ಮಾಡಿ ಮತ್ತೊಮ್ಮೆ ಗ್ರಾಹಕರ ಬಳಕೆಗೆ ಬಿಡುಗಡೆ ಮಾಡಲಾಗುತ್ತದೆ.

ಮೂರನೆಯದಾಗಿ, ಔಷಧಿಗಳ ಮೇಲೆ ಜಿಎಸ್‌ಟಿ ಹೇರಿರುವುದರಿಂದ, ರಾಜ್ಯಗಳು ಅಪರಿಚಿತ ಹಾಗೂ ಅಜ್ಞಾತ ಕಂಪನಿಗಳ ಅಗ್ಗದ ದರದ ಔಷಧಿಗಳನ್ನು ಖರೀದಿಸುತ್ತಿವೆ. ಈ ಔಷಧಿಗಳ ಮೇಲೆ ಸರಿಯಾದ ನಿಯಂತ್ರಣವಿರದೆ ಇರುವುದರಿಂದ, ಹೆಚ್ಚಾಗಿ ಕೊನೆಯ ದಿನಾಂಕ ಮೀರಿದಂತಹವಾಗಿರುತ್ತವೆ.

ನಾಲ್ಕನೆಯದಾಗಿ, ಇತ್ತೀಚಿಗೆ ಕೇಂದ್ರ ಔಷಧಿ ನಿಯಂತ್ರಣಾ ಕಛೇರಿ ವತಿಯಿಂದ ನಡೆಸಿದ ಅನಿರೀಕ್ಷಿತ ಪರೀಕ್ಷೆಯಲ್ಲಿ, ನಕಲಿ ಬ್ರ್ಯಾಂಡೆಡ್ ಔಷಧಿಗಳು ಪಶ್ಚಿಮ ಬಂಗಾಲದ ಅನೇಕ ಸಗಟು ಮಾರಾಟಗಾರರ ಮಾರುಕಟ್ಟೆಯಲ್ಲಿ ಸಿಕ್ಕಿಬಿದ್ದಿವೆ. ಇದೊಂದು ಆತಂಕಕಾರಿ ವಿದ್ಯಮಾನ. ಹೀಗೆ ನಕಲಿ ಔಷಧಿಗಳನ್ನು ಬ್ರ್ಯಾಂಡೆಡ್ ಹೆಸರಿನಲ್ಲಿ ಪ್ಯಾಕೇಜಿಂಗ್ ಮಾಡಿ ಮಾರಾಟ ಮಾಡಿದಲ್ಲಿ, ವಂಚನೆಯನ್ನು ಗುರುತಿಸುವುದೇ ಕಷ್ಟವಾಗಬಹುದು.

ಈ ಒಂದು ವ್ಯಾಪಕ ವಂಚನೆಯ ಜಾಲ ಒಂದೆಡೆಯಾದರೆ, ಇನ್ನೊಂದೆಡೆ, 35 ದೊಡ್ಡ ದೊಡ್ಡ ಫಾರ್ಮಾ ಕಂಪನಿಗಳು ಮತಾಧಾರಿತ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಮತ್ತಿತರ ಪಕ್ಷಗಳಿಗೆ ಚುನಾವಣಾ ಬಾಂಡ್‌ಗಳ ಮೂಲಕ ರೂ. 20,000 ಕೋಟಿಯಷ್ಟು ದೇಣಿಗೆ ನೀಡಿವೆ. ಇದರಲ್ಲಿ, ಏಳು ಕಂಪನಿಗಳು ಈ ಬಾಂಡುಗಳ ಖರೀದಿಯ ಮುನ್ನ ಗುಣಮಟ್ಟದ ಪರೀಕ್ಷೆಯಲ್ಲಿ ತೇರ್ಗಡೆ ಆಗದೇ ಇರುವಂತಹವು. ಆದರೂ, ನಕಲಿ ಔಷಧಿಗಳ ಮಾರಾಟವನ್ನು ಅವು ಮುಂದುವರಿಸುತ್ತಿವೆ. ಮತ್ತೊಂದು ಆಘಾತಕಾರಿ ಬೆಳವಣಿಗೆಯೆಂದರೆ, ಒಂದು ಲ್ಯಾಬಿನಲ್ಲಿ ಫೇಲಾದ ಪರೀಕ್ಷೆ, ಮತ್ತೊಂದು ಲ್ಯಾಬಿನಲ್ಲಿ ಪಾಸಾಗುವುದು, ಬಹುಶಃ ಇದು ಹಣ ನೀಡಿ ತಮಗೆ ಬೇಕಾದಂತಹ ವರದಿಯನ್ನು ಪಡೆಯುವ ಅನೈತಿಕ ವಿಧಾನ.

ನಕಲಿ ಔಷಧಿಗಳನ್ನು ತಯಾರಿಸುವ ಭ್ರಷ್ಟ ಫಾರ್ಮಾ ಕಂಪನಿಗಳು, ಸಗಟು ವ್ಯಾಪಾರಿಗಳು ಮತ್ತು ವಿತರಕರು ಕೂಡಿ ನಡೆಸುವ ಅವ್ಯವಹಾರವೊಂದನ್ನು ಇತ್ತೀಚಿಗೆ ಬಯಲಿಗೆಳೆಯಲಾಯಿತು. ಆದರೆ, ನಂತರ ಯಾವ ಕ್ರಮ ಕೈಗೊಳ್ಳಲಾಯಿತು ಎಂಬುದು ಸ್ಪಷ್ಟವಾಗಿಲ್ಲ. ಜಗತ್ತಿನ ಮೂರನೇ ಒಂದು ಭಾಗದಷ್ಟು ನಕಲಿ ಔಷಧಿಗಳು ಭಾರತದಲ್ಲಿ ಉತ್ಪನ್ನಗೊಳ್ಳುತ್ತಿವೆ ಎಂಬುದು ನಾಚಿಕೆಗೇಡಿನ ಸಂಗತಿ. ಇಂತಹ ದಂಧೆಗಳು ರಾಜಾರೋಷವಾಗಿ ನಡೆಯುತ್ತವೆ ಎಂದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಕಟ್ಟಿ ಕುಳಿತಿರಬೇಕು, ಇಲ್ಲ ಅವರೂ ಈ ಅಪರಾಧದಲ್ಲಿ ಭಾಗಿದಾರರಾಗಿರಬೇಕು.

### ಔಷಧಿ ದರಗಳ ಮೇಲಿನ ನಿಯಂತ್ರಣದ ರದ್ದತಿ

1960ರ ವರೆಗೆ, ಔಷಧಿಗಳ ದರಗಳು ಕಟ್ಟುನಿಟ್ಟಿನ ನಿಯಂತ್ರಣಕ್ಕೊಳಪಟ್ಟಿದ್ದವು. ರಾಷ್ಟ್ರೀಯ ಫಾರ್ಮಸ್ಯುಟಿಕಲ್ ಕಂಪನಿಗಳಾದ ಬೆಂಗಾಲ್ ಕೆಮಿಕಲ್ಸ್, ಐಡಿಪಿಎಲ್, ಕರ್ನಾಟಕ ಆಂಟಿಬಯಾಟಿಕ್ಸ್, ಹಿಂದುಸ್ತಾನ್ ಆಂಟಿಬಯಾಟಿಕ್ಸ್ ಲಿಮಿಟೆಡ್ ಮೊದಲಾದ ಸಾರ್ವಜನಿಕ ಕಂಪನಿಗಳು ಉತ್ತಮ ಗಣಮಟ್ಟದ ಔಷಧಿಗಳನ್ನು ಕೈಗೆಟಕುವ ದರದಲ್ಲಿ ಉತ್ಪಾದಿಸುತ್ತಿದ್ದವು. ಹಾಗಾಗಿ, ಸ್ವಲ್ಪ ಮಟ್ಟಿಗಾದರೂ ಜನರಿಗೆ ಸಹಾಯವಾಗುತ್ತಿತ್ತು. ಆದರೆ, ನಂತರದ ದಿನಗಳಲ್ಲಿ, ಜಾಗತೀಕರಣಕ್ಕನುಗುಣವಾದ ಬದಲಾದ ಸರ್ಕಾರಿ ನೀತಿಗಳಿಂದಾಗಿ, (ವಿಶೇಷವಾಗಿ 1995ರಲ್ಲಿ ಬಂದ ರಾಷ್ಟ್ರೀಯ ಹರ್ಬಲ್ ನೀತಿ), ಸರ್ಕಾರಿ ಔಷಧ ತಯಾರಿಕಾ ಘಟಕಗಳು ದುರ್ಬಲಗೊಳ್ಳುತ್ತಾ ಹೋದವು. ಅವುಗಳನ್ನು ಮುಚ್ಚುವುದು ಅಥವಾ ಅವುಗಳ ಖಾಸಗೀಕರಣಗೊಳಿಸುವುದೇ ಸರ್ಕಾರದ ಪ್ರಮುಖ ಗುರಿಯಾಯಿತು, ಇರುವ ಐದೇ ಐದು ಸರ್ಕಾರೀ ಸ್ವಾಮ್ಯದ ಫಾರ್ಮಾ ಕಂಪನಿಗಳಲ್ಲಿ, ಎರಡನ್ನು (ಐಡಿಪಿಎಲ್ ಇಂಡಿಯನ್ ಡ್ರಗ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ಹಾಗೂ ಆರ್‌ಡಿಪಿಎಲ್ – ರಾಜಸ್ಥಾನ್ ಡ್ರಗ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್) ಮುಚ್ಚಲು 2021 ರಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಭಾರತದ ಆರ್ಥಿಕತೆಯ ಜಾಗತೀಕರಣದ ನಂತರ, ವಿದೇಶೀ ಔಷಧ ಕಂಪನಿಗಳು, ಸರ್ಕಾರದ 100% ನೇರ ವಿದೇಶಿ ಬಂಡವಾಳ ನೀತಿಯ ಪರಿಣಾಮದಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತವನ್ನು ಪ್ರವೇಶಿಸಿದವು. 2002ರಲ್ಲಿ ಬಂದ ರಾಷ್ಟ್ರೀಯ ಔಷಧಿ ದರ ನಿಗದಿ ನೀತಿ (National Pharmaceutical Pricing Policy) ಇದಕ್ಕೆ ಪೂರಕವಾಗಿದ್ದಲ್ಲದೆ, ಔಷಧಗಳ ಬೆಲೆಗಳ ಮೇಲಿದ್ದ ನಿಯಂತ್ರಣವನ್ನು ಸಡಿಸಲಾಯಿತು. ಫಾರ್ಮಾ ಕಂಪನಿಗಳೇ ತಮಗೆ ಬೇಕಾದಂತೆ ದರಗಳನ್ನು ನಿಗದಪಡಿಸಲು ಇದು ಅನುವಾಯಿತು. ಹಾಗಾಗಿಯೇ, ಇಂದು ಬಹುತೇಕ ಜನರಿಗೆ ಸುಲಭ ದರದಲ್ಲಿ ಔಷಧಿಗಳು ದೊರೆಯುತ್ತಿಲ್ಲ. ಒಂದು ಅಧ್ಯಯನದ ಪ್ರಕಾರ ವರ್ಷಕ್ಕೆ 55 ದಶಲಕ್ಷ ಭಾರತೀಯರು ವೈದ್ಯಕೀಯ ಖರ್ಚಿನಿಂದಾಗಿ ಬಡತನ ರೇಖೆಯ ಕೆಳಗಡೆ ತಳ್ಳಲ್ಪಡುತ್ತಾರೆ. ಅದರಲ್ಲಿ ಹೆಚ್ಚಿನಾಂಶ ಔಷಧಿಗಳ ಮೇಲೆ ಮಾಡಿದ ವೆಚ್ಚ (ಚಿಕಿತ್ಸೆಯ ಒಟ್ಟು ಖರ್ಚಿನಲ್ಲಿ ಶೇಕಡ 70 ರಿಂದ 80% ವೆಚ್ಚವು ಔಷಧಿಗಳಿಗಾಗಿಯೇ ಆಗುತ್ತದೆ). ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆಯ ಆರಂಭದ ವರ್ಷ, 2014 ರಲ್ಲಿ, ಪ್ರಧಾನಿಗಳ ಅಮೆರಿಕಾ ಪ್ರವಾಸದ ಮುನ್ನ 108 ಔಷಧಿಗಳನ್ನು ಡಿಪಿಸಿಒ (ಡ್ರಗ್ ಪ್ರೈಸ್ ಕಂಟ್ರೋಲ್ ಆರ್ಡರ್)ನಿಂದ ಹೊರತೆಗೆಯಲಾಯಿತು. ಅಮೆರಿಕಾ ಒತ್ತಡಕ್ಕೆ ಮೋದಿ ಸರ್ಕಾರ ಮಣಿದು ಈ ನಿರ್ಧಾರ ತೆಗೆದುಕೊಂಡಿದ್ದು ನಿಚ್ಚಳವಾಗಿದೆ. ಇದರಿಂದಾಗಿ, ಮಧುಮೇಹ, ಕ್ಯಾನ್ಸರ್, ಟಿಬಿ ಮುಂತಾದ ಗಂಭೀರ ಕಾಯಿಲೆಗಳಿಗೆ ಅತ್ಯವಶ್ಯವಾದ ಔಷಧಿಗಳ ಬೆಲೆ ಗಗನಕ್ಕೇರಿತು. ಉದಾಹರಣೆಗೆ, ಕ್ಯಾನ್ಸರ್ ಚಿಕಿತ್ಸೆಗೆ ಬೇಕಾದ ಗ್ಲಿವೆಕ್ ಎನ್ನುವ ಔಷಧಿಯ ಬೆಲೆ ರೂ.8500 ಇದ್ದದ್ದು, ಸೆಪ್ಟೆಂಬರ್ 2014ರ ನಂತರ ರೂ. 1 ಲಕ್ಷಕ್ಕೆ ಏರಿತ್ತು. ಈಗಲೂ ಸಹ, ಅದೆಷ್ಟೋ ಅವಶ್ಯಕ ಔಷಧಿಗಳು ಮತ್ತು ಹೆಚ್ಚಾಗಿ ಬಳಸುವ ಸಾಮಾನ್ಯ ಔಷಧಿಗಳು ನ್ಯಾಷನಲ್ ಲಿಸ್ಟ್ ಆಫ್ ಎಸೆನ್ಶಿಯಲ್ ಮೆಡಿಸಿನ್ (NLEM) ನಲ್ಲಿ ಇಲ್ಲ. ಪಟ್ಟಿಯನ್ನು ಪರಿಷ್ಕರಿಸದೆ, ಸರ್ಕಾರ, ಕಂಪನಿಗಳು ಮತ್ತಷ್ಟು ಲಾಭ ಗಳಿಸಲು ಅನುವು ಮಾಡಿಕೊಟ್ಟಿದೆ.

### ಮಿತಿಯಿಲ್ಲದ ಲಾಭ ಗಳಿಕೆಯಲ್ಲಿ ಫಾರ್ಮಾ ಉದ್ಯಮ

ಉತ್ಪಾದನೆ ಮತ್ತಿತರ ಉದ್ಯಮ ಕ್ಷೇತ್ರಗಳು ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿರುವಾಗ, ಫಾರ್ಮಾ ಕ್ಷೇತ್ರವು ಮಿತಿಯಿಲ್ಲದ ಲಾಭವನ್ನು ಬಾಚುತ್ತಿದೆ, 300% ನಿಂದ ನಂಬಲಸಾಧ್ಯವಾದ 3000% ವರೆಗೆ ಲಾಭ ಪಡೆಯುತ್ತಿವೆ. ಸ್ವತಃ ಸರ್ಕಾರವೇ ಪ್ರತಿ ವರ್ಷ ದರವನ್ನು ಹೆಚ್ಚಿಸಲು ಅನುವು ಮಾಡಿಕೊಡುತ್ತಿದೆ. ಇದರ ಜೊತೆಗೆ, ಅವು ಕಲಬೆರಕೆ, ನಕಲಿ ಔಷಧಿಗಳ ಮಾರಾಟದಿಂದ ಹೆಚ್ಚೆಚ್ಚು ಲಾಭ ಗಳಿಸುವ ಪೈಪೋಟಿಯಲ್ಲಿ ನಿರತವಾಗಿವೆ. ಮನುಷ್ಯ ಜೀವದೊಂದಿಗೆ ಚೆಲ್ಲಾಟವಾಡಬಾರದೆಂಬ ಯಾವುದೇ ಬಗೆಯ ನೈತಿಕತೆಯನ್ನು ಕೈ ಬಿಟ್ಟಂತೆ ಅವು ವರ್ತಿಸುತ್ತಿವೆ. ವೇಗವಾಗಿ ಅಧಪತನಗೊಳ್ಳುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾನವೀಯ ಭಾವನೆಗಳ ಬಗ್ಗೆ ಯಾವ ಕಾಳಜಿಯಿರುತ್ತದೆ!

### ಡ್ರಗ್ ಮಾಫಿಯಾವನ್ನು ಹಿಮ್ಮೆಟ್ಟಿಸಬೇಕಿದೆ!

ವೈದ್ಯಕೀಯ ನೈತಿಕತೆಯ ಪತಾಕೆಯನ್ನು ಎತ್ತಿಹಿಡಿವ ವೈದ್ಯ ಸಮೂಹವನ್ನು ಸೇರಿಸಿಕೊಂಡು ಬೃಹತ್ ಆರೋಗ್ಯ ಚಳುವಳಿಯನ್ನು ಕಟ್ಟುವ ಸಮಯ ಬಂದಿದೆ. ಸರ್ಕಾರಗಳ ಮುಂದೆ ನಾವು ಈ ಬೇಡಿಕೆಗಳನ್ನು ಇಟ್ಟುಕೊಂಡು ಚಳುವಳಿ ಮುಂದುವರೆಸಬೇಕಿದೆ :


1. **ಹಾಥಿ ಸಮಿತಿಯ ಶಿಫಾರಸ್ಸಿನಂತೆ ಬ್ರ್ಯಾಂಡೆಡ್ ಔಷಧಿಗಳ ಮಾರಾಟವನ್ನು ನಿಲ್ಲಿಸಿ. ಎಲ್ಲಾ ಅವಶ್ಯಕ ಮತ್ತು ಜೀವ ರಕ್ಷಕ ಔಷಧಿಗಳನ್ನು ದರ ನಿಯಂತ್ರಣದಡಿ ಸೇರಿಸಿ.**
2. **ರಾಷ್ಟ್ರೀಯ ಔಷಧಿ ಉತ್ಪಾದನಾ ಘಟಕಗಳನ್ನು ಪುನಶ್ಚೇತನಗೊಳಿಸಿ ಮತ್ತು ಎಲ್ಲಾ ಅವಶ್ಯಕ ಹಾಗೂ ಜೀವರಕ್ಷಕ ಔಷಧಿಗಳನ್ನು ಉತ್ಪಾದಿಸಿ.**
3. **ಫಾರ್ಮಾ ಕಂಪನೆಗಳು ಅತಿಹೆಚ್ಚು ಲಾಭಗಳಿಸದಂತೆ, ಲಾಭದ ಮೇಲೆ ಮಿತಿಯನ್ನು ಹೇರಿ**
4. **ಅವಶ್ಯಕ ಮತ್ತು ಜೀವರಕ್ಷಕ ಔಷಧಿಗಳನ್ನು ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳ ಮೂಲಕ ಸುಲಭವಾಗಿ ಮತ್ತು ತಡೆರಹಿತವಾಗಿ ದೊರೆಯುವಂತೆ ಮಾಡಿ**
5. **ಔಷಧಿ ಪರೀಕ್ಷಾ ಕೇಂದ್ರಗಳ ಗುಣಮಟ್ಟವನ್ನು ಹೆಚ್ಚಿಸಿ, ಅವಶ್ಯವಾದ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಿ.**



## ಗಿಗ್ ವರ್ಕರ್ಸ್ ಹಿತಕ್ಕಾಗಿ ರಾಜ್ಯ ಸರ್ಕಾರದ ಆದೇಶ

### ಎಐಡಿವೈಓ ಸಂಯೋಜಿತ ಯುಎಫ್‌ಡಿಪಿಯು ಹೋರಾಟಕ್ಕೆ ಸಂದ ಜಯ!

ಗಿಗ್ ವರ್ಕರ್ಸ್ ಹಿತ ಕಾಯಲು "ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧ್ಯಾದೇಶ 2025" ವನ್ನು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್ (ಯುಎಫ್‌ಡಿಪಿಯು) ಸ್ವಾಗತಿಸುತ್ತದೆ. 2019 ರಿಂದ ಯುಎಫ್‌ಡಿಪಿಯು ಸಂಘಟನೆಯು ಗಿಗ್ ಕ್ಷೇತ್ರದ ಹಲವು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದೆ. ಆಗಿನಿಂದಲೇ 'ನಮ್ಮನ್ನೂ ಕಾರ್ಮಿಕರಾಗಿ ಪರಿಗಣಿಸಬೇಕು' ಎಂದು ಸರ್ಕಾರಕ್ಕೆ ಆಗ್ರಹಿಸಿ ಸಂಘಟಿತ ಹೋರಾಟವನ್ನು ಚುರುಕುಗೊಳಿಸಲಾಯಿತು. ಈ ಹೋರಾಟವು ಹಲವು ಜಿಲ್ಲೆಗಳಲ್ಲಿ ನಡೆಯಿತು. ಆ ನಂತರ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಮತ್ತು ಕಾರ್ಮಿಕ ಇಲಾಖೆಯಲ್ಲಿ ಎರಡು ಕಡೆ ಪ್ರತ್ಯೇಕವಾಗಿ ಕಾನೂನನ್ನು ರೂಪಿಸಲು ಪ್ರಯತ್ನಗಳು ನಡೆದಾಗ, ಈ ಪ್ರಕ್ರಿಯೆಯಲ್ಲಿ ಹಲವು ಸುತ್ತಿನ ಸಭೆಗಳು ನಡೆದು, ಯೂನಿಯನ್ ನೇತೃತ್ವದಲ್ಲಿ ಸ್ವತಃ ಕಾರ್ಮಿಕರು ಈ ಕ್ಷೇತ್ರದ ಕಾನೂನು ಹೇಗಿರಬೇಕು ಎಂಬ ಅಭಿಪ್ರಾಯಗಳನ್ನು ನೀಡಿದ್ದರು. ಗಿಗ್ ಕಾರ್ಮಿಕರ ಒತ್ತಾಯಕ್ಕೆ ಮಣಿದು ಅವರ ಹಿತಾಸಕ್ತಿ ಕಾಪಾಡಲು ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪಿಸಲು ಸರ್ಕಾರ ಸುಗ್ರಿವಾಜ್ಞೆ ಹೊರಡಿಸಿ ಈಗ ಮುಂದಾಗಿದೆ. ಈ ಹಿನ್ನೆಲೆಯಲ್ಲಿ, ಪ್ರತಿ ಡೆಲಿವರಿ ಮೇಲೆ ಶೇ.1 ರಿಂದ 2 ರಷ್ಟು ಕಂಪನಿಗಳಿಂದ ಸೆಸ್ ಕಲೆಕ್ಟ್ ಮಾಡಿ ಅದಕ್ಕೆ ಕಲ್ಯಾಣ ಮಂಡಳಿ ಸ್ಥಾಪಿಸಿ, ಆ ಮೂಲಕ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಸುಗ್ರಿವಾಜ್ಞೆ ಹೊರಡಿಸಿರುವುದನ್ನು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್ ಸ್ವಾಗತಿಸುತ್ತದೆ. ಮುಂದುವರೆದು, ಗಿಗ್ ಕ್ಷೇತ್ರದಲ್ಲಿನ ಕೆಲಸಗಾರರನ್ನು ಕಾರ್ಮಿಕರೆಂದು ಪರಿಗಣಿಸಿ, ಎಲ್ಲಾ ಕಾರ್ಮಿಕ ಕಾನೂನುಗಳು ಇವರಿಗೆ ಅನ್ವಯಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತದೆ.



# ಅಮೆರಿಕಾ: ಅಧ್ಯಕ್ಷ ಟ್ರಂಪ್ ನೇತೃತ್ವದಲ್ಲಿ ಶಿಕ್ಷಣ, ಸಂಶೋಧನೆ, ಆರೋಗ್ಯ ಸೇವೆ ಮತ್ತು ಕಲೆ ನಿರ್ನಾಮ!

ಎರಡನೇ ಬಾರಿ ಅಮೆರಿಕಾದಲ್ಲಿ ಅಧಿಕಾರಕ್ಕೆ ಬಂದ ಟ್ರಂಪ್ ಸರ್ಕಾರ, ಮಧ್ಯರಾತ್ರಿಯ ಕಾರಿರುಳಲ್ಲಿ, ಯಾವುದೇ ಸಾರ್ವಜನಿಕ ಚರ್ಚೆಯಿಲ್ಲದೆ, 'ಬಜೆಟ್ ಕಡಿತ' ಮತ್ತು 'ಕೆಸರು ನಿರ್ಮೂಲನೆ'ಯ ಪರದೆಯಡಿಯಲ್ಲಿ ಇನ್ನುಮುಂದೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು, ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಮತ್ತು ಅಮೆರಿಕಾದ ಹಲವಾರು ಪುರಾತತ್ವ ಶಾಸ್ತ್ರ–ಸಾಂಸ್ಕೃತಿಕ ಪರಂಪರೆಗಳ ಸಂಸ್ಥೆಗಳನ್ನು ಮುಚ್ಚುವುದಾಗಿ ಘೋಷಿಸಿದೆ! ಈ ರೀತಿಯಾಗಿ ಟ್ರಂಪ್ ಆಡಳಿತ, ಇದುವರೆಗೂ ಸರ್ಕಾರದ ಕೆಳಗೆ ಕಾರ್ಯ ನಿರ್ವಹಿಸುತ್ತಿದ್ದ ಶೈಕ್ಷಣಿಕ–ಸಾಮಾಜಿಕ–ಸಾಂಸ್ಕೃತಿಕ–ವೈದ್ಯಕೀಯ ಸಂಸ್ಥೆಗಳಿಗೆ ಅನುದಾನ ನೀಡದೆ, ಅವನ್ನು ಅನಧಿಕೃತಗೊಳಿಸುತ್ತಾ ವ್ಯವಸ್ಥಿತವಾಗಿ ಅವನ್ನು ಬುಡಮೇಲು ಮಾಡಲು ಹೊರಟಿದೆ. ಅವನ್ನೆಲ್ಲಾ, ಅವು ದುಂದುವೆಚ್ಚದ್ದು, ಗಣ್ಯರಿಗೆ ಮಾತ್ರ ಸೇರಿದ್ದು ಅಥವಾ ರಾಜಕೀಯ ಪೂರ್ವಗ್ರಹವುಳ್ಳಂತಹವು ಎಂದು ಕರೆಯುತ್ತಾ ಜನರಲ್ಲಿ ಸಂಶಯದ ಬೀಜ ಬಿತ್ತುತ್ತಿದೆ. ರಾಷ್ಟ್ರೀಯ ಆರೋಗ್ಯ ಸಂಸ್ಥೆಯನ್ನು ವೈದ್ಯಕೀಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಕೊಬ್ಬಿದ ಅಧಿಕಾರಶಾಹಿ ಎಂದು ಕರೆದರೆ, ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನವನ್ನು, ಸಾಮಾಜಿಕ ನ್ಯಾಯ ವಿಜ್ಞಾನದ ಎಡಪಂಥೀಯ ವಿಕಸನ ಪೆಟ್ಟಿಗೆ ಎಂದು ಹೀಗಳೆದಿದೆ. ಇತರ ಸಂಸ್ಥೆಗಳನ್ನು ಸಹ ಉದಾರವಾದದ ಪ್ರತಿಧ್ವನಿಗಳು ಎಂದು ಅಪಹಾಸ್ಯ ಮಾಡುತ್ತ ಜನತೆಯ ಆಕ್ರೋಶವನ್ನು ತಣಿಸುವವರೆಗೂ ಬಂಡವಾಳಶಾಹಿ ಮಾಧ್ಯಮಗಳ ಮೂಲಕ ಅವುಗಳ ಲೇವಡಿ ಮಾಡಿ, ಜನರಿಗೆ ತಪ್ಪು ಮಾಹಿತಿ ನೀಡುತ್ತಾ ಜನಾಭಿಪ್ರಾಯವನ್ನು ಅವುಗಳ ವಿರುದ್ಧ ತಿರುಚಿದೆ.

### ಸಾರ್ವಜನಿಕ ಶಿಕ್ಷಣಕ್ಕೆ ಕೊಡಲಿಯೇಟು

ಅಮೆರಿಕಾದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ರಾಜ್ಯಗಳೇ ನಡೆಸುತ್ತಿದ್ದು, ಕೇಂದ್ರ ಸರ್ಕಾರ ನೀಡುವುದು 13%. ಹಣ ಮಾತ್ರ. ಕೇಂದ್ರ ಶಿಕ್ಷಣ ಇಲಾಖೆ, ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಸಾಲ ನೀಡಲು, ಬಡ ಮಕ್ಕಳಿಗೆ ನೆರವು ನೀಡಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಇದೀಗ ಟ್ರಂಪ್ ಸರ್ಕಾರ, ಈ ಇಲಾಖೆಯನ್ನು ಮುಚ್ಚುತ್ತಿದೆ. ಟ್ರಂಪ್ ಸ್ವತಃ ಶಿಕ್ಷಣ ಇಲಾಖೆ ದುಂದುವೆಚ್ಚದ್ದು, ಅದು ಉದಾರವಾದಿ ಚಿಂತನೆಯಿಂದ ಕುಲಗೆಟ್ಟಿದೆ, ಆದ್ದರಿಂದ ಅದನ್ನು ಮುಚ್ಚುವುದೇ ಲೇಸು ಎಂದು ಸಮರ್ಥಿಸಿಕೊಂಡಿದ್ದಾರೆ. ಅದರಿಂದ ವಿದ್ಯಾರ್ಥಿಗಳಿಗೆ ಒಳ್ಳೆಯದಾಗುತ್ತದೆ ಎಂದು ಸರ್ಕಾರ ಘೋಷಿಸಿದೆ. ಆದರೆ ವಿಮರ್ಶಕರು ಬಡ ಮಕ್ಕಳ ಶಿಕ್ಷಣ ಕುಂಠಿತವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಮೆರಿಕಾದ ಕಾಂಗ್ರೆಸ್ ಅನುದಾನ ಕಡಿತ ಮಾಡಿ ಮಸೂದೆ ಅಂಗೀಕಾರ ಮಾಡಿದ ನಂತರ ಕೇವಲ ಒಂದು ವಾರದಲ್ಲಿ ಇಲಾಖೆಯ 4000 ಶಿಕ್ಷಕರಲ್ಲಿ ಅರ್ಧದಷ್ಟು ಶಿಕ್ಷಕರು ಕೆಲಸ ಕಳೆದುಕೊಂಡಿದ್ದಾರೆ. ಇದರಿಂದ ಬಡ ಮಕ್ಕಳಿಗೆ ಶಿಕ್ಷಣವಿಲ್ಲ!

ಅಮೆರಿಕಾದ ಫೆಡರಲ್ ಸರ್ಕಾರ ಈ ಹಿಂದೆ ಶಿಕ್ಷಣಕ್ಕೆ ಟೈಟಲ್–1 ಮತ್ತು ಪೆಲ್ ಅನುದಾನಗಳನ್ನು ನೀಡುವ ಮೂಲಕ ಅತೀ ಬಡತನ ಮತ್ತು ಶೈಕ್ಷಣಿಕ ಹಿಂದುಳಿಯುವಿಕೆಗಳ ನಡುವಿನ ಬಂಧವನ್ನು ಮುರಿಯುವ ಉದ್ದೇಶ ಹೊಂದಿತ್ತು. ಟೈಟಲ್ I ಅನುದಾನ, ದೇಶದ 2/3ರಷ್ಟು ಸಾರ್ವಜನಿಕ ಶಾಲೆಗಳ–ಕಿಂಡರ್‌ಗಾರ್ಡನ್‌ನಿಂದ 12ನೇ ತರಗತಿಯ–ಬಡ ಮಕ್ಕಳಿಗೆ, 30 ಲಕ್ಷ ವಿಕಲಚೇತನ ಮಕ್ಕಳಿಗೆ, 7,45,000 ವಸತಿಹೀನ ಮಕ್ಕಳಿಗೆ ವರದಾನವಾಗಿತ್ತು. ಕಳೆದ ವರ್ಷ ಈ ರೀತಿ 17 ಶತಕೋಟಿ ಡಾಲರ್ ಹಣ ನೀಡಿದ್ದು, ಇದನ್ನು ಕಡಿತಗೊಳಿಸಿದರೆ, ರಾಜ್ಯಗಳು ಇದನ್ನು ಭರಿಸುವುದು ಅಸಾಧ್ಯ! ಹಾಗೆಯೇ, ಪೆಲ್ ಅನುದಾನ ಸಹ. ಇದರ ಕಡಿತ ಸುಮಾರು 63 ಲಕ್ಷ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮಾರಕವಾಗುತ್ತದೆ. ಒಟ್ಟಾರೆಯಾಗಿ, ಇವೆರಡೂ ಅನುದಾನಗಳನ್ನು ಕಡಿತಗೊಳಿಸಿ, ಕೇಂದ್ರ ಫೆಡರಲ್ ಸರ್ಕಾರ, ಶಿಕ್ಷಣ ನೀಡುವ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ಅದನ್ನು ರಾಜ್ಯಗಳ ಮೇಲೆ ಹೇರುವುದರಿಂದ ಅವಕಾಶ ವಂಚಿತ ಲಕ್ಷಾಂತರ ವಿದ್ಯಾರ್ಥಿಗಳನ್ನು ಉನ್ನತ ಮಟ್ಟದ ಶಿಕ್ಷಣ ಪಡೆಯುವುದರಿಂದ ತಡೆದಂತೆ ಆಗುತ್ತದೆ. ಇದನ್ನು ದೇಶದ ಕಾರ್ಮಿಕ ಮತ್ತು ನಾಗರಿಕ ಹಕ್ಕುಗಳ ಕಾರ್ಯಕರ್ತರು ವಿರೋಧಿಸಿದ್ದಾರೆ. ಇದು ಸಾಮಾನ್ಯ ಮಕ್ಕಳ ಶಿಕ್ಷಣಕ್ಕೆ ಕೊಡಲಿಯೇಟು ಹಾಕಿ, ಅದನ್ನು ಕೇವಲ ಉಳ್ಳವರ ಸ್ವತ್ತನ್ನಾಗಿಸುತ್ತದೆ ಎಂದು ಅವರು ಟೀಕಿಸಿದ್ದಾರೆ. ಇದು, ಅಮೆರಿಕಾದ ಶಿಕ್ಷಣರಂಗದಲ್ಲಿ ವಿದ್ಯಾರ್ಥಿಗಳ ಸಮಾನ ಪ್ರವೇಶದ ಬಗ್ಗೆ ಟ್ರಂಪ್ ಮಾಡಿದ್ದ ವಾಗ್ದಾನದ ಅಣಕವಾಗಿದೆಯಷ್ಟೇ. ಇದಕ್ಕೆ ಇರುವ ಇನ್ನೊಂದು ಆಯಾಮವೆಂದರೆ, ಅಮೆರಿಕಾದ ಬಡ ಜನರಲ್ಲಿ ಹೆಚ್ಚಿನವರು ಆಫ್ರಿಕನ್–ಅಮೆರಿಕನ್ ಮತ್ತು ಉಳಿದ ಹಿಂದುಳಿದ ಜನಾಂಗಗಳಾಗಿರುವುದರಿಂದ, ಕೇಂದ್ರ ಶಿಕ್ಷಣ ಇಲಾಖೆಯನ್ನು ಕೈಬಿಡುವುದು ಮತ್ತು 'ರಾಜ್ಯಗಳಿಗೆ ಅನುದಾನ, ಬ್ಲಾಕ್ ಮಾಡುವುದು ಅಲ್ಲಿಯ ಹಿಂಸಾತ್ಮಕ ಜನಾಂಗೀಯವಾದಿ ಒಡಕನ್ನುಂಟು ಮಾಡುವವರ ಬೆನ್ನು ತಟ್ಟಿದಂತಾಗುತ್ತದೆ. ಜೊತೆಗೆ ಇದು ಶಿಕ್ಷಣದ ಖಾಸಗೀಕರಣಕ್ಕೆ ವೇಗ ನೀಡುತ್ತದೆ. ಸರ್ಕಾರದ ಈ ಕ್ರಮ, ಮುಂದಿನ ಜನಾಂಗಕ್ಕೆ ಶಿಕ್ಷಣದ ಬಾಗಿಲನ್ನು ಮುಚ್ಚುತ್ತದೆ ಹಾಗೂ ಅವರಲ್ಲಿ ವಿವೇಚನಾಶೀಲತೆ ಬೆಳೆಯುವ ಪ್ರಕ್ರಿಯೆಗೆ ತಡೆ ಹಾಕುತ್ತದೆ. ಇದು ಬರ್ಬರ ಬಂಡವಾಳಶಾಹಿ ಶೋಷಣೆಯ ವಿರುದ್ಧದ ಪ್ರಜ್ಞಾವಂತ ಜನರ ಆಂದೋಲನದ ಪ್ರವಾಹವನ್ನು ತಡೆಗಟ್ಟುವ ಹುನ್ನಾರವಾಗಿದೆ.

### ಆರೋಗ್ಯಸೇವೆ ಮತ್ತು ಸಂಬಂಧಿತ ಸಂಶೋಧನೆಯಲ್ಲಿ ಕಡಿತ

ಟ್ರಂಪ್‌ನ ಇನ್ನೊಂದು ಮಾರಕ ಹೊಡೆತ ಆರೋಗ್ಯ ಸೇವೆಯ ಮೇಲೆ ಬಿದ್ದಿದೆ. ಇದು ದೇಶವನ್ನು ತೀವ್ರ ಆರೋಗ್ಯ ಸೇವೆಯ ಬಿಕ್ಕಟ್ಟಿಗೆ ತಳ್ಳಿದೆ. ಸಂಶೋಧನೆಗಳಿಗೆ ಕೇಂದ್ರ ಫೆಡರಲ್ ಸರ್ಕಾರದ ನೆರವಿಲ್ಲದೆ, ದೀರ್ಘಕಾಲದ ರೋಗಗಳು, ಬದಲಾದ ಹವಾಮಾನದಿಂದ ಉಂಟಾಗುವ ರೋಗಗಳು, ಮಹಾಮಾರಿಗಳು, ಇವುಗಳನ್ನು ನಿಭಾಯಿಸುವಲ್ಲಿ ಸ್ಥಳೀಯ ಆರೋಗ್ಯ ಇಲಾಖೆಗಳು ಸೋಲುತ್ತಿವೆ. ಇದರಿಂದ ರೋಗಗಳು ಉಲ್ಬಣಿಸುವ ಸಾಧ್ಯತೆ ಹೆಚ್ಚುತ್ತದೆ. ಅಲ್ಲದೆ ಚಿಕಿತ್ಸೆಗಾಗಿ ದೀರ್ಘ ಕಾಲ ಕಾಯಬೇಕಾಗುತ್ತದೆ. ಜೊತೆಗೆ ಕ್ಯಾನ್ಸರ್, ಹೃದ್ರೋಗ, ಸಾಂಕ್ರಾಮಿಕ ರೋಗಗಳ ಬಗ್ಗೆ ನಡೆಯುತ್ತಿರುವ ಸಂಶೋಧನೆಗೆ ಹೊಡೆತ ಬೀಳುತ್ತದೆ. ಹೊಸ ಚಿಕಿತ್ಸೆಗಳನ್ನು, ವ್ಯಾಕ್ಸಿನ್‌ಗಳನ್ನು ಕಂಡುಹಿಡಿಯಲು ಸಂಶೋಧನೆಗೆ ಧನ ಸಹಾಯ ನೀಡದಿದ್ದರೆ, ವೈದ್ಯಕೀಯ ರಂಗ ಮುನ್ನಡೆ ಸಾಧಿಸಲು ಸುದೀರ್ಘ ಕಾಲ ಕಾಯಬೇಕಾಗುತ್ತದೆ. ರೋಗಿಗಳು ಸಂಕಷ್ಟಕ್ಕೊಳಗಾಗುತ್ತಾರೆ. ಕಾಯಿಲೆಗಳನ್ನು ತಡೆಗಟ್ಟದಿದ್ದರೆ, ಅವು ಹರಡುತ್ತಾ ಹೆಚ್ಚಿನ ಜನರನ್ನು ಬಾಧಿಸುತ್ತವೆ; ರಾಜ್ಯ ಮತ್ತು ಸ್ಥಳೀಯ ಆರೋಗ್ಯ ಇಲಾಖೆಗಳ ಸಾಮರ್ಥ್ಯ ಕುಂಠಿತವಾಗಿ ಅವು ಸಾರ್ವಜನಿಕ ವೈದ್ಯಕೀಯ ತುರ್ತುಗಳಿಗೆ ಸ್ಪಂದಿಸಲಾಗುವುದಿಲ್ಲ. ಎಚ್‌ಐವಿ ತಡೆಗಟ್ಟುವ ಕಾರ್ಯಕ್ರಮದ ಅನುದಾನ ಕಡಿತದಿಂದ ಈ ರೋಗ ತೀವ್ರವಾಗಿ ಹರಡಬಹುದು. ಅನುದಾನದ ಮೇಲೆ ಅವಲಂಬಿತ ಗ್ರಾಮೀಣ ಆರೋಗ್ಯ ಕ್ಲಿನಿಕ್‌ಗಳು ಈಗಾಗಲೇ ಮುಚ್ಚಿಹೋಗಿವೆ. ಜೊತೆಗೆ ಆರೋಗ್ಯ ಮತ್ತು ಮಾನವ ಸೇವಾ ಕ್ಷೇತ್ರದಲ್ಲಿನ ಉದ್ಯೋಗ ಕಡಿತವೂ ತೀವ್ರವಾಗಿದ್ದು, ಈಗಾಗಲೇ ಕೆಲಸ ಕಳೆದುಕೊಂಡಿರುವ ಸಾವಿರಾರು ಜನರ ಜೊತೆಗೆ, ಈಗ 10,000 ದಷ್ಟು ಪೂರ್ಣಕಾಲಿಕ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುತ್ತಾರೆ. ಈ ಹಿಂದೆ ಆರೋಗ್ಯ ಸೇವೆಯಲ್ಲಿ ಉದ್ಯೋಗದಲ್ಲಿದ್ದ ಒಬ್ಬರು, ಟ್ರಂಪ್‌ನ ಈ ಕ್ರಮವನ್ನು 'ರಕ್ತಪಾತ' ಎಂದೂ, ಇನ್ನೊಬ್ಬರು 'ಇದು ಬಹಳ ಅಮಾನವೀಯವಾದದ್ದು' ಎಂದು ಖಂಡಿಸಿದ್ದಾರೆ.

### ಸಂಶೋಧನೆಗಳಿಗೆ ಕತ್ತರಿ!

ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ ಅನುದಾನ ಕಡಿತ, ಸಂಶೋಧನೆಗಳಿಗೆ ಕತ್ತರಿ ಹಾಕಿದೆ. ಇದು ಸರ್ಕಾರಿ ಸ್ವಾಮ್ಯದ ಸಾವಿರಾರು ಸಂಶೋಧನಾ ಸಂಸ್ಥೆಗಳಿಗೆ ಬೀಗ ಹಾಕಿಸುತ್ತದೆ ಮತ್ತು ಖಾಸಗಿ ಬಂಡವಾಳಿಗರಾದ ಎಲೋನ್ ಮಸ್ಕ್‌ರಂತಹ ಕೈಗಾರಿಕಾ ದೈತ್ಯರಿಗೆ ಮಣೆ ಹಾಕುತ್ತದೆ; ಇದರಿಂದ, ಸಂಶೋಧನಾ ವಲಯ ಅವರ ಕೈವಶವಾಗಿ ಅತ್ಯಧಿಕ ಲಾಭ ತರುವ ಯೋಜನೆಗಳಲ್ಲಿ ಮಾತ್ರವೇ ಹಣ ಹೂಡಿಕೆಯಾಗುತ್ತದೆ.

ಸರ್ಕಾರದ 340 ಬಿ ಕಾರ್ಯಕ್ರಮದ ಅನ್ವಯ, ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳು, ಅತ್ಯಧಿಕ ರಿಯಾಯಿತಿಯಲ್ಲಿ ಔಷಧಗಳನ್ನು ಖರೀದಿಸಿ, ರೋಗಿಗಳಿಗೆ ತಮ್ಮಿಷ್ಟ ಬಂದ ಬೆಲೆಗೆ ಮಾರಾಟ ಮಾಡಿ ಇದರಿಂದ ಸಂಗ್ರಹವಾದ ಹಣವನ್ನು ಉಳಿತಾಯ ಮಾಡಿ ಬಡ ರೋಗಿಗಳಿಗೆ ಕಡಿಮೆ ಬೆಲೆಯಲ್ಲಿ ಔಷಧ ವಿತರಣೆ ಮಾಡುವುದಾಗಿತ್ತು. ಆದರೆ, ತೆರಿಗೆ ವಿನಾಯಿತಿ ಪಡೆದಂತಹ ದೊಡ್ಡ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಮತ್ತೆ ದೊಡ್ಡ ಔಷಧಿ ಕಂಪನಿಗಳು, ಇದರ ದುರ್ಲಾಭ ಪಡೆದು ಅತ್ಯಧಿಕ ಲಾಭ ಮಾಡಿಕೊಳ್ಳುತ್ತಿವೆ! ಹಾಗಾಗಿ, ಈ ಕಾರ್ಯಕ್ರಮದ ಉದ್ದೇಶ ನೆರವೇರದೆ, ರೋಗಿಗಳು ಮತ್ತು ತೆರಿಗೆದಾರರು ಹೆಚ್ಚಿನ ಹಣ ಪಾವತಿಸುವಂತಾಗಿದೆ.

ಸರ್ಕಾರದ ಈ ಎಲ್ಲಾ ಕ್ರಮಗಳಿಂದಾಗುವ ಆರ್ಥಿಕ ನಷ್ಟ ದಿಗ್ಭ್ರಮೆಗೊಳಿಸುವಂಥಾದ್ದು. ಸಾರ್ವಜನಿಕ ಆರೋಗ್ಯ ಸೇವೆಯ ಕುಸಿತ, ಶೈಕ್ಷಣಿಕ ಮಟ್ಟದ ಕುಸಿತ, ಈಗಾಗಲೇ ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿ ಆರ್ಥಿಕತೆಯ ಮತ್ತಷ್ಟು ಪತನ, ಇವುಗಳಿಂದ ಮುಂದಿನ ದಶಕದಲ್ಲಿ 450 ದಶಕೋಟಿ ಡಾಲರ್(ರೂ. 40000 ಶತಕೋಟಿಯಷ್ಟು) ನಷ್ಟವಾಗುವ ಅಂದಾಜಿದೆ.

### ಹವಾಮಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕತ್ತರಿ

ವಿಶ್ವದಾದ್ಯಂತ ಹವಾಮಾನಕ್ಕೆ ಸಂಬಂಧಿಸಿದಂತೆ, ಭೂಮಿಯ ತಾಪಮಾನ ಹೆಚ್ಚಳದಿಂದ ಆರೋಗ್ಯ ಕ್ಷೇತ್ರದ ಬಿಕ್ಕಟ್ಟು ತೀವ್ರಗೊಳ್ಳುತ್ತಲೇ ಇರುವಾಗ, ಇದನ್ನು ತಡೆಗಟ್ಟಲು ಈ ಹಿಂದೆ ಕೆಲವು ಕಾರ್ಯಕ್ರಮಗಳು ಜಾರಿಯಲ್ಲಿದ್ದವು; ವಾತಾವರಣದ ಶಾಖಮಟ್ಟ ತೀವ್ರಗತಿಯಲ್ಲಿ ಏರಿದಾಗ ಉಂಟಾಗುವ ಅನಾರೋಗ್ಯ, ಚಳಿಗಾಲದಲ್ಲಿ ಹೆಚ್ಚುವ ಅಸ್ತಮಾ ರೋಗ, ಹೆಚ್ಚುತ್ತಿರುವ ಸಾಂಕ್ರಾಮಿಕ ರೋಗಗಳು, ಪ್ರವಾಹಗಳು, ಅರಣ್ಯಗಳಲ್ಲಿನ ಬೆಂಕಿ, ಮತ್ತೆಮತ್ತೆ ಕಾಡುವ ಚಂಡಮಾರುತಗಳು, ಬರ, ಇವುಗಳಿಂದಾಗುವ ಮಾನಸಿಕ ಅನಾರೋಗ್ಯ, ಇವೆಲ್ಲವನ್ನೂ ವಿಜ್ಞಾನಿಗಳು ಬದಲಾಗುತ್ತಿರುವ ವಿಶ್ವ ಹವಾಮಾನದಿಂದಲೇ ಎಂದು ಕಂಡು ಹಿಡಿದು ಈ ಕುರಿತು ಕಾರ್ಯೋನ್ಮುಖರಾಗಿದ್ದರು. ಇದು ಸಾರ್ವಜನಿಕ ಆರೋಗ್ಯ ಸೇವೆಯನ್ನು ಸಮರ್ಪಕವಾಗಿ ರೂಪಿಸುವಲ್ಲಿ ಬಹಳವೇ ನೆರವಾಗಿತ್ತು. ಪಳೆಯುಳಿಕೆ ಇಂಧನದ ಬಳಕೆಯಿಂದಾಗುವ ಭೂ ತಾಪಮಾನ ಹೆಚ್ಚಳದ ವೈಜ್ಞಾನಿಕ ಸಂಶೋಧನೆಯನ್ನು ಅಲ್ಲಗಳೆದಿರುವ ಟ್ರಂಪ್, ಈ ಇಂಧನಕ್ಕೆ ಬದಲಿ ಇಂಧನ ಬಳಸುವ ಪ್ಯಾರಿಸ್ ಒಪ್ಪಂದದಿಂದ ಹಿಂದೆ ಸರಿದು, ಪಳೆಯುಳಿಕೆ ಇಂಧನದ ಬಳಕೆ ಮತ್ತು ಗಣಿಗಾರಿಕೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ! ಇದು, ಭೂ ತಾಪಮಾನ ಹೆಚ್ಚಳದಿಂದಾಗುವ ರೋಗಗಳ ತೀವ್ರ ಹೆಚ್ಚಳದಲ್ಲಿ ಪರಿಣಮಿಸಲಿರುವುದು ವೈದ್ಯರನ್ನು, ಸಂಶೋಧಕರನ್ನು ಅತೀವ ಚಿಂತೆಗೀಡು ಮಾಡಿದೆ.

### ಬಲಪಂಥೀಯ–ಫ್ಯಾಸೀವಾದಿ ನಿಲುವು

ಅನೇಕ ಕಲಾ ವಸ್ತು ಸಂಗ್ರಹಾಲಯಗಳಲ್ಲಿನ ಕಲಾವಿದರು, ಶಿಕ್ಷಕರು, ಇತಿಹಾಸಕಾರರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಸಾರ್ವಜನಿಕ ಶಾಲೆಗಳಲ್ಲಿನ ಕಲಾ ಸಂಬಂಧಿ ಕಾರ್ಯಕ್ರಮಗಳನ್ನು ನಿಲ್ಲಿಸಲಾಗಿದೆ. ರಾಷ್ಟ್ರೀಯ ವಸ್ತು ಸಂಗ್ರಹಾಲಯಗಳ ಬಾಗಿಲು ಮುಚ್ಚಿದ್ದು, ಲಕ್ಷಗಟ್ಟಲೆ ನಾಗರಿಕರು ತಮ್ಮ ಪರಂಪರೆಯನ್ನು ತಿಳಿದುಕೊಳ್ಳುವುದರಿಂದ ವಂಚಿತರಾಗುತ್ತಿದ್ದಾರೆ. 21 ವಸ್ತು ಸಂಗ್ರಹಾಲಯಗಳು ಮತ್ತು ಒಂದು ರಾಷ್ಟ್ರೀಯ ಮೃಗಾಲಯವನ್ನು ಒಳಗೊಂಡಿದ್ದ ಸ್ಮಿತ್‌ಸೋನಿಯನ್ ಸಂಸ್ಥೆಯಲ್ಲಿನ ಶಿಲಾಕೃತಿಗಳನ್ನು, ಸ್ಮಾರಕಗಳನ್ನು ತೆಗೆಯಲು ಆದೇಶಿಸಿರುವ ಟ್ರಂಪ್, ಅವನ್ನು, ತಮ್ಮ ಇತಿಹಾಸವನ್ನು ವಿಕೃತಗೊಳಿಸುವ, ಹಾಗಾಗಿ ಅನುಚಿತ ವೈಚಾರಿಕತೆಯನ್ನು ಪ್ರತಿಪಾದಿಸುವ ನಿರೂಪಣೆಗಳು ಎಂದು ಜರೆದಿದ್ದಾರೆ! ಅಲ್ಲಿ ಪ್ರಸ್ತುತ ಪಡಿಸಿರುವ ಅಮೆರಿಕಾದ ಜನಾಂಗದ ಇತಿಹಾಸವನ್ನು ಟ್ರಂಪ್ ಅಲ್ಲಗಳೆದಿರುವುದನ್ನು ಇತಿಹಾಸ ತಜ್ಞರು ಆಕ್ಷೇಪಿಸಿದ್ದಾರೆ. ಆದರೂ ಟ್ರಂಪ್ ಸರ್ಕಾರ ಈ ಕಲಾಕೃತಿಗಳನ್ನು ತೆಗೆದು ಹಾಕಲು ಕ್ರಮ ಕೈಗೊಳ್ಳುತ್ತಿದೆ ಅಲ್ಲದೆ ಸರ್ಕಾರಿ ಜಾಲತಾಣಗಳಿಂದ ಆಫ್ರಿಕನ್–ಅಮೆರಿಕನ್, ಮತ್ತಿತರ ಅಲ್ಪಸಂಖ್ಯಾತರ ಕುರಿತಾದ ಇತಿಹಾಸವನ್ನು ತೆಗೆದು ಹಾಕಿದೆ. ಇಂತಹ ಕ್ರಮಗಳ ಕುರಿತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಕೈಲ್ ಮೇಸ್, 'ಫ್ಯಾಸೀವಾದಿ ನಡೆ' ಎಂದು ಕರೆದಿದ್ದಾರೆ.

ತನ್ನ ತೀವ್ರ ಬಲಪಂಥೀಯ ವಿಚಾರಗಳಿಗೆ ವಿರುದ್ಧವಾಗಿರುವ ಎಲ್ಲಾ ಸಂಸ್ಥೆಗಳನ್ನು ಮುಚ್ಚಲು ಟ್ರಂಪ್ ಆದೇಶ ಹೊರಬಿದ್ದಿದೆ. ಕಲೆ–ವಿಜ್ಞಾನ–ಇತಿಹಾಸದ ವಸ್ತು ಸಂಗ್ರಹಾಲಯಗಳು, ಮೃಗಾಲಯಗಳು, ಸಸ್ಯ ಶಾಸ್ತ್ರೀಯ ಉದ್ಯಾನವನಗಳು, ಐತಿಹಾಸಿಕ ಸ್ಥಳಗಳು, ಇವೆಲ್ಲವನ್ನೂ ಒಳಗೊಂಡಿರುವಂತಹ, ಅನೇಕಾನೇಕ ಸಾಂಸ್ಕೃತಿಕ–ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ಕಡಿತಗೊಂಡಿದೆ. ಸಾರ್ವಜನಿಕ, ಶೈಕ್ಷಣಿಕ, ಶಾಲೆಗಳಲ್ಲಿನ, ಸಂಶೋಧನಾತ್ಮಕ, ಹೀಗೆ ಎಲ್ಲಾ ತರದ ಲೈಬ್ರರಿಗಳಿಗೆ ಅನುದಾನ ಸ್ಥಗಿತಗೊಂಡಿದೆ. ಈ ಮೂಲಕ ಜನರ ಜ್ಞಾನವೃದ್ಧಿಗಿರುವ ಅವಕಾಶಕ್ಕೆ ಕತ್ತರಿ ಹಾಕಲಾಗಿದೆ!

ಟ್ರಂಪ್‌ನ ಯೋಜನೆಯಿಂದ ಬಯಲಿಗೆ ಬಂದಿರುವುದೆಂದರೆ, ಇದು ಕೇವಲ ಮೌಲ್ಯಯುತವಾದುದ್ದನ್ನೆಲ್ಲವನ್ನೂ ನಾಶ ಮಾಡುವ ಹುಚ್ಚಲ್ಲ; ಬದಲಿಗೆ, ಎಲ್ಲದರ ಮೂಲವನ್ನು ಅಳಿಸಿ ಹಾಕಿ ಆಳ್ವಿಕೆ ನಡೆಸುವುದು ಎಂದು. ಇದು, ತಿಳಿವಳಿಕೆಯುಳ್ಳ, ಸಹಾನುಭೂತಿಯುಳ್ಳ, ನಾಗರಿಕ ಸಮಾಜದ ಚಿಂತನೆಯನ್ನೇ ನಾಶಗೈಯುವುದು. ಸಮಾಜ ಕಲ್ಯಾಣ ಯೋಜನೆಗಳಿಗೆ ಮೀಸಲಾಗಿಟ್ಟಿರುವ ಹಣವನ್ನು ಆರ್ಥಿಕತೆಯ ಮಿಲಿಟರೀಕರಣಕ್ಕೆ ಹೆಚ್ಚುವರಿಯಾಗಿ ಕೊಡುವುದೇ ಅವರ ಗುರಿಯಾಗಿದೆ. ಇಂದು ವಿಶ್ವ ಬಂಡವಾಳವಾದ ಮರಣಾಸನ್ನ ಅವಸ್ಥೆಯಲ್ಲಿದ್ದು, ಸಾಮಾಜಿಕ ಬೆಳವಣಿಗೆಯ ಅಜೇಯ ನಿಯಮದ ಪ್ರಕಾರ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿ ಅನಿವಾರ್ಯ; ಅದರ ಭೀತಿಯಿಂದ ತತ್ತರಿಸುತ್ತಿರುವ ಬಂಡವಾಳಶಾಹಿಗಳು ಜನರಲ್ಲಿ ಯಾವುದೇ ಆರೋಗ್ಯಕರ ಚಿಂತನೆ, ವಿವೇಚನಾಶೀಲ ಮತ್ತು ಒಗ್ಗೂಡಿಸುವ ಚಿಂತನಾ ಪ್ರಕ್ರಿಯೆ, ಐಕ್ಯತೆ ಮತ್ತು ಸೋದರತಾ ಭಾವ, ಗತ ವೈಭವದ ಪರಂಪರೆ, ಸೂಕ್ಷ್ಮ ಪರಿಜ್ಞಾನ, ಸೃಜನಶೀಲ ಸಾಮರ್ಥ್ಯ, ಚೆಲುವನ್ನು ಪ್ರಶಂಸಿಸುವ, ಮತ್ತದನ್ನು ಬೆಳೆಸುವ ಸಾಮರ್ಥ್ಯ, ಎಲ್ಲದಕ್ಕಿಂತ ಮಿಗಿಲಾಗಿ ಮಾನವನನ್ನಾಗಿಸುವ ಪ್ರಕ್ರಿಯೆ, ಇವುಗಳನ್ನು ಪೋಷಿಸುವ ಎಲ್ಲವನ್ನೂ ನಾಶ ಮಾಡಲು ಹೊರಟಿದ್ದಾರೆ. ಅಮೆರಿಕಾ ಅಥವಾ ಭಾರತ, ಎಲ್ಲೆಡೆಯ ಆಳುವ ಬಂಡವಾಳವಾದ–ಸಾಮ್ರಾಜ್ಯವಾದ ಮತ್ತದರ ಸೇವಕರಿಗೆ ತಮ್ಮ ಕೊನೆಗಳಿಗೆಯಲ್ಲಿ ಈ ವ್ಯವಸ್ಥೆಯ ಜೀವವನ್ನು ಹಿಡಿದಿಡಲು ಇರುವ ಮಾರ್ಗ ಇದೊಂದೇ. ಹಾಗಾಗಿಯೇ, ಟ್ರಂಪ್ ಅಥವಾ ಇತರ ದೇಶದಲ್ಲಿನ ಇಂತಹಾ ಆಳ್ವಿಕರು ಮಾನವತೆಯನ್ನು ಬೆಳಗುವ, ತಮ್ಮ ಕ್ರೂರ, ನಿರಂಕುಶ ಪ್ರಭುತ್ವಕ್ಕೆ ಸವಾಲೊಡ್ಡುವ ಎಲ್ಲವನ್ನೂ ನಾಶಗೊಳಿಸಲು ಕಾತುರರಾಗಿರುವುದು. ■



# ನ್ಯಾಯಮೂರ್ತಿ ಮನೆಯಲ್ಲಿ ಸುಟ್ಟ ನೋಟುಗಳು ಪತ್ತೆ : ಹಲವು ಸಂದೇಹ

ಮೇ 14ರಂದು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯ ಆವರಣದ ಕೊಠಡಿಯೊಂದರಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿತ್ತು. ಎರಡು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ವೇಳೆಯಲ್ಲಿ ನಾಲ್ಕೈದು ಗೋಣಿ ಚೀಲಗಳಲ್ಲಿ ಅರ್ಧ ಸುಟ್ಟ ಕಂತೆ ನೋಟುಗಳು ಪತ್ತೆಯಾದವು.

ಅಗ್ನಿ ಅವಘಡ ನಡೆದ ಸಂದರ್ಭದಲ್ಲಿ ನ್ಯಾ. ವರ್ಮಾ ಅವರು ಪತ್ನಿಯೊಂದಿಗೆ ಭೋಪಾಲ್‌ನಲ್ಲಿದ್ದರು. ನ್ಯಾಯಮೂರ್ತಿಗಳ ದೆಹಲಿ ನಿವಾಸದಲ್ಲಿ ಅವರ ತಾಯಿ, ಮಗಳು ಹಾಗೂ ಮನೆ ಕೆಲಸದವರಿದ್ದರು. ಮಾರ್ಚ್ 22ರಂದು ಸುಪ್ರೀಂಕೋರ್ಟ್ ತನ್ನ ವೆಬ್‌ಸೈಟ್‌ನಲ್ಲಿ ಅಗ್ನಿಶಮನ ಕಾರ್ಯಾಚರಣೆಯ ವಿಡಿಯೊವೊಂದನ್ನು ಪ್ರಕಟಿಸಿದ್ದು, ಅದರಲ್ಲಿ ಕೊಠಡಿಯಲ್ಲಿ ಚೀಲಗಳಲ್ಲಿ ಬಚ್ಚಿಟ್ಟಿದ್ದ ನೋಟುಗಳ ಕಂತೆಗಳು ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಮಾರ್ಚ್ 15ರಂದು ಲಕ್ನೋನಲ್ಲಿದ್ದ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ದೇವೇಂದ್ರಕುಮಾರ್ ಉಪಾಧ್ಯಾಯ ಅವರಿಗೆ ದೆಹಲಿ ಪೊಲೀಸ್ ಕಮಿಷನರ್ ಸಂಜಯ್ ಅರೋರಾ ಅವರು ಕರೆ ಮಾಡಿ ಇಡೀ ಪ್ರಕರಣದ ಮಾಹಿತಿಯನ್ನು ನೀಡುತ್ತಾರೆ. ಜಸ್ಟೀಸ್ ವರ್ಮಾ ಅವರ ಮನೆಯಲ್ಲಿ ಸಿಕ್ಕ ದಾಖಲೆಯಿಲ್ಲದ ನೋಟುಗಳ ಮಾಹಿತಿ ಪಡೆದ ಸುಪ್ರೀಂಕೋರ್ಟ್ ಕೊಲಿಜಿಯಂ ನ್ಯಾ. ವರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅವರ ಮಾತೃ ನ್ಯಾಯಾಲಯವಾದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡುವ ಪ್ರಸ್ತಾವನೆಯನ್ನು ಇರಿಸುತ್ತದೆ. ಅಲ್ಲದೇ, ವರ್ಗಾವಣೆ ಪ್ರಕ್ರಿಯೆ ಸ್ವತಂತ್ರ ನಿರ್ಧಾರವಾಗಿದ್ದು, ನ್ಯಾಯಮೂರ್ತಿಯ ಮೇಲೆ ನೋಟು ಸಿಕ್ಕ ಪ್ರಕರಣಕ್ಕೆ ಸಂಬಂಧಿಸಿ ನಡೆದಿರುವ ಆಂತರಿಕ ವಿಚಾರಣೆಗೂ ವರ್ಗಾವಣೆಗೂ ಸಂಬಂಧವಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸುತ್ತದೆ. ಆದರೆ, ಈ ಸ್ಪಷ್ಟನೆಯನ್ನು ನಂಬಲು ಯಾರೂ ತಯಾರಿಲ್ಲ.

ಘಟನೆಯ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದ ಬಳಿಕ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ ಖನ್ನಾ ಅವರು ತಕ್ಷಣವೇ ಕಾರ್ಯಪ್ರವೃತ್ತರಾಗಿ ನೋಟುಗಳು ಪತ್ತೆಯಾದ ಹಿನ್ನೆಲೆಯಲ್ಲಿ ನ್ಯಾ. ವರ್ಮಾ ಅವರ ಪಾತ್ರದ ಬಗ್ಗೆ ತನಿಖೆ ನಡೆಸಲು ಮೂವರು ಸದಸ್ಯರ ಆಂತರಿಕ ಸಮಿತಿಯೊಂದನ್ನು ರಚಿಸುತ್ತಾರೆ. ಅಲ್ಲದೇ, ವರ್ಮಾ ಅವರು ತಮ್ಮ ಮೊಬೈಲ್ ನಾಶಪಡಿಸದಂತೆ, ಅದರಲ್ಲಿನ ಸಂದೇಶಗಳು ಹಾಗೂ ಇತರ ವಿವರಗಳನ್ನು ತೆಗೆದುಹಾಕದಂತೆ ಸೂಚನೆ ನೀಡಲಾಗುತ್ತದೆ.

ಅಲ್ಲದೇ, ನ್ಯಾ. ಖನ್ನಾ ಅವರು ನ್ಯಾ. ವರ್ಮಾ ಅವರಿಂದ ಮೂರು ಪ್ರಶ್ನೆಗಳಿಗೆ ಲಿಖಿತ ಉತ್ತರ ಸಲ್ಲಿಸಲು ತಿಳಿಸುವಂತೆ ದಿಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಉಪಾಧ್ಯಾಯ ಅವರಿಗೆ ಸೂಚನೆ ನೀಡುತ್ತಾರೆ. ನ್ಯಾ. ವರ್ಮಾ ಅವರು ತಮ್ಮ ಮನೆಯಲ್ಲಿ ಸಿಕ್ಕ ಹಣಕ್ಕೆ ಸಂಬಂಧಿಸಿದಂತೆ ಏನು ಹೇಳುತ್ತಾರೆ, ಆ ಹಣದ ಮೂಲ ಯಾವುದು, ಮಾರ್ಚ್ 15ರಂದು ಬೆಳಿಗ್ಗೆ ಬೆಂಕಿಯಲ್ಲಿ ಅರೆ ಸುಟ್ಟ ನೋಟುಗಳನ್ನು ತೆರವುಗೊಳಿಸಿದ ವ್ಯಕ್ತಿ ಯಾರು ಎಂಬ ಪ್ರಶ್ನೆಗಳಿಗೆ ಉತ್ತರಿಸುವಂತೆ ಸೂಚಿಸಲಾಗಿರುತ್ತದೆ.

ಜಸ್ಟೀಸ್ ಯಶವಂತ ವರ್ಮಾ ಅವರು ಅಲ್ಲಿ ಸಿಕ್ಕ ನೋಟುಗಳ ಬಗ್ಗೆ ತಮಗೆ ಯಾವುದೇ ಅರಿವಿಲ್ಲ ಎಂಬುದನ್ನು ಹೇಳಿದ್ದಾಗ್ಯೂ, ಘಟನೆ ನಡೆದ ಬಳಿಕ ದೆಹಲಿಯ ತಮ್ಮ ನಿವಾಸಕ್ಕೆ ಮರಳಲು ಯಾವುದೇ ಧಾವಂತ ತೋರಿಸಲಿಲ್ಲ ಎಂಬುದು ಅಚ್ಚರಿಗೆ ಕಾರಣವಾಗಿದೆ. ಅಲ್ಲದೇ, ತಮ್ಮ ವೇತನದಲ್ಲಿ ಜಸ್ಟೀಸ್ ವರ್ಮಾ ಅವರು ಅಷ್ಟೊಂದು ಪ್ರಮಾಣದ ಹಣವನ್ನು ಉಳಿಸಲು ಸಾಧ್ಯವೇ ಇಲ್ಲ ಎನ್ನಲಾಗುತ್ತಿದೆ. ವರ್ಮಾ ಅವರು 1992ರಲ್ಲಿ ವಕೀಲರಾಗಿ ನೋಂದಣಿ ಮಾಡಿಕೊಂಡರು. 2014ರಲ್ಲಿ ನ್ಯಾಯಮೂರ್ತಿಯಾಗಿ ನೇಮಕವಾದರು. ಯಶಸ್ವಿ ವಕೀಲರು ಭಾರಿ ಪ್ರಮಾಣದ ಹಣವನ್ನು ಶುಲ್ಕ ರೂಪದಲ್ಲಿ ಪಡೆದಿರುತ್ತಾರೆ ಎನ್ನುವುದು ನಿಜ. ಹಾಗಿದ್ದರೆ, ಇಷ್ಟೊಂದು ಹಣ ಅವರು ವಕೀಲರಾಗಿದ್ದಾಗ ಗಳಿಸಿದ್ದ ಹಣವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದು ನ್ಯಾಯಯುತ ಮಾರ್ಗದಲ್ಲಿ ದುಡಿದದ್ದೇ ಸತ್ಯವೆಂದಾದರೆ ಆ ಹಣವನ್ನು ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳಲ್ಲಿ ತೊಡಗಿಸಿದ್ದರೆ ವಾರ್ಷಿಕ ಶೇ 7ರಿಂದ 8ರಷ್ಟು ಬಡ್ಡಿಯ ಹಣವಾದರೂ ಬರುತ್ತಿತ್ತು. ಅದನ್ನು ಹೂಡಿಕೆ ಮಾಡುವುದು ಬಿಟ್ಟು ಹೀಗೆ ಸುಮ್ಮನೇ ಏಕೆ ಇರಿಸಿದರು ಎಂಬ ಬಲವಾದ ಸಂಶಯ ವ್ಯಕ್ತವಾಗುತ್ತದೆ.

ಈ ಹಣ ಆಸ್ತಿ ಮಾರಾಟದಿಂದ ಬಂದದ್ದು ಎಂದು ತಿಳಿದುಕೊಂಡರೂ ಅಷ್ಟೂ ಹಣವನ್ನು ಚೆಕ್ ಮೂಲಕ ಪಡೆಯುವ ಬದಲು ನಗದು ರೂಪದಲ್ಲಿ ಪಡೆದಿದ್ದರೇ? ಹಾಗೆ ಪಡೆದಿದ್ದರೆ ತೆರಿಗೆಯಿಂದ ತಪ್ಪಿಸಿಕೊಂಡಂತಾಗುವುದಿಲ್ಲವೇ ಎಂಬ ಪ್ರಶ್ನೆಯೂ ಎದುರಾಗುತ್ತದೆ. ಅಷ್ಟು ಹಣ ಗಳಿಸಲು ಮತ್ತೊಂದು ಅಹಸ್ಯಕರ ದಾರಿ ಯಾವುದೆಂದರೆ ಆರೋಪಿಗಳಿಗೆ ಅನುಕೂಲಕರವಾಗುವ ತೀರ್ಪು ನೀಡುವುದು. ಹಣ ಪಡೆದು ಆರೋಪಿಗಳ ಪರವಾಗಿ ತೀರ್ಪು ನೀಡಲು ನ್ಯಾಯಾಧೀಶರಿಗೆ ಹಲವಾರು ದಾರಿಗಳಿವೆ. ಬಂಧಿತ ಆರೋಪಿಗೆ ಜಾಮೀನು ನೀಡಬೇಕಾದರೂ ನ್ಯಾಯಮೂರ್ತಿಗಳು ಅವರ ಪರವಾದ ತೀರ್ಪು ನೀಡಬೇಕಾಗುತ್ತದೆ. ಕೆಲ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾದ ತಕ್ಷಣವೇ ಕೆಲವರು ಬಂಧನದಿಂದ ರಕ್ಷಣೆ ನೀಡಲು ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸುತ್ತಾರೆ. ಆಗಲೂ ನ್ಯಾಯಾಧೀಶರು ಹಣ ಪಡೆದು ಪೂರಕ ತೀರ್ಪು ನೀಡುವ ಸಾಧ್ಯತೆಗಳಿವೆ. ಮತ್ತೊಂದು ವಿಷಯವೆಂದರೆ, ಜಸ್ಟಿಸ್ ವರ್ಮಾ ಸೂಚಿಸಿರುವಂತೆ, ಅವರ ವಿರುದ್ಧ ಪಿತೂರಿ ಹೆಣೆಯಲಾಗಿದೆಯೇ? ಅವರ ಮನೆಯಲ್ಲಿ ಹಣವನ್ನು ಹುದುಗಿಟ್ಟು, ಜನರ ಗಮನ ಸೆಳೆಯಲು ಬೆಂಕಿ ಹಾಕಲಾಯಿತೇ? ಹೀಗೆ ಆಗಿದ್ದಲ್ಲಿ ದೇಶದ ನ್ಯಾಯಾಂಗದ ಮೇಲಿನ ಪರಿಣಾಮವು ಮತ್ತಷ್ಟು ಭೀಕರವಾಗಿದೆ. ಈ ಆರೋಪವು ಸತ್ಯವೇ ಆಗಿದ್ದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಹಾಗೂ ಆಡಳಿತಾತ್ಮಕ ಯಂತ್ರದ ಕೈವಾಡವಿಲ್ಲದೆ ಇದು ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ.

### ಎಲ್ಲೆಡೆಯೂ ಹೆಚ್ಚುತ್ತಿರುವ ವ್ಯಾಪಕ ಭ್ರಷ್ಟಾಚಾರ: ಶೋಷಕ ಬಂಡವಾಳಶಾಹಿ ವ್ಯವಸ್ಥೆಯ ಪ್ರತೀಕ

ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಹಜವಾದ ನೀತಿ, ನಿಯಮ, ರೂಢಿಗಳನ್ನು ಮುರಿದು ವೈಯಕ್ತಿಕ ಲಾಭಕ್ಕಾಗಿ ಹಣದ ಆಮಿಷ ಒಡ್ಡುವ ಬೆಳವಣಿಗೆಗಳು ನಡೆಯುತ್ತಿವೆ. ಒಮ್ಮೊಮ್ಮೆ ಹಣದ ಬದಲು ಅಧಿಕಾರ, ಪ್ರತಿಷ್ಠೆ, ಮೋಸ ಮಾಡುವ ಮೂಲಕ ಕೆಲ ಲಾಭಗಳನ್ನು ಪಡೆದುಕೊಳ್ಳುವ ಘಟನೆಗಳೂ ಇವೆ. ಭ್ರಷ್ಟಾಚಾರವು ಬರೀ ಭಾರತ ಅಷ್ಟೇ ಅಲ್ಲದೇ ಜಗತ್ತಿನ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ದೇಶಗಳಲ್ಲಿ ಸಾಮಾನ್ಯ ಜನರ ಬದುಕನ್ನು ಅಸಹನೀಯವಾಗಿಸಿದ್ದು, ಭಾರಿ ದುಷ್ಪರಿಣಾಮವನ್ನು ಬೀರುತ್ತಿದೆ. ಹಣಕಾಸಿನ ಭ್ರಷ್ಟಾಚಾರ ಹಾಗೂ ಅಧಿಕಾರದ ದುರ್ಬಳಕೆಯ ಭ್ರಷ್ಟಾಚಾರದಿಂದಾಗಿ ಸಾಮಾನ್ಯ ಜನರ ಬದುಕು ಆರ್ಥಿಕವಾಗಿ ಅಷ್ಟೇ ಅಲ್ಲದೇ ಸಾಮಾಜಿಕವಾಗಿ, ನೈತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ದುರ್ಭರಗೊಂಡಿದೆ.

'ಪೊಲೀಸರು ಲಂಚ ಪಡೆಯುತ್ತಾರೆ' ಎಂಬ ಗಾದೆ ಈಗಾಗಲೇ ಇದೆ. ಆದರೆ, ತೆಗೆದುಕೊಳ್ಳದೇ ಇರುವವರು ಯಾರು ಎಂಬ ಪ್ರಶ್ನೆಗಳು ಇವೆ. ಭ್ರಷ್ಟಾಚಾರದ ಆರೋಪದಿಂದ ಯಾವೊಂದು ಇಲಾಖೆಯೂ ಹೊರಗುಳಿದಿಲ್ಲ.

ರಾಜಕೀಯ ಸಂಸ್ಥೆಗಳಲ್ಲಿ ಉತ್ತರದಾಯಿತ್ವದ ಕೊರತೆ ಕಾಡುತ್ತಿದೆ. ಸಚಿವರು ಹಾಗೂ ಆಡಳಿತ ಪಕ್ಷದ ನಾಯಕರು ಬಿಲಿಯನ್‌ಗಟ್ಟಲೆ ಭ್ರಷ್ಟಾಚಾರದ ಹಗರಣಗಳಲ್ಲಿ ಪಾಲುದಾರರಾಗಿರುವುದರಿಂದ ಲಂಚ ಪಡೆದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕುಂಟು ನೆಪಗಳನ್ನು ಹೇಳುತ್ತಿದ್ದಾರೆ. ಸಣ್ಣ ಪುಟ್ಟ ಭ್ರಷ್ಟಾಚಾರದ ಪ್ರಕರಣಗಳಲ್ಲಿ ಕೆಲವರನ್ನು ಹಿಡಿದಂತೆ ಮಾಡಿ ಭಾರಿ ಪ್ರಮಾಣದ ಲಂಚದ ಪ್ರಕರಣಗಳನ್ನು ಇತಿಹಾಸದ ಕಾಲಗರ್ಭದಲ್ಲಿ ಹೂತು ಹಾಕುವ ಕೆಲಸ ನಡೆಯುತ್ತಲೇ ಇರುತ್ತದೆ. ಮತ್ತೊಂದು ಹೊಸ ಪ್ರಕರಣ ಬೆಳಕಿಗೆ ಬಂದ ಬಳಿಕ ಹಳೆಯ ಪ್ರಕರಣ ಸಮಾಧಿಯಾಗುತ್ತದೆ.

ಬೃಹತ್ ಭ್ರಷ್ಟಾಚಾರದ ಪ್ರಕರಣಗಳಿಗೆ ಕಾರಣರಾದವರು ಶಿಕ್ಷೆಯ ಬಲೆಯಿಂದ ತಪ್ಪಿಸಿಕೊಳ್ಳುವುದಷ್ಟೇ ಅಲ್ಲದೇ ಅವರು ಯಾವುದೇ ತನಿಖೆ, ವಿಚಾರಣೆಗಳಿಂದಲೂ ಬಚಾವಾಗುತ್ತಾರೆ. ಬಂಧನದ ಭೀತಿಯಿಲ್ಲದೇ ಮುಕ್ತವಾಗಿ ಸಂಚರಿಸುತ್ತಾರೆ. ಸಚಿವರ ಹಿಂದೆ ಮುಂದೆ ಕಾಣಿಸಿಕೊಳ್ಳುತ್ತಾರೆ. ಸರ್ಕಾರದ ಕೃಪೆಯಿಂದ ನೀತಿ ನಿರೂಪಕ ಸಂಸ್ಥೆಗಳಲ್ಲಿ ಜಾಗ ಪಡೆದುಕೊಳ್ಳುತ್ತಾರೆ. ಆಯಕಟ್ಟಿನ ಹುದ್ದೆಗಳನ್ನೂ ಅಲಂಕರಿಸುತ್ತಾರೆ.

ಭ್ರಷ್ಟಾಚಾರವು ಕೆಲವೊಂದು ದುಷ್ಟ ರಾಜಕಾರಣಿಗಳ–ಆಡಳಿತಶಾಹಿಗಳ ಕೈಗಾರಿಕಾಪತಿಗಳ ಕೃತ್ಯ ಎಂಬ ನಂಬಿಕೆಯಿದೆ. ಆದರೆ ಭ್ರಷ್ಟಾಚಾರವು ಒಂದು ವ್ಯವಸ್ಥೆಯನ್ನು ಬಲಹೀನಗೊಳಿಸಲು ಸಾಧ್ಯವಾಗುವುದು ಒಂದು ವ್ಯವಸ್ಥೆಯೇ ಸಮಾಜದ ಮುನ್ನಡೆಗೆ ಮತ್ತು ನಾಗರಿಕತೆಯ ಬೆಳವಣಿಗೆಗೆ ಅಡ್ಡಗಲ್ಲಾಗಿ ನಿಂತಾಗ. ಆ ವ್ಯವಸ್ಥೆಯ ಫಲಾನುಭವಿಗಳು ಮತ್ತು ಅದರ ರಕ್ಷಕರು ಜನರ ಎಲ್ಲಾ ನ್ಯಾಯಯುತ ಆಕಾಂಕ್ಷೆಗಳನ್ನು ಮತ್ತು ಬೇಡಿಕೆಗಳನ್ನು ಹೊಸಕಿಹಾಕುತ್ತಾರೆ ಮತ್ತು ಅಧಿಕಾರದಲ್ಲಿ ಉಳಿಯುವುದಕ್ಕಾಗಿ ಎಲ್ಲಾ ರೂಢಿ ಆಚರಣೆಗಳನ್ನು ಮತು ನಿಯಮಗಳನ್ನು ಕಾಲಡಿಯಲ್ಲಿ ತುಳಿದು ಹೊಸಕಿ ಹಾಕುತ್ತಾರೆ. ಇಂದು ಬಂಡವಾಳಶಾಹಿ ವ್ಯವಸ್ಥೆಯು ಪ್ರತಿಗಾಮಿಯಾಗಿರುವುದರಿಂದ ಅದರ ಎಲ್ಲಾ ಅಂಗಾಂಗಳೂ ಸಹ ಭ್ರಷ್ಟಾಚಾರದಿಂದ ಆವೃತವಾಗಿವೆ. ಒಂದು ವ್ಯವಸ್ಥೆಯು ಹೊರನೋಟಕ್ಕೆ ಎಷ್ಟೇ ಬಲಿಷ್ಠವಾಗಿ ಕಂಡರೂ, ಒಳಗಿನಿಂದ ಗೆದ್ದಲು ಹತ್ತಿಕೊಂಡರೆ, ಅದರ ಪ್ರಮುಖ ಅಂಗಾಂಗಳನ್ನೇ ಅವು ತಿಂದುಬಿಡುತ್ತವೆ. ಅಂತೆಯೇ ಅಂತಹ ವ್ಯವಸ್ಥೆಯನ್ನು ಕಾಪಾಡುವವರೂ ಸಹ ಆ ಭ್ರಷ್ಟಾಚಾರದ ಎಂಜಲಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಭ್ರಷ್ಟಾಚಾರವು ಇಂದಿನ ಬಂಡವಾಳಶಾಹಿ ವ್ಯವಸ್ಥೆಯ ಆಧಾರಸ್ತಂಭವಾಗಿದೆ.

### ನ್ಯಾಯಾಂಗವೂ ಶುದ್ಧತೆ ಅಥವಾ ನ್ಯಾಯಪರತೆಯನ್ನು ಕಳೆದುಕೊಳ್ಳುತ್ತಿದೆಯೇ?

ಕಾರ್ಯಾಂಗ, ಶಾಸಕಾಂಗದ ಭ್ರಷ್ಟಾಚಾರದ ಬಗ್ಗೆ ಅರಿತಿರುವ ಸಾರ್ವಜನಿಕರು ಇಂದಿಗೂ ಕೆಲ ಮಟ್ಟಿಗೆ ನ್ಯಾಯಾಂಗದ ಮೇಲೆ ಭರವಸೆ ಇಟ್ಟಿದ್ದಾರೆ. ನ್ಯಾಯಾಂಗಕ್ಕೆ ಅಪರಿಮಿತ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ನೀಡಲಾಗಿದ್ದು, ಅದನ್ನು ಬಳಸಿಕೊಂಡು ನ್ಯಾಯಾಂಗ ವ್ಯವಸ್ಥೆಯು ಪ್ರಕರಣಗಳನ್ನು ಯಾವ ಪ್ರಲೋಭನೆಗೂ ಒಳಗಾಗದೇ ನಿಷ್ಪಕ್ಷಪಾತವಾಗಿ ನಿರ್ವಹಿಸಲಾಗುತ್ತಿದೆ ಎಂದು ಜನರನ್ನು ನಂಬಿಸಲಾಗಿದೆ. ನ್ಯಾಯಮೂರ್ತಿಗಳು ಯಾರ ಒತ್ತಡಕ್ಕೂ ಒಳಗಾಗದೇ ಸಾಕ್ಷಿಗಳನ್ನು ಆಧರಿಸಿ ಸೂಕ್ತ ಆದೇಶ ಹೊರಡಿಸುತ್ತಾರೆ ಎಂಬ ಭಾವನೆಯೇ ಇದೆ. ಹಾಗಾಗಿಯೇ ಅವರನ್ನು 'ನನ್ನ ಪ್ರಭುವೇ' ಎಂದು ಸಂಬೋಧಿಸುವ ರೂಢಿ ಬೆಳೆದು ಬಂದಿದೆ.

ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಫ್ಯಾಸಿಸ್ಟ್ ಸರ್ವಾಧಿಕಾರಿ ಆಡಳಿತದಲ್ಲಿ ನ್ಯಾಯಾಂಗದ ಪ್ರಕ್ರಿಯೆಗಳನ್ನು ತಿರುಚಿ ಆಡಳಿತಾಂಗದ ಇಚ್ಛೆಗಳಿಗನುಗುಣವಾಗಿ ನ್ಯಾಯಾಂಗದ ಮುದ್ರೆ ಹಾಕಿಸಿಕೊಳ್ಳುವ ಯತ್ನಗಳ ಬಗ್ಗೆ ಕೆಲ ನ್ಯಾಯಮೂರ್ತಿಗಳು ಆಗಾಗ ತಮ್ಮ ಅಸಮಾಧಾನ ಹೊರಹಾಕಿದ್ದಾರೆ.

ದುರದೃಷ್ಟವಶಾತ್ ಕಾರ್ಯಾಂಗದಿಂದ ಕೆಲ ಅನುಕೂಲಗಳನ್ನು ಪಡೆದುಕೊಳ್ಳಲು ಅಥವಾ ನಿವೃತ್ತಿ ಬಳಿಕ ಕೆಲ ಹುದ್ದೆಗಳನ್ನು ಗಿಟ್ಟಿಸಿಕೊಳ್ಳಲು ಕೆಲ ನ್ಯಾಯಾಧೀಶರು ಕಾರ್ಯಾಂಗವನ್ನು ಬೇಸರ ಮೂಡಿಸುವಂತೆ ಹೊಗಳುತ್ತಿದ್ದಾರೆ. ಪತ್ರಿಕೆಗಳಲ್ಲಿ ವರದಿಯಾದಂತೆ ತನಗೆ ಅನುಕೂಲಕರ ತೀರ್ಪನ್ನು ನೀಡಿದ ನ್ಯಾಯಾಧೀಶರೊಬ್ಬರನ್ನು ಬಿಜೆಪಿಯು ರಾಜ್ಯಸಭಾ ಸದಸ್ಯರನ್ನಾಗಿಯೂ, ಇನ್ನಿಬ್ಬರನ್ನು ರಾಜ್ಯಪಾಲರನ್ನಾಗಿಯೂ ನೇಮಿಸಿತು.

ಮತ್ತೊಂದೆಡೆ ದಿಟ್ಟವಾಗಿ, ಯಾವ ಪ್ರಭಾವಕ್ಕೂ ಒಳಗಾಗದೇ ಸೂಕ್ತ ತೀರ್ಪುಗಳನ್ನು ನೀಡಿದ ಧೈರ್ಯವಂತ, ಪ್ರಾಮಾಣಿಕ ನ್ಯಾಯಮೂರ್ತಿಗಳಿಗೆ ವರ್ಗಾವಣೆ ಶಿಕ್ಷೆ ನೀಡಿದ ಪ್ರಕರಣಗಳೂ ವರದಿಯಾಗಿವೆ. ಹೈಕೋರ್ಟ್ ನ್ಯಾಯಮೂರ್ತಿ ಒಬ್ಬರನ್ನು ಬೇರೆ ಹೈಕೋರ್ಟ್‌ಗೆ ಮಧ್ಯರಾತ್ರಿ ದಿಢೀರ್ ವರ್ಗಾವಣೆ ಮಾಡಲಾಯಿತು. ಮತ್ತೊಂದು ಪ್ರಕರಣದಲ್ಲಿಯೂ ಹೀಗೆ ಹೈಕೋರ್ಟ್ ನ್ಯಾಯಮೂರ್ತಿ ಒಬ್ಬರನ್ನು ಬೇರೆಡೆಗೆ ಅವಧಿಗೆ ಮುನ್ನವೇ ವರ್ಗಾಯಿಸಲಾಯಿತು.

ಈ ರೀತಿಯ ಘಟನೆಗಳ ಒಟ್ಟಾರೆ ಅರ್ಥವೇನೆಂದರೆ ಕೆಲವರ ವೈಯಕ್ತಿಕ ಲಾಭಕ್ಕಾಗಿ ನ್ಯಾಯಾಂಗ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ರಾಜಿ ಮಾಡಿಕೊಳ್ಳಬೇಕು ಎಂಬ ಅರ್ಥ ಬರುತ್ತದೆ. ಇದ-ರಿಂದಾಗಿ ನ್ಯಾಯಾಂಗವು ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿ-ಕೊಂಡು ಎಲ್ಲಾ ಪ್ರಕರಣಗಳನ್ನು ಯಾವುದೇ ಪ್ರಭಾವಕ್ಕೆ ಒಳಗಾಗದೇ ಸಮರ್ಥವಾಗಿ ನಿರ್ವಹಿಸಿ ತೀರ್ಪು ನೀಡಬೇಕು ಎಂಬ ಆಶಯಕ್ಕೆ ಧ-ಕ್ಕೆ ಬಂದಂತಾಗುತ್ತದೆ. ಒಂದೇ ಬಗೆಯ ಅಪರಾಧ ಎಸಗಿದವರಿಗೆ ಎರಡು ವಿಭಿನ್ನ ತೀರ್ಪುಗಳನ್ನು ನೀಡುವುದನ್ನು ಹೇಗೆ ಒಪ್ಪಲು ಸಾಧ್ಯ? ಭಾರೀ ಶುಲ್ಕ ಪಡೆಯುವ ವಕೀಲರು ಪ್ರಕರಣದ ದಿಕ್ಕನ್ನೇ ಬದಲಿಸಬಹುದು ಎಂದಾದರೆ ನ್ಯಾಯದ ಅರ್ಥವಾದರೂ ಎಲ್ಲಿ ಉಳಿಯುತ್ತದೆ?

ನ್ಯಾಯಮೂರ್ತಿಗಳೂ ಅಗತ್ಯಕ್ಕೆ ತಕ್ಕಂತೆ, ಒತ್ತಡ, ಆಮಿಷಗಳಿಗೆ ಒಳಗಾಗಿ ತಮ್ಮ ತೀರ್ಪುಗಳನ್ನು ಬದಲಿಸಿಕೊಳ್ಳುವಂತೆ ಒತ್ತಡ ಹೇರುವ ಜಾಲಕ್ಕೆ ಬಿದ್ದರೆ ಹೇಗೆ ಎಂಬ ಚಿಂತೆ ಪ್ರಜ್ಞಾವಂತರನ್ನು ಕಾಡುತ್ತಿದೆ. ಇಂತಹ ಘಟನೆಗಳು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಯಾವೊಂದು ಅಂಗವೂ ಭ್ರಷ್ಟಾಚಾರದ ರಾಡಿಯನ್ನು ಮೆತ್ತಿಸಿಕೊಳ್ಳದೇ ಇರುವುದು ಸಾಧ್ಯವೇ ಇಲ್ಲ ಎಂಬ ಆರೋಪಗಳಿಗೆ ಇಂಬು ಕೊಟ್ಟಂತಾಗುತ್ತದೆ. ನ್ಯಾ. ಯಶವಂತ ವರ್ಮಾ ಪ್ರಕರಣದಲ್ಲಿ ಅಂತಿಮ ತೀರ್ಪು ಏನು ಬರುತ್ತದೋ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಸಾಮಾನ್ಯ ಜನರಲ್ಲಿ ಹಲವು ಸಂಶಯಗಳು ಮೂಡಿದ್ದಂತೂ ಸುಳ್ಳಲ್ಲ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಇತ್ತೀಚೆಗೆ ಅವರಿಗೆ ಎರಡು ಅವಕಾಶಗಳನ್ನು ನೀಡಿದ್ದರು. ಒಂದು, ಪ್ರಕರಣದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಎರಡು, ಸಂಸತ್ತಿನಲ್ಲಿ ಮಹಾಭಿಯೋಗವನ್ನು ಎದುರಿಸಬೇಕು. ನ್ಯಾ. ವರ್ಮಾ ಅವರು ರಾಜೀನಾಮೆಯ ಪ್ರಸ್ತಾವವನ್ನು ತಿರಸ್ಕರಿಸಿದ್ದು, ಮಹಾಭಿಯೋಗವನ್ನು ಎದುರಿಸುವುದಾಗಿ ಹೇಳಿದ್ದಾರೆ. ಆ ಮೂಲಕ ಇದರ ಹಿಂದೆ ಯಾರು ಯಾರು ಇದ್ದಾರೆ ಎಂಬುದು ಬಯಲಾಗುವುದು ನಿಶ್ಚಿತವಾಗುತ್ತಿದೆ. ■

## ತುಮಕೂರು: ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ



ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಮಣಕಿಕೆರೆ ಭುವನೇಶ್ವರಿ ಪ್ರೌಢಶಾಲೆಯಲ್ಲಿ ಒಂದು ವಾರಗಳ ಕಾಲ ಗ್ರಾಮೀಣ ಮಕ್ಕಳಿಗಾಗಿ ಬೇಸಿಗೆ ಶಿಬಿರ ಸಂಘಟಿಸಲಾಗಿತ್ತು. ಎಐಕೆಕೆಎಂಎಸ್ ತುಮಕೂರು ಜಿಲ್ಲಾ ಸಮಿತಿ ಮತ್ತು ಶಾಲಾ ಆಡಳಿತ ಮಂಡಳಿಗಳು ಜಂಟಿಯಾಗಿ ಈ ಶಿಬಿರವನ್ನು ಆಯೋಜಿಸಿದ್ದವು.

# ಸರ್ಕಾರಿ ನೌಕರರು ಎದುರಿಸುತ್ತಿರುವ ಸಮಸ್ಯೆಗಳು

ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೌಕರರು ಅನೇಕ ರೀತಿಯ ಆಕ್ರಮಣಗಳನ್ನು, ದಾಳಿಗಳನ್ನು ಎದುರಿಸುತ್ತಿದ್ದಾರೆ. ಸೇವಾನಿರತರಲ್ಲದೆ ನಿವೃತ್ತರೂ ಸಹ ಬೂರ್ಜ್ವಾ ಸರ್ಕಾರಗಳು ಜಾರಿಗೊಳಿಸುತ್ತಿರುವ ಜಾಗತಿಕ ಬಂಡವಾಳಶಾಹಿಗಳ ನೌಕರ ವಿರೋಧಿ ನೀತಿಗಳಿಗೆ ಬಲಿಪಶುಗಳಾಗುತ್ತಿದ್ದಾರೆ. ತ್ವರಿತ ಗತಿಯಲ್ಲಿ ಸರ್ಕಾರಿ ಇಲಾಖೆಗಳ ಗಾತ್ರವನ್ನು ಕಡಿತಗೊಳಿಸುವುದು, ಖಾಯಂ ಹುದ್ದೆಗಳ ಜಾಗದಲ್ಲಿ ಗುತ್ತಿಗೆ ಆಧಾರಿತ ನೇಮಕಾತಿ ಮಾಡುವುದು, ಜನಕಲ್ಯಾಣ ಕಾರ್ಯಕ್ರಮಗಳನ್ನು ಹಿಂಪಡೆಯುವುದು – ಇವು ಜಾಗತೀಕರಣ ನೀತಿಯ ನಿಯಮಗಳಾಗಿವೆ. ಹಾಗಾಗಿಯೇ ಈಗ ಸರ್ಕಾರಿ ನೌಕರರ ಸಂಖ್ಯೆಯಲ್ಲಿ ಭಾರೀ ಇಳಿಮುಖ ಕಂಡುಬರುತ್ತಿದೆ. ಏಳನೇ ವೇತನ ಆಯೋಗದ ಸಂದರ್ಭದಲ್ಲಿ, ಕೇಂದ್ರ ಸರ್ಕಾರಿ ನೌಕರರ ಸಂಖ್ಯೆ 33 ಲಕ್ಷವಿತ್ತು. ಆದರೀಗ, ಪ್ರತಿ ಐದರಲ್ಲಿ ಒಂದು ಹುದ್ದೆ ಖಾಲಿ ಇದೆ. ರೈಲ್ವೆ ಒಂದರಲ್ಲೇ ಮೂರು ಲಕ್ಷ ಹುದ್ದೆಗಳು ಖಾಲಿ ಇವೆ. ನಿಜವಾಗಿ ನೋಡಿದಲ್ಲಿ, ಜನಸಂಖ್ಯೆಯ ಏರಿಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಇನ್ನೂ ಹೆಚ್ಚಿನ ಹುದ್ದೆಗಳ ಅವಶ್ಯಕತೆಯಿದೆ. ಆದರೆ ಪರಿಸ್ಥಿತಿ ಇದಕ್ಕೆ ವ್ಯತರಿಕ್ತವಾಗಿದೆ. ತತ್ಪರಿಣಾಮವಾಗಿ, ಹಾಲಿ ಇರುವ ನೌಕರರ ಮೇಲೆಯೇ ಮಿತಿಮೀರಿದ ಕೆಲಸದ ಒತ್ತಡ ಬಿದ್ದು, ಸೇವೆಯ ಗುಣಮಟ್ಟ ಕುಸಿಯುತ್ತಿದೆ. ಕಾರ್ಪೊರೇಟ್ ಕಂಪನಿಗಳಿಂದ ಬಂದ ವ್ಯಕ್ತಿಗಳನ್ನು ನೇರವಾಗಿ ಉನ್ನತ ಮಟ್ಟದ ಅಧಿಕಾರಿ ಸ್ಥಾನದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದ ಆಡಳಿತದಲ್ಲಿ ಕಾರ್ಪೋರೇಟ್ ಹಿತಾಸಕ್ತಿಯನ್ನು ಕಾಪಾಡಲು ಈ ಉಪಾಯ ಹೂಡಲಾಗಿದೆ.

ಸರ್ಕಾರವು, ಏಕೀಕೃತ ನಿವೃತ್ತಿ ವೇತನ ಯೋಜನೆಯನ್ನು ಪ್ರಸ್ತಾಪಿಸುವ ಮೂಲಕ ಈಗಾಗಲೇ ತಿರಸ್ಕೃತವಾಗಿರುವ ಕಾಂಟ್ರಿಬ್ಯೂಟರಿ ಪೆನ್ಷನ್ ಸ್ಕೀಮನ್ನು ಉಳಿಸಿಕೊಳ್ಳುವ ಹುನ್ನಾರದಲ್ಲಿದೆ. ಎರಡು ದಶಕಗಳಿಂದಲೂ ಹಳೆ ನಿವೃತ್ತಿ ವೇತನ ಯೋಜನೆಗಾಗಿ ಹೋರಾಡುತ್ತಿರುವ ನೌಕರರ ಬೇಡಿಕೆಯನ್ನು ಕಡೆಗಣಿಸಲಾಗುತ್ತಿದೆ. ಏಕೀಕೃತ ನಿವೃತ್ತಿ ವೇತನ ಯೋಜನೆಯ ಮೂಲಕ ಕಷ್ಟಪಟ್ಟು ದುಡಿದ ನೌಕರರ ಹಣವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸುವ ಇರಾದೆ ಸರ್ಕಾರಕ್ಕಿದೆ. ದೊಡ್ಡ ದೊಡ್ಡ ಕಾರ್ಪೊರೇಟ್ ಕುಳಗಳು ಈ ಹಣವನ್ನು ಬಳಸಿ ಹಣಕಾಸು ಮಾರುಕಟ್ಟೆಯಲ್ಲಿ ಜೂಜಾಡುತ್ತವೆ. ಈ ಪ್ರಕ್ರಿಯೆಯಲ್ಲಿ ನೌಕರರ ನಿವೃತ್ತಿ ಹಣವು ಮಾರುಕಟ್ಟೆ ಏರಿಳಿತದಲ್ಲಿ ಸಿಲುಕುವ ಅಪಾಯ ಎದುರಾಗುತ್ತದೆ. ಮತ್ತೊಂದು ವಿಷಯವೆಂದರೆ, ಎಂಟನೇ ವೇತನ ಪರಿಷ್ಕರಣದ ಪ್ರಕ್ರಿಯೆಯಲ್ಲಿ ತುಂಬಾ ವಿಳಂಬವಾಗುತ್ತಿರುವುದು. ವೇತನ ಪರಿಷ್ಕರಣೆ ಮತ್ತು ಡಿಎ ಏರಿಕೆಯಾನಂತರವೂ, ಐಎಂಎಂ ವರದಿಯ ಪ್ರಕಾರ, ಭಾರತದ ಸರ್ಕಾರೀ ನೌಕರರ ನೈಜ ವೇತನವು ಪ್ರತಿ ವರ್ಷ ಶೇ.1 ರಷ್ಟು ಇಳಿಯುತ್ತಿದೆ. ಕೋವಿಡ್ ಸಾಂಕ್ರಾಮಿಕದ ನೆಪದಲ್ಲಿ ಹದಿನೆಂಟು ತಿಂಗಳ ಕಾಲ ಡಿಎ ನೀಡುವುದನ್ನು ಸರ್ಕಾರ ಹಿಡಿಟ್ಟುಕೊಂಡಿದೆ. ಇದು ವೇತನದ ಕಳ್ಳತನವಲ್ಲದೆ ಮತ್ತೇನು?

ಇದರ ಜೊತೆಗೆ, ನೌಕರ ಸಂಘಟನೆಯ ಚಟುವಟಿಕೆಗಳ ಮೇಲೆ ಹೇರಿರುವ ವಿವಿಧ ನಿರ್ಬಂಧಗಳು ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ದಿಕ್ಕಿನಲ್ಲಿ ಸರ್ಕಾರವನ್ನು ಮಣಿಸುವ ಸಾಮೂಹಿಕ ಶಕ್ತಿಗೆ ಧಕ್ಕೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು ಕಷ್ಟಪಟ್ಟು ಗಳಿಸಿದ ಹಕ್ಕುಗಳನ್ನು ಉಳಿಸಿಕೊಳ್ಳಲು ಬಲಿಷ್ಠ ನಿರಂತರ ಹಾಗೂ ಐಕ್ಯ ಹೋರಾಟ ಕಟ್ಟಬೇಕಿದೆ.

# ರೈತ-ಕೃಷಿ ಕಾರ್ಮಿಕರ ಜ್ಞಾನದ ವಿಸ್ತಾರ ಹೆಚ್ಚು ಮಾಡುವೆಡೆಗೆ ಎಐಕೆಕೆಎಂಎಸ್ ಮುನ್ನಡೆ

ರೈತ ಸಮುದಾಯವನ್ನು ಸೈದ್ಧಾಂತಿಕವಾಗಿ ಸಿದ್ಧಗೊಳಿಸಲು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ರಾಜ್ಯದ ವಿವಿಧೆಡೆ ಶಿಬಿರಗಳನ್ನು ಸಂಘಟಿಸಿತು. ಎಐಕೆಕೆಎಂಎಸ್ ರಾಜ್ಯಾದ್ಯಂತ ರೈತರ ಜ್ವಲಂತ ಸಮಸ್ಯೆಗಳ ವಿರುದ್ಧ ನಿರಂತರವಾಗಿ ಹೋರಾಟಗಳನ್ನು ಬೆಳೆಸುತ್ತಿರುವ ಏಕೈಕ ಕ್ರಾಂತಿಕಾರಿ ರೈತ ಸಂಘಟನೆ. ಹೋರಾಟದ ಜೊತೆ ಜೊತೆಗೆ ರೈತರ ಮತ್ತು ಕೃಷಿ ಸಮಸ್ಯೆಗಳಿಗೆ ಅಂತಿಮ ಪರಿಹಾರವನ್ನು ಕಂಡುಕೊಳ್ಳದೇ ಹೋದರೆ ರೈತ ಚಳುವಳಿಗಳು ಅವುಗಳ ಗಮ್ಯಸ್ಥಾನವನ್ನು ಮುಟ್ಟಲು ಸಾಧ್ಯವಿಲ್ಲ. ಆದ್ದರಿಂದ ರೈತರಲ್ಲಿ ವೈಚಾರಿಕತೆಯನ್ನು ಮತ್ತು ಉನ್ನತ ವಿಚಾರಗಳನ್ನು ಉದ್ದೀಪಿಸುವ ಉದ್ದೇಶದಿಂದಾಗಿ ಹಲವಾರು ವೈಚಾರಿಕ ಚರ್ಚೆಗಳನ್ನು, ಅಧ್ಯಯನ ಶಿಬಿರಗಳನ್ನು ಆಯೋಜಿಸುತ್ತಾ ಬಂದಿದೆ.

**ಧಾರವಾಡ:** ಒಂದು ದಿನದ ಈ ಶಿಬಿರದಲ್ಲಿ 13 ಹಳ್ಳಿಗಳಿಂದ 30ಕ್ಕೂ ಹೆಚ್ಚು ರೈತ ಮತ್ತು ಕೃಷಿ ಕಾರ್ಮಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಎಐಕೆಕೆಎಂಎಸ್ ರಾಜ್ಯಾಧ್ಯಕ್ಷರಾದ ಕಾ. ಎಂ.ಶಶಿಧರ್ ಶಿಬಿರವನ್ನುದ್ದೇಶಿಸಿ, ಮಾನವ ಸಮಾಜ ಬೆಳೆದು ಬಂದ ದಾರಿ ಹಾಗೂ ಕೃಷಿಯ ಉಗಮ ವಿಷಯದ ಕುರಿತಾಗಿ ಸುದೀರ್ಘವಾಗಿ ಮಾತನಾಡಿದರು. ಆದಿಮಾನವನ ಕಾಲದಿಂದ ಇಂದಿನವರೆಗೆ ಆಗಿರುವ ಬೆಳವಣಿಗೆಯು, ಮಾರ್ಕ್ಸ್‌ವಾದ ತೋರಿಸಿಕೊಟ್ಟಂತೆ, ನಿಯಮಾನುಸಾರವಾಗಿ ಬೆಳೆಯುತ್ತಿದೆ. ಮಾನವನ ವಿಕಾಸದ ನಂತರ ಸಮಾಜದ ಬೆಳವಣಿಗೆಯ ಗತಿಯಲ್ಲಿ, ಹೆಣ್ಣುಮಕ್ಕಳ ಆವಿಷ್ಕಾರದಿಂದ ಕೃಷಿ ಉದಯವಾಯಿತು. ಖಾಸಗಿ ಆಸ್ತಿ ಹಾಗೂ ವರ್ಗಗಳು ಹುಟ್ಟಿಕೊಂಡವು. ಖಾಸಗಿ ಆಸ್ತಿಗಾಗಿ ಕೈಬೆರಳೆಣಿಕೆಯಷ್ಟು ಜನರು ವಿಶಾಲ ಜನಸ್ತೋಮವನ್ನು ಶೋಷಿಸಿ ಆಸ್ತಿ ಮಾಡಿಕೊಂಡರು. ಅದೇ ಮುಂದೆ ಬಂಡವಾಳವಾಯಿತು. ಈಗ ಬಂಡವಾಳಶಾಹಿ ವ್ಯವಸ್ಥೆ ಕಾರ್ಮಿಕರನ್ನು, ರೈತರನ್ನು, ಮಹಿಳೆಯರನ್ನು, ಒಟ್ಟಾರೆಯಾಗಿ ದುಡಿಯುವ ವರ್ಗವನ್ನು ನಿರ್ದಯ ಶೋಷಣೆಗೆ ಗುರಿ ಮಾಡಿದೆ. ಇಂದಿನ ರೈತರ ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಈ ಶೋಷಕ ವ್ಯವಸ್ಥೆಯೇ ಮೂಲಕಾರಣ. ಹಾಗಾಗಿ ರೈತರ ಕ್ರಾಂತಿಕಾರಿ ಚಳುವಳಿಯು ಅಂತಿಮವಾಗಿ ಸಮಾಜವಾದಿ ಕ್ರಾಂತಿಯ ಹೋರಾಟದೊಂದಿಗೆ ಮಿಳಿತವಾಗಬೇಕು. ಆ ನಿಟ್ಟಿನಲ್ಲಿ ರೈತ ಚಳುವಳಿಯನ್ನು ಸಂಘಟಿಸಬೇಕೆಂದು ಎಂದು ಕರೆ ನೀಡಿದರು. ಧಾರವಾಡ ಜಿಲ್ಲಾ ಕಾರ್ಯದರ್ಶಿಗಳಾದ ಕಾಮ್ರೇಡ್ ಶರಣಬಸವ ಗೋನವಾರ ರಾಜ್ಯ ಮತ್ತು ಜಿಲ್ಲಾ ಸಮಿತಿಗಳಿಂದ ನಡೆಸಿದ ಯಶಸ್ವಿ ಹೋರಾಟಗಳ ಬಗ್ಗೆ ವಿವರಣೆ ನೀಡಿದರು. ಜಿಲ್ಲಾ ಅಧ್ಯಕ್ಷರಾದ ಕಾಮ್ರೇಡ್ ದೀಪಾ ಉಪಸ್ಥಿತರಿದ್ದರು.

**ರಾಯಚೂರು:** ದೇವದುರ್ಗ ತಾಲೂಕಿನ ಅನ್ವರ್ ಗ್ರಾಮ: ಈ ಶಿಬಿರವನ್ನು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಯಚೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಚಂದ್ರಗಿರೀಶ್ ನಡೆಸಿಕೊಟ್ಟರು. ಜಿಲ್ಲಾ ಕಾರ್ಯದರ್ಶಿಗಳಾದ ಮಲ್ಲನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷರಾದ ದುರ್ಗಣ್ಣ ಉಪಸ್ಥಿತರಿದ್ದರು. ಈ ಶಿಬಿರದಲ್ಲಿ 50ಕ್ಕೂ ಹೆಚ್ಚು ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದ್ದರು.

**ಬಳ್ಳಾರಿ:** ಶಿಬಿರವು ಅತ್ಯಂತ ಉತ್ಸಾಹದಾಯಕವಾಗಿ ನಡೆಯಿತು. ಎಐಕೆಕೆಎಂಎಸ್ ರಾಜ್ಯ ಉಪಾಧ್ಯಕ್ಷರಾದ ಕಾ. ವಿ.ನಾಗಮ್ಮಾಳ್ ಮಾತನಾಡಿ, ಇಂದು ಬಲಿಷ್ಠ ರೈತ ಸಂಘಟನೆಯನ್ನು ಕಟ್ಟುವ ಅವಶ್ಯಕತೆಯನ್ನು ಒತ್ತಿ ಹೇಳಿದರು ಮತ್ತು ಹೇಗೆ ಗ್ರಾಮ ಮಟ್ಟಗಳಿಂದ ರೈತರು ಹಾಗೂ ಕೃಷಿ ಕಾರ್ಮಿಕರ ಸಂಘಟನೆಯನ್ನು ಕಟ್ಟಬೇಕು ಮತ್ತು ಹೋರಾಟಕ್ಕೆ ಸಿದ್ಧಗೊಳಿಸಬೇಕೆನ್ನುವುದರ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಿಕೊಟ್ಟರು. ಜಿಲ್ಲಾ ಅಧ್ಯಕ್ಷರಾದ ಗೋವಿಂದ್ ಮತ್ತು ಜಿಲ್ಲಾ ಕಾರ್ಯದರ್ಶಿಗಳಾದ ಗುರಳ್ಳಿ ರಾಜ ಸಹ ಮಾತನಾಡಿದರು. ಸುಮಾರು 30ಕ್ಕೂ ಹೆಚ್ಚು ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದ್ದರು.


ಬಳ್ಳಾರಿ



ಧಾರವಾಡ

# ಐಪಿಎಲ್ ವಿಜಯೋತ್ಸವದ ದುರಂತ: ಎಸ್‌ಯುಸಿಐ(ಸಿ) ಸಂತಾಪ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) –[ಎಸ್‌ಯುಸಿಐ(ಸಿ)] ಕರ್ನಾಟಕ ರಾಜ್ಯ ಸಮಿತಿಯು ಐಪಿಎಲ್ ವಿಜಯೋತ್ಸವದ ವೇಳೆ ಕಾಲ್ತುಳಿತಕ್ಕೆ ತುತ್ತಾದ ಆರ್‌ಸಿಬಿ ಅಭಿಮಾನಿಗಳ ಸಾವಿನ ಬಗ್ಗೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಈ ದುರಂತದಲ್ಲಿ ಮಡಿದವರ ಸಾವಿಗೆ ಸೂಕ್ತ ಪರಿಹಾರವನ್ನು ನೀಡಬೇಕು ಎಂದೂ ಆಗ್ರಹಿಸುತ್ತದೆ.

ಜೂನ್ 4ರಂದು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ದುರ್ಘಟನೆಗೆ ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆಯ ಕಾರ್ಯಕ್ರಮದ ಆಯೋಜಕರನ್ನು ನೇರವಾಗಿ ಹೊಣೆಗಾರರನ್ನಾಗಿಸಬೇಕು. ಐಪಿಎಲ್ 18ರ ಆವೃತ್ತಿಯಲ್ಲಿ ಆರ್‌ಸಿಬಿಯು ಗಳಿಸಿದ ವಿಜಯದಿಂದ ನಿರ್ಮಾಣವಾಗಿದ್ದ ಉದ್ರೇಕಕಾರಿ ಪರಿಸ್ಥಿತಿಯಲ್ಲಿ, ಸೂಕ್ತವಾದ ವ್ಯವಸ್ಥೆಯನ್ನು ಮಾಡದೆ, ಭಾರಿ ಪ್ರಚಾರವನ್ನು ಗಿಟ್ಟಿಸುವ ಏಕೈಕ ಉದ್ದೇಶದಿಂದ ಸಂಘಟಿಸಿದ ತರಾತುರಿಯ ಕಾರ್ಯಕ್ರಮದಿಂದಾಗಿ 11 ಅಮಾಯಕ ಜೀವಗಳು ಬಲಿಯಾಗಿವೆ.

ಐಪಿಎಲ್ ಟೂರ್ನಮೆಂಟ್‌ನ ಬಗ್ಗೆ ವಿಪರೀತ ಉನ್ಮಾದವನ್ನು ಹುಟ್ಟು ಹಾಕಲು, ಕೆಲವು ಮುಖ್ಯ ವಾಹಿನಿಯ ಮಾಧ್ಯಮಗಳು, ಐಪಿಎಲ್‌ನಲ್ಲಿ ಆಡುವ ತಂಡಗಳ ಹಿಂದಿರುವ ಬೃಹತ್ ಹಣದ ಥೈಲಿಗಳು ಮತ್ತು ಲಾಭಕ್ಕಾಗಿ ಅವರ ಹಿಂಗದ ಹಸಿವು ಹಾಗೂ ಸಾಮಾಜಿಕ ಮಾಧ್ಯಮದ ಕೆಲವು ವಿಭಾಗಗಳು ನಡೆಸಿದ ಅಬ್ಬರವೂ ಸಹ ಈ ದುರಂತದ ಘಟನೆಯು ನಡೆಯಲು ಪೂರಕ ಸನ್ನಿವೇಶವನ್ನು ನಿರ್ಮಾಣ ಮಾಡಿತ್ತು. ಸಂತಸದಾಯಕ ಸಂದರ್ಭವಾಗಬೇಕಿದ್ದದ್ದು ಹೃದಯ ಕಲಕುವ ದುರ್ಘಟನೆಯಲ್ಲಿ ಕೊನೆಗೊಂಡಿದೆ.

ಪ್ರಚಾರದ ಬೆನ್ನೇರಿ ಹೋದ ಕರ್ನಾಟಕ ಸರ್ಕಾರವೂ ಸಹ ತರಾತುರಿಯಲ್ಲಿ ವಿಧಾನಸೌಧದ ಮೆಟ್ಟಿಲ ಮೇಲೆ ಸಂಘಟಿಸಿದ ಕಾರ್ಯಕ್ರಮವು ಸಹ ಈ ದುರಂತಕ್ಕೆ ಸಿದ್ಧ ವಾತಾವರಣವನ್ನು ನಿರ್ಮಾಣ ಮಾಡಿತ್ತು. ಸಣ್ಣಪುಟ್ಟ ಜನತಾಂತ್ರಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಹಲವಾರು ಅಡೆತಡೆಗಳಿರುವಾಗ, ಭಾರೀ ಸಂಖ್ಯೆಯಲ್ಲಿ ಜನರು ಸೇರಲು ಅವಕಾಶ ನಿರ್ಮಾಣವಾದದ್ದಾದರೂ ಹೇಗೆ, ನಡೆದಿರುವ ಲೋಪಗಳೇನು ಎಂಬ ಬಗ್ಗೆ ಒಂದು ಸಮಗ್ರ ತನಿಖೆಯು ಮಾತ್ರ ಬೆಳಕು ಚೆಲ್ಲಲು ಸಾಧ್ಯ ಎಂದು ಎಸ್‌ಯುಸಿಐ(ಸಿ) ನಂಬುತ್ತದೆ.



## ವಿಜಯಪುರ: 11.05.2025: ಜೆಸಿಟಿಯು ಜಿಲ್ಲಾ ಸಮಾವೇಶ

ನಗರದ ಜಿಲ್ಲಾ ಸಹಕಾರಿ ಯೂನಿಯನ್ ಭವನದಲ್ಲಿ ಜಂಟಿ ಕಾರ್ಮಿಕ ಸಂಘಟನೆಗಳ (JCTU) ಜಿಲ್ಲಾ ಸಮಿತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಸಮಾವೇಶದಲ್ಲಿ ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಎನ್.ಎಸ್. ವೀರೇಶ್ ಮಾತನಾಡುತ್ತಾ, ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ಕಾರ್ಮಿಕ ಸಂಹಿತೆಗಳು ಹಾಗೂ ನೀತಿಗಳ ವಿರುದ್ಧ ಬಲಿಷ್ಠ ಹೋರಾಟ ಬೆಳೆಸಲು ಕರೆ ನೀಡಿದರು. ಸಮಾವೇಶವನ್ನು JCTU ರಾಜ್ಯ ಜಂಟಿ ಕಾರ್ಯದರ್ಶಿ, ಕಾ. ಸುನಂದಾ ಎಚ್.ಎಸ್. ಉದ್ಘಾಟಿಸಿದರು.ಕಾ. ಅಣ್ಣಾರಾಯ ಇಳಗೇರ, ಜಿಲ್ಲಾ ಅಧ್ಯಕ್ಷರು, ಸಿಐಟಿಯು, ಕಾ. ಮಲ್ಲಿಕಾರ್ಜುನ ಎಚ್ ಟಿ, ಜಿಲ್ಲಾ ಅಧ್ಯಕ್ಷರು, ಎಐಯುಟಿ–ಯುಸಿ, ಕಾ. ಬಸವರಾಜ ಹೂಗಾರ, ಗ್ರಾಮೀಣ ಅಂಚೆ ನೌಕರರ ಜಿಲ್ಲಾ ಅಧ್ಯಕ್ಷರು, ಕಾ.ಕಿರಣ ಕೊಂಡಗೂಳಿ, ಬಿಎಸ್ಎನ್ಎಲ್ ಯೂನಿಯನ್ ಅಧ್ಯಕ್ಷರು, ಕಾ.ಮಹಾದೇವಿ ಧರ್ಮಶೆಟ್ಟಿ, ಜಿಲ್ಲಾ ಜಂಟಿ ಕಾರ್ಯದರ್ಶಿ, ಎಐಯುಟಿಯುಸಿ, ಕಾ. ಲಕ್ಷ್ಮಣ ಹಂದ್ರಾಳ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು, ವೇದಿಕೆಯಲ್ಲಿದ್ದರು.



# ನೂತನ ವಲಸೆ ಮತ್ತು ವಿದೇಶಿಯರ ಮಸೂದೆ 2025: ಸಿಎಎಯ ಕರಾಳ ನೆರಳು

"ಭಾರತವು ಧರ್ಮಶಾಲೆ ಅಲ್ಲ. ಸೆಕ್ಷನ್ 3ರ ಅಡಿಯಲ್ಲಿ ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿಯಾಗುವ ಯಾರಿಗಾದರೂ ಪ್ರವೇಶ ನಿರಾಕರಿಸುವ ಅವಕಾಶವಿದೆ. ಈಗ ಕಪ್ಪು ಪಟ್ಟಿಗೆ ಕಾನೂನು ಬೆಂಬಲವಿದೆ" ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ವಿದೇಶಿಯರಿಗಾಗಿ ತಂದಿರುವ ನೂತನ ವಲಸೆ ಮತ್ತು ವಿದೇಶಿಯರ ಮಸೂದೆ 2025 ಅನ್ನು ಕಳೆದ ಮಾರ್ಚ್ 11 ರಂದು ಲೋಕಸಭೆಯಲ್ಲಿ ಮಂಡಿಸಿದಾಗ ಪ್ರತಿಪಕ್ಷಗಳು ಅದರ ವಿರುದ್ಧ ಮಾಡಿದ ಟೀಕೆಗೆ ಉತ್ತರಿಸುತ್ತಾ ಅಮಿತ್ ಶಾ "ಪಾರ್ಸಿಗಳು ಪರ್ಷಿಯಾದಿಂದ ಭಾರತಕ್ಕೆ ಬಂದು ಇಲ್ಲಿ ಸುರಕ್ಷಿತರಾಗಿದ್ದಾರೆ. ಯಹೂದಿಗಳು ಸಹ ಇಸ್ರೇಲ್‌ನಿಂದ ಭಾರತಕ್ಕೆ ಬಂದರು. ಸಿಎಎ ಮೂಲಕ, ಕಿರುಕುಳಕ್ಕೊಳಗಾದ ಅಲ್ಪಸಂಖ್ಯಾತರಿಗೆ ನಾವು ಬಾಗಿಲು ತೆರೆದಿದ್ದೇವೆ. ಭಾರತದ ಅಭಿವೃದ್ಧಿಗಾಗಿ ಬರುವವರನ್ನು ನಾವು ಸ್ವಾಗತಿಸುತ್ತೇವೆ, ಆದರೆ ಬರ್ಮಾದ ರೋಹಿಂಗ್ಯಾ ಆಗಿರಲಿ ಅಥವಾ ಬಾಂಗ್ಲಾದೇಶಿಯಾಗಿರಲಿ, ಇಲ್ಲಿ ಸಂಘರ್ಷವನ್ನು ಸೃಷ್ಟಿಸಲು ಬಂದರೆ, ನಾವು ಅವರ ವಿರುದ್ಧ ಕಠಿಣವಾಗಿ ವರ್ತಿಸುತ್ತೇವೆ" ಎಂದರು. ಮಸೂದೆಯನ್ನು ಸಮರ್ಥಿಸುವಾಗ ಅವರ ಮಾತಿನ ಒಳಾರ್ಥವಿದು.

ಎಲ್ಲಾ ಪ್ರಮುಖ ವಿರೋಧ ಪಕ್ಷಗಳು ಈ ಕಠಿಣ ಮಸೂದೆಯನ್ನು ಒಕ್ಕೊರಲಿನಿಂದ ವಿರೋಧಿಸಿ, ಹೆಚ್ಚಿನ ಚರ್ಚೆಗಾಗಿ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಮತ್ತು ಸಾರ್ವಜನಿಕ ವಲಯ ಸಮಿತಿಗೆ (ಪಿಎಸ್‌ಸಿ) ಕಳುಹಿಸುವಂತೆ ಸರ್ಕಾರವನ್ನು ಒತ್ತಾಯಿಸಿದವು. ಆದರೆ ತನ್ನ ಯಾವತ್ತಿನ ಸ್ವಭಾವದಂತೆ ಬಿಜೆಪಿ ಸರ್ಕಾರ ಅದಕ್ಕೆ ಕ್ಯಾರೆ ಅನ್ನಲಿಲ್ಲ.

ಈಗ ಪ್ರಶ್ನೆಯೆಂದರೆ, ರೋಹಿಂಗ್ಯಾಗಳು ಮತ್ತು ಬಾಂಗ್ಲಾದೇಶಿಯರ ಒಳನುಸುಳುವಿಕೆಯ ಬಗ್ಗೆ ಇಂತಹ ಸಂಶಯ ಮತ್ತು ಹಾಗೂ ಆತಂಕಗಳೇಕೆ? ರೋಹಿಂಗ್ಯಾಗಳು ಅಥವಾ ಬಾಂಗ್ಲಾದೇಶಿಗಳ ಪ್ರಶ್ನೆ ಇಲ್ಲಿ ಹೇಗೆ ಮತ್ತು ಯಾಕೆ ಪ್ರಸ್ತುತ? ಅವರು ಹುಟ್ಟಿನಿಂದಲೇ ಮುಸ್ಲಿಮರಾಗಿರುವುದರಿಂದಲೇ? ಆರ್‌ಎಸ್‌ಎಸ್–ಬಿಜೆಪಿಯ ಸಿದ್ಧಾಂತದ ಪ್ರಕಾರ, ಮುಸ್ಲಿಮರು ಆಕ್ರಮಣಕಾರರು, ಜಿಹಾದಿಗಳು, ಭಯೋತ್ಪಾದಕರು ಮತ್ತು ತೊಂದರೆ ಕೊಡುವವರು. ಆದ್ದರಿಂದ, ಅವರ ಬಗ್ಗೆ ಕಠಿಣವಾಗಿಯೇ ವರ್ತಿಸಬೇಕು. ಅದಕ್ಕಾಗಿಯೇ ಈ ವಿವಾದಾತ್ಮಕ ಮತ್ತು ಕಠಿಣ ಮಸೂದೆಯ ಚರ್ಚೆಯಲ್ಲಿ ಭಾಗವಹಿಸುವಾಗ ಅಮಿತ್ ಶಾ ತಮ್ಮ ಭಾಷಣದಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆ, 2019 (ಸಿಎಎ) ಉಲ್ಲೇಖಿಸಿದ್ದು.

### ಸಿಎಎ ಎಂದರೇನು

2014 ರ ಡಿಸೆಂಬರ್ 31 ಕ್ಕಿಂತ ಮೊದಲು ಭಾರತಕ್ಕೆ ಆಗಮಿಸಿದ ಅಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳ ಕಿರುಕುಳಕ್ಕೊಳಗಾದ ಧಾರ್ಮಿಕ ಅಲ್ಪಸಂಖ್ಯಾತ ನಿರಾಶ್ರಿತರಿಗೆ ಭಾರತೀಯ ಪೌರತ್ವವನ್ನು ಒದಗಿಸಲು ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಡಿಸೆಂಬರ್ 11, 2019 ರಂದು ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಅರ್ಹ ಅಲ್ಪಸಂಖ್ಯಾತರು ಹಿಂದೂಗಳು, ಸಿಖ್ಖರು, ಬೌದ್ಧರು, ಜೈನರು, ಪಾರ್ಸಿಗಳು ಅಥವಾ ಕ್ರಿಶ್ಚಿಯನ್ನರಾಗಿರಬಹುದು. ಆದರೆ ಈ ಕಾನೂನು ಇಂತಹ ಇಸ್ಲಾಮಿಕ್ ದೇಶಗಳಿಂದ ವಲಸೆ ಬಂದ ಯಾವುದೇ ಮುಸ್ಲಿಂ ವಲಸಿಗರಿಗೆ ಅಂತಹ ಅರ್ಹತೆಯನ್ನು ನೀಡುವುದಿಲ್ಲ. ಜೊತೆಗೆ, 1980 ರ ದಶಕದಿಂದ ಭಾರತದಲ್ಲಿ ವಾಸಿಸುತ್ತಿರುವ 58,000 ಶ್ರೀಲಂಕಾದ ತಮಿಳು ನಿರಾಶ್ರಿತರೂ ಈ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ. ವಲಸಿಗರಿಗೆ ಭಾರತೀಯ ಪೌರತ್ವವನ್ನು ನೀಡಲು ಧರ್ಮವನ್ನು ಮಾನದಂಡವಾಗಿ ಬಹಿರಂಗವಾಗಿ ಬಳಸಿದ್ದು ಇದೇ ಮೊದಲು.

ಮುಸ್ಲಿಮರನ್ನು ಹೊರಗಿಡುವ ನೆಪವಾಗಿ, ಅವರು ಇಸ್ಲಾಮಿಕ್ ದೇಶಗಳಲ್ಲಿ ಧಾರ್ಮಿಕ ಕಿರುಕುಳಕ್ಕೆ ಬಲಿಯಾಗಲು ಸಾಧ್ಯವಿಲ್ಲ ಎಂಬ ವಾದವನ್ನು ಮುಂದಿಡಲಾಗಿತ್ತು. ಇದು ಅರ್ಧಸತ್ಯದ ವಾದ. ಉದಾಹರಣೆಗೆ, ಇಸ್ಲಾಮಿಕ್ ಸ್ಟೇಟ್‌ನ (ISIS) ಅಂಗಸಂಸ್ಥೆಯಾದ ದಿ ಇಸ್ಲಾಮಿಕ್ ಸ್ಟೇಟ್ ಆಫ್ ಖೊರಾಸನ್ ಪ್ರಾವಿನ್ಸ್ (ISKP) ಸಂಘಟನೆಯು, ಅಫ್ಘಾನಿಸ್ತಾನದಲ್ಲಿರುವ ಶಿಯಾ ಮುಸ್ಲಿಮರನ್ನು ನಿರಂತರ ಕಿರುಕುಳಕ್ಕೆ ಗುರಿಯಾಗಿಸಿದೆ. ಆದರೆ ತಾಲಿಬಾನ್ ಆಡಳಿತವು ಆತ್ಮಾಹುತಿ ದಳದ ಬಾಂಬ್ ದಾಳಿ, ಇನ್ನಿತರ ದಾಳಿಗಳ ಸಮಯದಲ್ಲಿ ಈ ಸಮುದಾಯವನ್ನು ರಕ್ಷಿಸಲು, ವೈದ್ಯಕೀಯ ನೆರವು ನೀಡಲು ಯಾವುದೇ ನಿರ್ಣಾಯಕ ಕ್ರಮವನ್ನು ತೆಗೆದುಕೊಂಡಿಲ್ಲ. ತೀವ್ರ ಆಂತರಿಕ ಮತ್ತು ಜಾಗತಿಕ ಟೀಕೆ ಮತ್ತು ದೇಶಾದ್ಯಂತ ನಿರಂತರ ಪ್ರತಿಭಟನೆಗಳ ನಡುವೆಯೂ, ಬಿಜೆಪಿ ಸರ್ಕಾರವು ಸಿಎಎ ಕಾಯ್ದೆಯನ್ನು ಜಾರಿಗೆ ತರಲು ಮೊಂಡುವಾದ ಹೂಡುತ್ತಲೇ ಇದೆ.

### ಪ್ರಸ್ತುತ ವಲಸೆ ಮಸೂದೆಯ ಪ್ರಮುಖ ಅಂಶಗಳು

ವಲಸೆ ಮತ್ತು ವಿದೇಶಿಯರ ಮಸೂದೆ–2025: ಇದು ವಿದೇಶಿಗರ ವಲಸೆ, ನೋಂದಣಿ, ಕಣ್ಗಾವಲು, ಬಂಧನ ಮತ್ತು ಗಡೀಪಾರುಗಳನ್ನು ನಿಯಂತ್ರಿಸುವಲ್ಲಿ ಏಕೀಕೃತ ಚೌಕಟ್ಟನ್ನು ರೂಪಿಸುವ ಪ್ರಸ್ತಾವನೆಯನ್ನು ಹೊಂದಿದೆ. ಮಸೂದೆಯು ಹಳೆಯ ಶಾಸನಗಳನ್ನು ಒಂದುಗೂಡಿಸಿ ನವೀಕರಿಸಲು ಸಹ ಯತ್ನಿಸುತ್ತಿದೆ. ಉದಾಹರಣೆಗೆ:

**ಪಾಸ್‌ಪೋರ್ಟ್ ಕಾಯ್ದೆ, 1920**

**ವಿದೇಶಿಯರ ಕಾಯ್ದೆ, 1939**

**ವಿದೇಶಿಯರ ಕಾಯ್ದೆ, 1946**

**ವಲಸೆ (ವಾಹಕರ ಹೊಣೆಗಾರಿಕೆ) ಕಾಯ್ದೆ, 2000**

ಈ ಮಸೂದೆಯನ್ನು ಭಾರತದಲ್ಲಿ ವಲಸೆ ಆಡಳಿತದ ನಿರ್ಣಾಯಕ ಅಂಶಗಳನ್ನು ತಿಳಿಸುವ 6 ಅಧ್ಯಾಯಗಳಲ್ಲಿ ಹರಡಿರುವ 36 ಕಲಮುಗಳಾಗಿ ವಿಂಗಡಿಸಿ ರಚಿಸಲಾಗಿದೆ. ಈ ಅಧ್ಯಾಯಗಳು ವಿಸ್ತಾರವಾದ ವಿಷಯ ವ್ಯಾಪ್ತಿಯನ್ನು ಹೊಂದಿದ್ದು, ವ್ಯಾಖ್ಯಾನಗಳು ಮತ್ತು ಸಾಮಾನ್ಯ ನಿಬಂಧನೆಗಳು, ವಿದೇಶಿಯರ ನಿಯಂತ್ರಣ ಮತ್ತು ನೋಂದಣಿ, ಜಾರಿ ಕಾರ್ಯವಿಧಾನಗಳು, ವೀಸಾ ವಿಧಗಳು ಮತ್ತು ಷರತ್ತುಗಳು, ಪ್ರಮುಖ ವಲಸೆ ಅಧಿಕಾರಿಗಳ ನೇಮಕ ಮತ್ತು ಕಾರ್ಯಗಳು, ಗಡೀಪಾರಿಗಾಗಿ ಕಾನೂನು ಕಾರ್ಯವಿಧಾನಗಳನ್ನು ಒಳಗೊಂಡಿದೆ. ಆದರೆ ಇದರಲ್ಲಿ ಹಿಂದೆ ವಿದೇಶಿಯರ ಕಾಯ್ದೆ 1946 ರಲ್ಲಿ ವಿದೇಶಿಯರಿಗಿದ್ದ ಯಾವುದೇ ನಿರ್ದಿಷ್ಟ ಹಕ್ಕುಗಳಿಲ್ಲ.

1946 ರ ವಿದೇಶಿಯರ ಕಾಯ್ದೆ 19 ನೇ ವಿಧಿಯ ಪ್ರಕಾರ, ವಿದೇಶಿಯರಿಗೆ ಕೆಳಗಿನ ಹಕ್ಕುಗಳನ್ನು ನೀಡಿತ್ತು: ಅ) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಆ) ಶಸ್ತ್ರಾಸ್ತ್ರಗಳಿಲ್ಲದೆ ಶಾಂತಿಯುತವಾಗಿ ಸೇರುವುದು, ಇ) ಸಂಘಗಳು ಮತ್ತು ಒಕ್ಕೂಟಗಳನ್ನು ರಚಿಸುವುದು, ಈ) ಭಾರತದಾದ್ಯಂತ ಮುಕ್ತವಾಗಿ ಓಡಾಡುವುದು, ಉ) ಭಾರತದ ಯಾವುದೇ ಭಾಗದಲ್ಲಿ ವಾಸಿಸುವುದು ಅಥವಾ ನೆಲೆಸುವುದು, ಊ) ಕಾನೂನಿನ ಮುಂದೆ ಸಮಾನತೆಯನ್ನು ಹೊಂದುವುದು ಮತ್ತು ಋ) ಯಾವುದೇ ಭಾರತೀಯ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುವುದು.

ಆದರೆ ಪ್ರಸ್ತುತ ವಲಸೆ ಮಸೂದೆಯು ಮೇಲೆ ತಿಳಿಸಿದ ಹಕ್ಕುಗಳಿಗೆ ತಿಲಾಂಜಲಿ ನೀಡಿದೆ. ಈ ಮಸೂದೆಯ ಹೊಸ ವೈಶಿಷ್ಟ್ಯವೆಂದರೆ, ರಾಷ್ಟ್ರೀಯ ವಲಸೆ ಪ್ರಾಧಿಕಾರ (NIA) ಎಂಬ ಶಾಸನಬದ್ಧ ಅತ್ಯುನ್ನತ ಸಂಸ್ಥೆಯನ್ನು ರಚಿಸುವುದು, ಇದು ವಿದೇಶಿ ಪ್ರಜೆಗಳ ಕೇಂದ್ರೀಕೃತ ಡಿಜಿಟಲ್ ಡೇಟಾಬೇಸ್ ಮತ್ತು ವಲಸೆ ನೀತಿಗೆ ಸಂಬಂಧಿಸಿದ ಎಲ್ಲವನ್ನೂ ನಿರ್ವಹಿಸುತ್ತದೆ. ಆದ್ದರಿಂದ, ಪ್ರತಿಯೊಬ್ಬ ವಿದೇಶಿಯರೂ ಎನ್‌ಐಎ ಡಿಜಿಟಲ್ ಕಣ್ಗಾವಲಿನಲ್ಲಿರುತ್ತಾರೆ.

### ಮಸೂದೆಯಲ್ಲಿ ಪುನರ್‌ರಚಿಸಲಾದ ವೀಸಾ ವ್ಯವಸ್ಥೆ

ಮಸೂದೆಯು ವಿದೇಶಿಯರಿಗೆ ನೀಡಲಾಗುವ ವೀಸಾಗಳನ್ನು ಈ ಕೆಳಗಿನಂತೆ ವರ್ಗೀಕರಿಸಿದೆ:

1. ವ್ಯಾಪಾರ ವೀಸಾ ಪ್ಲಸ್: ದೀರ್ಘಕಾಲವಿರುವ ವ್ಯಾಪಾರಿ ಪ್ರಯಾಣಿಕರಿಗೆ ಫಾಸ್ಟ್‌ಟ್ರ್ಯಾಕ್ ಕ್ಲಿಯರೆನ್ಸ್ ಮತ್ತು ಸರಳ ವ್ಯವಸ್ಥೆ

2. ಸ್ಟಾರ್ಟ್‌ಅಪ್ ವೀಸಾ: ಭಾರತದಲ್ಲಿ ಹೊಸನಮೂನೆಯ ಉದ್ದಿಮೆ ಸ್ಥಾಪಿಸ ಬಯಸುವ ಉದ್ದಿಮೆದಾರರಿಗೆ.

3. ಕೌಶಲ್ಯಪೂರ್ಣ ಪ್ರತಿಭಾ ವೀಸಾ: ಎಐ, ಜೈವಿಕ ತಂತ್ರಜ್ಞಾನ, ನವೀಕರಿಸುವ ಶಕ್ತಿ, ಮುಂತಾದ ಆದ್ಯತೆಯ ಕ್ಷೇತ್ರಗಳ ಪರಿಣಿತರಿಗೆ.

4. ಹೂಡಿಕೆದಾರರ ವೀಸಾ "ಭಾರತದ ಉದ್ದಿಮೆಗಳಲ್ಲಿ ಅಥವಾ ಮೂಲಭೂತ ಸೌಕರ್ಯಗಳಲ್ಲಿ ದೊಡ್ಡ ಮೊತ್ತವನ್ನು ಹೂಡುವ ವಿದೇಶಿಯರಿಗೆ.

5. ಸಾರಿಗೆ ವೀಸಾ ಮತ್ತು ಡಿಜಿಟಲ್ ಅಲೆಮಾರಿ ವೀಸಾ: ಜಾಗತಿಕ ಪ್ರಯಾಣ ಬೆಳೆಯುವ ಲಕ್ಷಣಗಳನ್ನು ಗುರುತಿಸುವುದು.

ಎಲ್ಲಾ ವೀಸಾಗಳು ಸ್ಪಷ್ಟವಾಗಿ ಕಂಡುಬರುವಂತೆ ಯಾವುದೇ ರೀತಿಯಿಂದಾದರೂ ವ್ಯಾಪಾರ, ವಹಿವಾಟಿಗೆ ಸಂಬಂಧಿಸಿದ್ದು, ಮುಖ್ಯವಾಗಿ ಬಂಡವಾಳಶಾಹಿ ವರ್ಗದ ಲಾಭಕ್ಕಾಗಿ ರೂಪಿತವಾಗಿವೆ. ಈ ಮಸೂದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವೀಸಾಗಳ ಬಗ್ಗೆ ಜಾಣಮೌನಧರಿಸಿದೆ!!

### ವಲಸೆ ಸಿಬ್ಬಂದಿಗೆ ಅಪಾರ ಅಧಿಕಾರ

"ಭಾರತದ ರಾಷ್ಟ್ರೀಯ ಭದ್ರತೆ, ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಅಪಾಯವಾಗುವ ಕಾರಣ, ಯಾವುದೇ ವಿದೇಶಿಯರಿಗೆ ಭಾರತಕ್ಕೆ ಪ್ರವೇಶಿಸಲು ಅಥವಾ ಉಳಿಯಲು ಅವಕಾಶ ಕೊಡಲು ಸಾಧ್ಯವಿಲ್ಲ ಎನ್ನುವಂತಿದ್ದರೆ ಅಂತಹವರಿಗೆ ಪ್ರವೇಶ ಕೊಡುವುದಿಲ್ಲ... ಮುಂದುವರೆದು ಹೇಳುವುದಾದರೆ, ಈ ವಿಷಯದಲ್ಲಿ ವಲಸೆ ಅಧಿಕಾರಿಯ ನಿರ್ಧಾರವು ಅಂತಿಮವಾಗಿರುತ್ತದೆ." (ವಲಸೆ ಮಸೂದೆ, ಅಧ್ಯಾಯ 2, ಕಲಮು 3.1) ಅದಕ್ಕಾಗಿಯೇ ಮಸೂದೆಯನ್ನು ವಿರೋಧಿಸುವವರು ಹೇಳಿದ್ದು: "...ಮಸೂದೆಯು ಕೇಂದ್ರಕ್ಕೆ ಅನಿರ್ಬಂಧಿತ ಅಧಿಕಾರಗಳನ್ನು ನೀಡಿದೆ ಮತ್ತು ವಲಸೆ ಅಧಿಕಾರಿಯ ನಿರ್ಧಾರವನ್ನು ಅಂತಿಮಗೊಳಿಸಿದೆ. ಈ ನಿಬಂಧನೆಯು "ಆಪತ್ತು" ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸದೆ ಆಪತ್ತು ಉಂಟು ಮಾಡುವ ಪಾಸ್‌ಪೋರ್ಟ್‌ಗಳನ್ನು ವಶಪಡಿಸಿಕೊಳ್ಳಲು ವಲಸೆ ಅಧಿಕಾರಿಗಳಿಗೆ ಅಧಿಕಾರ ನೀಡುತ್ತದೆ. ಈ ನಿಬಂಧನೆಯು ವಲಸೆ ಅಧಿಕಾರಿಗಳಿಗೆ ವಿದೇಶಿಗರ ಪಾಸ್‌ಪೋರ್ಟುಗಳನ್ನು ಮುಟ್ಟುಗೋಲು ಹಾಕಿಕೊಂಡು ಅವರಿಗೆ ಕಿರುಕುಳ ನೀಡುವ ಅನಿಯಂತ್ರಿತ ಅಧಿಕಾರವನ್ನು ನೀಡುತ್ತದೆ. ದುರಂತವೆಂದರೆ ಅಂತಹ ನಿರ್ಧಾರಗಳ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸುವ ಅವಕಾಶ ಇಲ್ಲ." (ಇಂಡಿಯನ್ ಎಕ್ಸ್‌ಪ್ರೆಸ್, 28.03.25) ಈ ಮಸೂದೆಯ ಅಧ್ಯಾಯ 5 ರ 26 ನೇ ವಿಧಿಯಲ್ಲಿ 'ಬಿಎನ್‌ಎಸ್‌ಎಸ್ 2023 ರ ಸೆಕ್ಷನ್ 58 ರ ಪ್ರಕಾರ, ಹೆಡ್ ಕಾನ್‌ಸ್ಟೇಬಲ್ ಕೂಡ ತಪ್ಪು ಮಾಡಿದರೆನ್ನುವ ಶಂಕಿತ ವಿದೇಶಿಯರನ್ನು ಬಂಧಿಸಬಹುದು ಮತ್ತು 2 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು' ಎಂದು ಅವಕಾಶ ನೀಡಿದೆ. ಏಕೆಂದರೆ ಯಾವುದೇ ವಲಸೆ ನ್ಯಾಯಾಧೀಶ ಇಲ್ಲದಿರುವುದರಿಂದ, ಆರೋಪಮುಕ್ತರಾಗಲು ಇರುವ ಏಕೈಕ ಮಾರ್ಗವೆಂದರೆ ಭಾರತೀಯ ಸಂವಿಧಾನದ 226 ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್ ಸಂಪರ್ಕಿಸುವುದು ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವುದು. ಸಾಮಾನ್ಯ ಅಥವಾ ಬಡ ವರ್ಗಕ್ಕೆ ಸೇರಿದ ವಿದೇಶಿಯರು ಇವುಗಳನ್ನೆಲ್ಲಾ ಅನುಸರಿಸಿ ಹೋಗಲು ಸಾಧ್ಯವೇ? ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಸೂದೆಯು ವಿದೇಶಿಯರನ್ನು ವಿಚಾರಣೆಗೆ ಒಳಪಡಿಸುವ ಅನಿರ್ಬಂಧಿತ ಅಧಿಕಾರವನ್ನು ಸರ್ಕಾರದ ಕೈಗೆ ನೀಡಿದೆ.

### ಮಸೂದೆಯಲ್ಲಿ ಸೂಚಿಸಲಾದ ಶಿಕ್ಷಾ ಕ್ರಮಗಳು

ಮಸೂದೆಯ ಅಧ್ಯಾಯ 5 ರಲ್ಲಿ ವಲಸೆ ನಿಯಮಗಳ ಉಲ್ಲಂಘನೆಗಾಗಿ ಕಠಿಣ ದಂಡನಾತ್ಮಕ ಕ್ರಮಗಳನ್ನು ಸೂಚಿಸಿದೆ. ಯೋಗ್ಯ ದಾಖಲೆಗಳಿಲ್ಲದೆ ಭಾರತಕ್ಕೆ ಬರುವ ಯಾವುದೇ ವ್ಯಕ್ತಿಗಳಿಗೆ 5 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 5 ಲಕ್ಷ ರೂಪಾಯಿಗಳ ದಂಡ ವಿಧಿಸಬಹುದು. ನಕಲಿ ಅಥವಾ ನಕಲಿ ದಾಖಲೆಗಳ ಬಳಕೆಗೆ 2 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆಗೆ ಗುರಿಯಾಗಬಹುದು, ಜೊತೆಗೆ ಒಂದು ಲಕ್ಷ ರೂಪಾಯಿಗಳಿಂದ 10 ಲಕ್ಷ ರೂಪಾಯಿಗಳವರೆಗೆ ದಂಡ ವಿಧಿಸಬಹುದು. ವೀಸಾದಲ್ಲಿ ತೋರಿಸಿದ್ದಕ್ಕಿಂತ ಹೆಚ್ಚು ದಿನಗಳ ಕಾಲ ಇದ್ದರೆ ಅಥವಾ ವೀಸಾ ಷರತ್ತುಗಳನ್ನು ಮುರಿದರೆ 3 ವರ್ಷ ಜೈಲು ಶಿಕ್ಷೆ ಮತ್ತು 3 ಲಕ್ಷ ದಂಡ ವಿಧಿಸಲಾಗುವುದು.

### ದುಡಿಯುವ ಜನಸಾಮಾನ್ಯರಿಗೆ ಮನವಿ

ಮೇಲ್ನೋಟಕ್ಕೆ, ಈ ಮಸೂದೆಯು ವಲಸೆ ಕಾರ್ಯಗಳಲ್ಲಿ, ಅದರ ಏಜೆನ್ಸಿಗಳು ಮತ್ತು ಕಾರ್ಯಕಾರಿಣಿಗಳಿಗೆ ಅಗತ್ಯವಾದ ಸಾಕಷ್ಟು ಕಾನೂನು ಬೆಂಬಲ ನೀಡುವುದರಲ್ಲಿ, ಭಾರತಕ್ಕೆ ಅಕ್ರಮ ವಲಸೆಯ ಸಮಸ್ಯೆಯನ್ನು ನಿಭಾಯಿಸಲು ಸಹಾಯ ಮಾಡುವುದರಲ್ಲಿ ಮತ್ತು ಭಾರತದಲ್ಲಿ ಮಿತಿಮೀರಿ ವಾಸಿಸುವ ವಿದೇಶಿಯರ ಚಲನವಲನಗಳನ್ನು ಪತ್ತೆಹಚ್ಚುವುದರಲ್ಲಿ ಅನುಕೂಲವಾಗುವಂತೆ ಅನ್ನಿಸುತ್ತದೆ. ಆದರೆ ಆಳದಲ್ಲಿ ಅದು ತೋರುವಷ್ಟು ಸೌಮ್ಯವಾಗಿಲ್ಲ.

ಮಸೂದೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ, ಅದು ಅತಿ ಕಠಿಣ, ಅತಿ ಅನುಮಾನದ ಮತ್ತು ವಿದೇಶಿಯರು ಹಾಗೂ ವಲಸಿಗರಿಗೆ ಕಠಿಣ ಶಿಕ್ಷೆಯನ್ನು ನೀಡುವ ಮಸೂದೆಯಂತಿದೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸುವಾಗ ಸಿಎಎ ಬಗ್ಗೆ ಉಲ್ಲೇಖಿಸಿರುವುದು, ಈಗ ಆಡಳಿತ ಬಂಡವಾಳಶಾಹಿ ವರ್ಗದ ಸೇವೆಗೈಯುವ ಕಡು ಕೋಮುವಾದಿ ಬಿಜೆಪಿ ಸರ್ಕಾರವು ಕೆಲವು ಗುಪ್ತ ಉದ್ದೇಶಗಳನ್ನು ಹೊಂದಿದೆಯೆಂದು ತೋರಿಸುತ್ತದೆ. ಕಾನೂನು ಚೌಕಟ್ಟನ್ನು ಸುವ್ಯವಸ್ಥಿತಗೊಳಿಸುವ ಸೋಗಿನಲ್ಲಿ, ಭಾರತೀಯ ನಾಗರಿಕರಾಗಿರಲಿ, ಹಾಗೆಯೇ ವಲಸಿಗರಾಗಿರಲಿ, ನಿರ್ದಿಷ್ಟವಾಗಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕಿರುಕುಳ ನೀಡುವುದು ಇದರ ಉದ್ದೇಶವಾಗಿದೆ. ಎರಡನೆಯದಾಗಿ, ಎಲ್ಲರೂ ಅಕ್ರಮ ವಲಸಿಗರ ಬಗ್ಗೆ ಮಾತನಾಡುತ್ತಾರೆ. ಮೂಲ ಸಮಸ್ಯೆಗಳನ್ನು ಪರಿಹರಿಸದೇ ಅವರನ್ನು ತಾಯ್ನಾಡಿಗೆ ಓಡಿಸುವುದು ಕ್ರೂರತೆಯ ಪರಮಾವಧಿಯಾಗಿದೆ. ನೆಲೆ ಕಳೆದುಕೊಳ್ಳುವ ಅಸಹಾಯಕತೆಯ ಭಯದಿಂದ ಬದುಕುವ ಅವರು ಇನ್ನಷ್ಟು ವ್ಯಗ್ರರಾಗುವ ಸಾಧ್ಯತೆ ಇರುತ್ತದೆ. ಇದರಿಂದ ಗಲಭೆಗಳು ಭುಗಿಲೇಳಬಹುದು. ಈ ಸಂದರ್ಭದಲ್ಲಿ ಮಹಾಕವಿ ರವೀಂದ್ರನಾಥ ಟ್ಯಾಗೋರ್ ಅವರ ಪ್ರಸಿದ್ಧ ಕವಿತೆ 'ಆಫ್ರಿಕಾ'ದ ಅಮರ ಸಾಲುಗಳು ನಮಗೆ ನೆನಪಿಗೆ ಬರುತ್ತವೆ:

**"ನಾಗರಿಕತೆಯ ಅಪರಿಮಿತ ಸ್ವಾರ್ಥ ಬೆತ್ತಲೆಯಾಯ್ತು**
**ನಾಚಿಕೆಯಿಲ್ಲದ ಕ್ರೌರ್ಯದಲ್ಲಿ**
**ನಿನ್ನ ಮೌನ ರೋದನ ಮಂಜಿನಿಂದ ಆವೃತವಾದ**
**ಕಾಡುಗಳಲ್ಲಿ**
**ರಕ್ತ, ಕಣ್ಣೀರಿನೊಂದಿಗೆ ಕಲೆತ ಮಣ್ಣು ತೇವದುಂಡೆ**
**ಅಸುರ ಪಾದಗಳ ಬೂಟುಗಳ ಅವಮಾನದ ಗುರುತು**
**ಅಳಿಸಲಾಗದಂತೆ ಮೂಡಿವೆ ನಿನ್ನ ಇತಿಹಾಸದ ಮೇಲೆ**

ನಾವು ಈಗಾಗಲೇ ಗಮನಿಸುತ್ತಿರುವಂತೆ, ಆಡಳಿತಾರೂಢ ಭಾರತೀಯ ಏಕಸ್ವಾಮ್ಯವಾದಿಪತಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಅಡಿಯಾಳಾಗಿರುವ ಬಿಜೆಪಿ ಸರ್ಕಾರವು, ಧಾರ್ಮಿಕ ಅಥವಾ ಜಾತಿ–ಜನಾಂಗೀಯತೆಯ ಆಧಾರದಲ್ಲಿ ಸಮುದಾಯಗಳ ನಡುವೆ ಭಯದ ವಾತಾವರಣ, ರಕ್ತಪಾತ, ದ್ವೇಷವನ್ನು ಎಗ್ಗು ಸಿಗ್ಗಿಲ್ಲದೆ ನಡೆಸುತ್ತಿದೆ. ಆಗಾಗ, ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಉದ್ದೇಶಪೂರ್ವಕವಾಗಿ ಬಾಬರಿ ಮಸೀದಿ, ವಕ್ಫ್ ಕಾಯ್ದೆ ತಿದ್ದುಪಡಿ, ಔರಂಗಜೇಬನ ಸಮಾಧಿ ಅಥವಾ ಗೋರಕ್ಷಣೆಯಂತಹ ವಿಷಯಗಳನ್ನು ತಂದು ಟೀಕೆ ಮಾಡಲಾಗುತ್ತದೆ. ಯಾರಿಗೆ ಗೊತ್ತು, ಈ ಪ್ರಸ್ತಾವಿತ ಮಸೂದೆ ಜಾರಿಗೆ ಬಂದರೆ, ಅವರನ್ನು ಹಣಿಯಲು ದುರುಪಯೋಗವಾಗುವುದಿಲ್ಲವೆಂದು? ರಾಷ್ಟ್ರೀಯ ಭದ್ರತೆ, ಸಾರ್ವಭೌಮತ್ವ, ವ್ಯವಹಾರದ ಹಿತಾಸಕ್ತಿ ಇತ್ಯಾದಿಗಳನ್ನು ರಕ್ಷಿಸುವ ನೆಪದಲ್ಲಿ, ಅದು ಇನ್ನೂ ಕ್ರೂರವಾಗಬಹುದು. ಈ ಮಸೂದೆಯು ದೇಶದ ಮೇಲೆ ಹೇರಲಾದ ಫ್ಯಾಸಿಸ್ಟ್ ನಿರಂಕುಶ ಪ್ರಭುತ್ವದ ಆಡಳಿತ ತತ್ವಗಳ ಒಂದು ಭಾಗವಾಗಿರಬಹುದು.

ಹೀಗಾಗಿ ದುಡಿಯುವ ಜನಸಾಮಾನ್ಯರಿಗೆ ನಮ್ಮ ಮನವಿಯೆಂದರೆ, ನಾವು ಆಳುವ ಸರ್ಕಾರದ ಮೋಸದ ಮಾತುಗಳಿಗೆ ಎಂದೂ ಬಲಿಯಾಗಬಾರದು. ಅದರ ಅಪಾಯಕಾರಿ ಸಂಚುಗಳನ್ನು ವಿಫಲಗೊಳಿಸಲು ಜೀವನದ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರಬಲ, ಐಕ್ಯ, ನಿರಂತರ ಸಾಮೂಹಿಕ ಚಳುವಳಿಯನ್ನು ಕಟ್ಟಬೇಕಾಗಿದೆ. ಅಂತಹ ಚಳುವಳಿಗಳು ಮಾತ್ರ, ಸರ್ಕಾರಗಳ ಕರಾಳ ಕಾನೂನುಗಳನ್ನು ಜಾರಿಗೊಳಿಸುವ ಹುನ್ನಾರವನ್ನು ತಡೆಯಬಹುದು.

# ಹಿಟ್ಲರನ ಫ್ಯಾಷಿವಾದವನ್ನು ಹತ್ತಿಕ್ಕಿದ ವಿಜಯಕ್ಕೆ 80 ವರ್ಷ



### ಭಾಗ 1

1945ರ ಮೇ 2ರಂದು ಸೋವಿಯತ್ ಒಕ್ಕೂಟದ ಕೆಂಪು ಸೈನ್ಯವು ರಾಜಧಾನಿ ಬರ್ಲಿನ್ ತಲುಪಿ, ಜರ್ಮನಿಯನ್ನು ನಾಜ಼ಿ ಆಳ್ವಿಕೆಯಿಂದ ಮುಕ್ತಗೊಳಿಸಿತು. ಹಿಮ್ಮೆಟ್ಟುತ್ತಿದ್ದ ಜರ್ಮನ್ ಸೈನ್ಯವನ್ನು ಬೆನ್ನಟ್ಟಿಕೊಂಡು ಬಂದ ಕೆಂಪು ಸೈನ್ಯವು ಅಲ್ಲಿನ ಸಂಸತ್ ಭವನ 'ರೀಚ್‌ಸ್ಟಾಗ್'ನ್ನು ವಶಪಡಿಸಿಕೊಂಡು ಆ ಕಟ್ಟಡದ ಗೋಪುರದ ಮೇಲೆ ಕೆಂಬಾವುಟವನ್ನು ಹಾರಿಸಿತು. ಇದರೊಂದಿಗೆ, ಜರ್ಮನಿ–ಇಟಲಿ–ಜಪಾನ್‌ಗಳ ಫ್ಯಾಷಿಸ್ಟ್ ದುಷ್ಟಕೂಟವು ಮಣ್ಣಾದಂತಾಯಿತು. 1945ರ ಮೇ 8ರಂದು ಜರ್ಮನಿಯಲ್ಲಿ ಅಧಿಕಾರದಲ್ಲಿದ್ದವರು ಬೇಷರತ್ತಾಗಿ ಕೆಂಪು ಸೈನ್ಯಕ್ಕೆ ಶರಣಾಗುವ ಕರಾರಿಗೆ ಸಹಿ ಹಾಕಿದರು. 2025ರ ಮೇ 8ರಂದು ಈ ಅಮೋಘ ವಿಜಯದ 80ನೇ ವಾರ್ಷಿಕ.

### ಹಿಟ್ಲರ್ ಬೆಳೆದದ್ದು ಹೇಗೆ...

1914 ರಿಂದ 1918ರವರೆಗೆ ಜರ್ಮನಿ, ಆಸ್ಟ್ರಿಯಾ, ಹಂಗರಿ ಮತ್ತು ಟರ್ಕಿ ಒಂದು ಕೂಟವನ್ನು ರಚಿಸಿಕೊಂಡಿದ್ದವು ಮತ್ತು ಇನ್ನೊಂದರಲ್ಲಿ ಫ್ರಾನ್ಸ್, ಬ್ರಿಟನ್, ರಷ್ಯಾ, ಇಟಲಿ, ಜಪಾನ್ ಹಾಗೂ ನಂತರದಲ್ಲಿ ಅಮೇರಿಕ ಇದ್ದವು. ಈ ಎರಡು ಕೂಟಗಳ ನಡುವೆ ಮೊದಲನೆಯ ಮಹಾಯುದ್ಧವು ನಡೆದು ಜರ್ಮನಿಯ ಮಿತ್ರಕೂಟಕ್ಕೆ ಹೀನಾಯವಾದ ಸೋಲಾಯಿತು. ಆ ಸಮಯದಲ್ಲಿ, ಜರ್ಮನ್ ಚಕ್ರಾಧಿಪತ್ಯವು ಪತನವಾಗಿ, ಅದರ ಸ್ಥಾನದಲ್ಲಿ 'ವೈಮರ್ ಗಣರಾಜ್ಯ' ಎಂಬ ಹೆಸರಿನ ಹೊಸ ಜನತಾಂತ್ರಿಕ ಗಣರಾಜ್ಯವು ಅಸ್ತಿತ್ವಕ್ಕೆ ಬಂದಿತ್ತು. ಸೋಲಿನ ನಂತರ, 1919ರ ಜೂನ್‌ನಲ್ಲಿ ಅದರ ಮುಖಂಡರು, ಅತ್ಯಂತ ಏಕಪಕ್ಷೀಯವಾಗಿದ್ದ ಮತ್ತು ತಮ್ಮ ಮೇಲೆ ಫ್ರಾನ್ಸ್ ಹೇರಿದ 'ವರ್ಸೈಲ್ ಒಪ್ಪಂದ'ಕ್ಕೆ ಸಹಿ ಮಾಡಲೇಬೇಕಾದ ಒತ್ತಡ–ಕ್ಕೆ ಒಳಗಾದರು. ಮಹಾಯುದ್ಧವನ್ನು ಆರಂಭಿಸಿದ ಹೊಣೆಗಾರಿಕೆಯನ್ನು ಜರ್ಮನಿ ಹೊರಬೇಕಾಯಿತು ಮತ್ತು ಅದರಿಂದ ಉಂಟಾದ ಒಟ್ಟು ನಷ್ಟವನ್ನು ಜರ್ಮನಿಯೇ ಭರಿಸಬೇಕಾಯಿತು. ಒಪ್ಪಂದದ ಪ್ರಕಾರ ಜರ್ಮನಿಯು ತನ್ನ ನೆಲವನ್ನು ಕಳೆದುಕೊಂಡಿತು ಮತ್ತು ನಿಶ್ಶಸ್ತ್ರೀಕರಣ ಮುಂತಾದ ಶಿಕ್ಷೆಗೆ ಒಳಗಾಯಿತು. ಯುದ್ಧದ ಸಾಲ, ನಷ್ಟ ಪರಿಹಾರ ಇತ್ಯಾದಿ ಪಾವತಿಗಳು ಹಣದುಬ್ಬರವನ್ನು ತೀವ್ರವಾಗಿ ಏರಿಸಿದವು ಮತ್ತು ಜರ್ಮನ್ ಕರೆನ್ಸಿ ಡಾಯಿಷ್ ಮಾರ್ಕ್ ವಿಪರೀತ ಅಪಮೌಲ್ಯಕ್ಕೆ ಗುರಿಯಾಯಿತು. ಇದರಿಂದ ಜರ್ಮನರು ತಮ್ಮ ಉಳಿತಾಯವನ್ನೆಲ್ಲ ಕಳೆದುಕೊಂಡರು, ಆದರೆ ಕೈಗಾರಿಕೋದ್ಯಮಿಗಳು ತಮ್ಮಲ್ಲಿದ್ದ ಸರಕು ರೂಪದ ಸಂಪತ್ತು ಹಾಗೂ ವಿದೇಶಿ ವಾಣಿಜ್ಯ–ವ್ಯವಹಾರದ ಕಾರಣದಿಂದ ಹಣದುಬ್ಬರದ ಹೊಡೆತದಿಂದ ಪಾರಾದರು. ನಿರುದ್ಯೋಗ ಮತ್ತು ತೀವ್ರ ಬಡತನಕ್ಕೆ ಸಿಲುಕಿದ ಜರ್ಮನರಲ್ಲಿ ಅತೃಪ್ತಿ ಹಾಗೂ ಆಕ್ರೋಶ ಉಂಟಾಗಿತ್ತು. ಇದು ಯುದ್ಧೋತ್ತರ 1920ರ ದಶಕದಲ್ಲಿ ಜರ್ಮನಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೋಭೆಯ ಪರಿಸ್ಥಿತಿಯಾಗಿತ್ತು.

ಅದೇ ಕಾಲಕ್ಕೆ ಸೋವಿಯತ್ ಒಕ್ಕೂಟ–ದ ಸಮಾಜವಾದಿ ಆರ್ಥಿಕತೆಯು ದಾಪುಗಾಲು ಹಾಕಿಕೊಂಡು ಸಮೃದ್ಧಿಯತ್ತ ಮುನ್ನುಗ್ಗುತ್ತಿತ್ತು. ಪ್ರಪಂಚದಾದ್ಯಂತ ಜನರು ಆ ಕಡೆಗೆ ಆಕರ್ಷಿತರಾಗುತ್ತಿದ್ದರು. ಈ ಹಿನ್ನೆಲೆಯಲ್ಲಿ, ಹಿಟ್ಲರ್, ರಾಷ್ಟ್ರೀಯ ಅಂಧಾಭಿಮಾನ ಹಾಗೂ ಸಮಾಜವಾದದ ಘೋಷಣೆಗಳನ್ನು ಬೆಸೆದು ತನ್ನ ನ್ಯಾಷನಲ್ ಸೋಷಲಿಸ್ಟ್ ಜರ್ಮನ್ ವರ್ಕರ್ಸ್ ಪಾರ್ಟಿ(ನಾಜ಼ಿ ಪಾರ್ಟಿ)ಯನ್ನು ಸ್ಥಾಪಿಸಿದ. ವರ್ಸೈಲ್ ಒಪ್ಪಂದದ ಕಠಿಣ ಆರ್ಥಿಕ ನಿಬಂಧನೆಗಳು ಮತ್ತು ರಾಷ್ಟ್ರೀಯ ಅಪಮಾನದ ಭಾವನೆಯಿಂದ ಆಕ್ರೋಶಭರಿತರಾಗಿದ್ದ ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡಿದ ಹಿಟ್ಲರ್ ಜರ್ಮನ್ನರು ಶ್ರೇಷ್ಠ ಜನಾಂಗ, ಇಡೀ ಜಗತ್ತನ್ನೇ ಆಳಲು ಸಮರ್ಥರು, ಅವರನ್ನು ತಪ್ಪಾಗಿ ನಡೆಸಿಕೊಳ್ಳಲಾಗಿದೆ ಎಂದು ಪದೇಪದೇ ಜರ್ಮನ್ನರ ತಲೆಗೆ ತುಂಬಿದ. ವರ್ಸೈಲ್ ಒಪ್ಪಂದದ ರದ್ದಿಗೆ ಒತ್ತಾಯಿಸಿದ. ಅಧಿಕಾರದಲ್ಲಿ ಕುಳಿತಿದ್ದ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯ ಆಡಳಿತದ ವಿರುದ್ಧ ಆಕ್ರೋಶ ಉದ್ದೀಪಿಸಿದ. "ಇಲ್ಲಿಯವರೆಗೆ ಅರೆ ಮನಸ್ಸಿನಿಂದ ತಣ್ಣಗೆ ತೆಪ್ಪಗಿರುವವರೇ ಜರ್ಮನಿಗೆ ಶಾಪವಾಗಿ ಪರಿಣಮಿಸಿದ್ದಾರೆ. ನಮ್ಮ ವಿಮೋಚನೆಗೆ ಆರ್ಥಿಕ ನೀತಿಗಳನ್ನು ಬಿಟ್ಟು, ಕೈಗಾರಿಕೆಗಳನ್ನು ಬಿಟ್ಟು ಇನ್ನೂ ಹೆಚ್ಚಿನದೇನೋ ಬೇಕಾಗಿದೆ, ಅವರಿಗೆ ಹೆಮ್ಮೆ, ಇಚ್ಛಾಶಕ್ತಿ, ರಕ್ಷಣಾ ಬಲ, ದ್ವೇಷ, ಪ್ರತೀಕಾರ ಮತ್ತು ಮತ್ತೆಮತ್ತೆ ದ್ವೇಷ ಬೇಕಾಗಿದೆ" ಎಂದು ಹಿಟ್ಲರ್ ವಾದಿಸಿದ. ಅದೇ ಕಾಲಕ್ಕೆ ಯಹೂದಿಗಳ ವಿರುದ್ಧ ದ್ವೇಷಭಾವದ ಪ್ರಚಾರವನ್ನು ಆರಂಭಿಸಲಾಯಿತು.

ನಾಜ಼ಿ ಪಕ್ಷದ ಮೂಲ ಕೇಂದ್ರ ಮ್ಯುನಿಕ್ ನಗರವಾಗಿದ್ದರೂ ಸಹ, 1923ರ ನವೆಂಬರ್ ತಿಂಗಳಲ್ಲಿ ಅದು ರಾಷ್ಟ್ರೀಯವಾಗಿ ಬೆಳೆದು ಗಮನ ಸೆಳೆಯಿತು. ಆ ತಿಂಗಳಲ್ಲಿ ಹಿಟ್ಲರ್ ನೇತೃತ್ವದ ನಾಜ಼ಿ ಪಕ್ಷವು ಹಿಂಸಾತ್ಮಕ ದಂಗೆಯ ಮೂಲಕ ಸರ್ಕಾರವನ್ನು ಬುಡಮೇಲು ಮಾಡಲು ವಿಫಲ ಯತ್ನ ನಡೆಸಿತು. ಪರಿಣಾಮವಾಗಿ, ಹಿಟ್ಲರ್ ಬಂಧನಕ್ಕೊಳಗಾದ ಮತ್ತು ನಾಜ಼ಿ ಪಕ್ಷವು ನಿಷೇಧಕ್ಕೆ ಒಳಗಾಯಿತು. 1929ರಲ್ಲಿ ಇಡೀ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ವಿಶ್ವವೇ ತೀವ್ರ ಆರ್ಥಿಕ ಹಿಂಜ–ರಿತಕ್ಕೆ ಒಳಗಾಯಿತು. ಕೋಟ್ಯಾಂತರ ಜರ್ಮನ್ನರು ಉದ್ಯೋಗ ಕಳೆದುಕೊಂಡರು, ನಿರುದ್ಯೋಗ, ಬಡತನ, ವಸತಿ ಹೀನತೆ 1930ರ ದಶಕದ ಆರಂಭದಲ್ಲಿ ಗಂಭೀರ ಸಮಸ್ಯೆಯನ್ನು ಒಡ್ಡಿದವು. ಸರ್ಕಾರದ ಮೇಲಿನ ಜನರ ನಂಬಿಕೆ ಛಿದ್ರಗೊಂಡಿತು. ಇಂತಹ ಅಭದ್ರತೆಯ, ಅಸ್ತವ್ಯಸ್ತತೆಯ ಪರಿಸ್ಥಿತಿ ಹಿಟ್ಲರನಂತಹ ಮಹತ್ವಾಕಾಂಕ್ಷಿ ಫ್ಯಾಷಿಸ್ಟ್ ನಾಯಕನ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು.

### ಅಧಿಕಾರದ ಗದ್ದುಗೆ ಏರಿದ...

ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ಹಿಂಸಾತ್ಮಕ ಪ್ರಯತ್ನದಲ್ಲಿ ಸೋಲುಂಡ ನಂತರ ನಾಜ಼ಿ ಪಕ್ಷವು ತನ್ನ ತಂತ್ರಗಾರಿಕೆಯನ್ನು ಬದಲಾಯಿಸಿಕೊಂಡಿತು. ಚುನಾವಣೆಯನ್ನು ಕೈವಶ ಮಾಡಿಕೊಳ್ಳುವ ಗುರಿಯಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸಿತು. ಅಂದು ತಮ್ಮನ್ನಾಳುತ್ತಿದ್ದವರ ಮೇಲೆ ಸಾಕಷ್ಟು ಜರ್ಮನ್ನರು ವಿಶ್ವಾಸ ಕಳೆದುಕೊಂಡಿದ್ದರು. ಆಗ ಸೃಷ್ಟಿಯಾಗಿದ್ದ ರಾಜಕೀಯ ನಿರ್ವಾತದಲ್ಲಿ ಒಂದೆಡೆ ನಾಜ಼ಿ ಪಕ್ಷ ಮತ್ತು ಮತ್ತೊಂದೆಡೆ ಜರ್ಮನ್ ಕಮ್ಯುನಿಸ್ಟ್ ಪಕ್ಷಗಳು ಕ್ರಮೇಣ ಜನಪ್ರಿಯತೆಯನ್ನು ಪಡೆಯಲಾರಂಭಿಸಿದವು. ಕಮ್ಯುನಿಸ್ಟ್ ಪಕ್ಷದ ಏಳಿಗೆಯನ್ನು ಹಿಟ್ಲರನಿಂದ ಸಹಿಸಲಾಗಲಿಲ್ಲ. ಜರ್ಮನಿಯ ಎಲ್ಲಾ ಸಮಸ್ಯೆಗಳಿಗೆ ಕಮ್ಯುನಿಸ್ಟರು ಮತ್ತು ಯಹೂದಿಗಳೇ ಕಾರಣ ಎಂದು ಪ್ರಚಾರವನ್ನು ಅವನು ನಡೆಸಿದ.

1930ರ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹಿಟ್ಲರ್, "ಜರ್ಮನಿಯು ಮತ್ತೆ ಮೇಲೇಳಲು ಹಾಗೂ ಅದನ್ನು ಕಂಡು ಇತರರು ಭಯಪಡುವಂತಾಗಲು, ತನ್ನ ಜನರ ಜನ್ಮಸಿದ್ಧ ಹಕ್ಕುಗಳಾದ ಘನತೆ, ಸುರಕ್ಷತೆ ಮತ್ತು ಶ್ರೀಮಂತಿಕೆಯನ್ನು ಮರುಸ್ಥಾಪಿಸಲು, ಹಳೆಯ ಜರ್ಮನಿಯ ಗುಣಗಳಾದ ಶಿಸ್ತು, ಸ್ವಾವಲಂಬನೆ ಮತ್ತು ಆತ್ಮಗೌರವಗಳನ್ನು ಮತ್ತೆ ಪಡೆಯಲು, ಅದು ಒಬ್ಬ ಹೊಸ ವ್ಯಕ್ತಿಯ ಕಡೆಗೆ, ಹೊಸ ಚಳವಳಿಯ ಕಡೆಗೆ ನೋಡಲಿ......ಜರ್ಮನ್ನರು ಭೂಮಿಯ ಮೇಲಿನ ಸರ್ವಶ್ರೇಷ್ಠರು. ಯುದ್ಧದಲ್ಲಿ ಸೋಲಾಗಲು ಮತ್ತು ಅದರಿಂದ ಇಷ್ಟೊಂದು ಸಂಕಷ್ಟಕ್ಕೀಡಾಗಲು ನೀವು ಕಾರಣರಲ್ಲ. ನಿಮ್ಮ ಬಗ್ಗೆ ದ್ವೇಷ, ಅಸೂಯೆ ಇರುವವರು 1918ರಲ್ಲಿ ನಿಮಗೆ ದ್ರೋಹ ಬಗೆದಿರುವುದೇ ಅದಕ್ಕೆ ಕಾರಣ..... ಜರ್ಮನಿ ಎಚ್ಚರಗೊಂಡು ತನ್ನ ಬಲವನ್ನು ಉದ್ದೀಪಿಸಲಿ, ತನ್ನ ಹಿಂದಿನ ಮಹಾನತೆಯನ್ನು ನೆನಪಿಸಿಕೊಳ್ಳಲಿ ಮತ್ತು ಪ್ರಪಂಚದಲ್ಲಿ ತನ್ನ ಪುರಾತನ ಸ್ಥಾನವನ್ನು ಮತ್ತೆ ಪಡೆದುಕೊಳ್ಳಲಿ, ಹಾಗೂ ಅದರ ಆರಂಭಕ್ಕಾಗಿ ಬರ್ಲಿನ್ನಿನಲ್ಲಿ (ಭದ್ರವಾಗಿ ಕೂತಿರುವ ಅಧಿಕಾರಸ್ಥರ) ಹಳೆಯ ಕೂಟವನ್ನು ಕಿತ್ತೊಗೆಯೋಣ"(ಅಲೆನ್ ಬುಲಕ್ ರಚಿತ 'ಹಿಟ್ಲರ್' ಕೃತಿಯಿಂದ) ಎಂದು ಅಬ್ಬರಿಸಿದ.

ಹೀಗೆ, ಜರ್ಮನಿಯನ್ನು ಯುರೋಪಿನಲ್ಲಿ ಅಷ್ಟೇ ಏಕೆ, ಜಗತ್ತಿನ ಪ್ರಬಲ ಶಕ್ತಿಯಾಗಿ ರೂಪಿಸುವ ಆಶ್ವಾಸನೆ ಮಾತ್ರವಲ್ಲದೆ ಮೊದಲನೇ ಮಹಾಯುದ್ಧದಲ್ಲಿ ಜರ್ಮನಿಯು ಕಳೆದುಕೊಂಡ ಭೂಪ್ರದೇಶವನ್ನು ಮರಳಿ ಗಳಿಸುವ, ದೇಶದಲ್ಲಿ ಶಕ್ತಿಶಾಲಿಯಾದ ಸರ್ವಾಧಿಕಾರಿ ಸರ್ಕಾರವನ್ನು ಸ್ಥಾಪಿಸುವ ಭರವಸೆ ಹಿಟ್ಲರ್ ನೀಡಿದ. ರಾಷ್ಟ್ರೀಯ ಶಾಸನ ಸಭೆಗೆ ನಡೆದ ಆ ಚುನಾವಣೆಯಲ್ಲಿ ನಾಜ಼ಿ ಪಕ್ಷವು ಶೇ.18ರಷ್ಟು ಮತವನ್ನು ಪಡೆಯಿತು. ಅದೇ ವರ್ಷ ನಡೆದ ಪ್ರಾಂತೀಯ ಮತ್ತು ಸ್ಥಳೀಯ ಚುನಾವಣೆಗಳಲ್ಲೂ ಅದು ಉತ್ತಮ ಫಲಿತಾಂಶವನ್ನು ದಾಖಲಿಸಿತು. 1932ರ ಸಂಸದೀಯ ಚುನಾವಣೆಯಲ್ಲಿ ನಾಜ಼ಿ ಪಕ್ಷವು ಶೇ.37 ಮತ ಪಡೆದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. 1933ರ ಜನವರಿಯಲ್ಲಿ ನಾಜ಼ಿ ಪಕ್ಷದ ಒತ್ತಡಕ್ಕೆ ಮಣಿದು ಜರ್ಮನ್ ಅಧ್ಯಕ್ಷ ಪಾಲ್ ವಾನ್ ಹಿಂಡೆನ್‌ಬರ್ಗ್ ಜರ್ಮನಿಯ ಚಾನ್ಸಲರ್ ಆಗಿ ಹಿಟ್ಲರನನ್ನು ನೇಮಕ ಮಾಡಬೇಕಾಯಿತು.

ನಂತರ ಹಿಟ್ಲರ್ ಇನ್ನೊಂದು ಆಟವಾಡಿದ. 1933ರ ಫೆಬ್ರವರಿ 27ರಂದು ಜರ್ಮನ್ ಸಂಸತ್ ಭವನವಾದ 'ರೀಚ್‌ಸ್ಟಾಗ್'ಗೆ ಯಾರೋ ಬೆಂಕಿಯಿಟ್ಟರು. ಈ ಕೃತ್ಯಕ್ಕೆ ಕಮ್ಯುನಿಸ್ಟರೇ ಕಾರಣ ಎಂದು ತಕ್ಷಣವೇ ದೂಷಿಸಿದ ಹಿಟ್ಲರ್ 81 ಮಂದಿ ಕಮ್ಯುನಿಸ್ಟ್ ಪಕ್ಷದ ಸಂಸದರನ್ನು ಉಚ್ಚಾಟಿಸುವ, ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸುವ ಸುಗ್ರೀವಾಜ್ಞೆಯನ್ನು ಜಾರಿಗೆ ತಂದ. ಕಮ್ಯುನಿಸ್ಟ್ ಮತ್ತು ಸಮಾಜವಾದಿಗಳನ್ನು ಉಚ್ಚಾಟನೆ ಮಾಡಲಾಯಿತು, ಹಲವಾರು ನಾಯಕರನ್ನು ಬಂಧಿಸಲಾಯಿತು. ಈ ಮೂಲಕ ಜರ್ಮನ್ ಮತದಾರರು ಕಮ್ಯುನಿಸ್ಟರಿಂದ ದೂರ ಸರಿಯುವಂತೆ ಮಾಡುವಲ್ಲಿ, ಅವರ ಮೇಲೆ ತನ್ನ ಹಿಡಿತವನ್ನು ಬಿಗಿ ಮಾಡಿಕೊಳ್ಳುವಲ್ಲಿ ಹಿಟ್ಲರ್ ಯಶಸ್ವಿಯಾದ. ಕೆಲವು ಇತಿಹಾಸಕಾರರು, ನಾಜ಼ಿಗಳೇ ತಮ್ಮ ಕಾರ್ಯ ಸಾಧನೆಗಾಗಿ ರೀಚ್‌ಸ್ಟಾಗಿಗೆ ಬೆಂಕಿ ಇಡಿಸಿದರು ಎಂದು ನಂಬುತ್ತಾರೆ. 1934ರ ಆಗಸ್ಟ್‌ನಲ್ಲಿ ಅಧ್ಯಕ್ಷ ಹಿಂಡೆನ್‌ಬರ್ಗ್ ಮೃತರಾದರು. ಹಿಟ್ಲರ್ ಆಗ ತನ್ನನ್ನು ತಾನೆ ಫ್ಯೂರರ್(ಅಧಿನಾಯಕ) ಎಂದು ಘೋಷಿಸಿಕೊಂಡ. ಅಲ್ಲಿಂದ ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿಯಾಗಿ ಮೆರೆದ.

ಆದರೆ ಹಿಟ್ಲರ್ ಅಧಿಕಾರವನ್ನು ದಂಗೆಯ ಮೂಲಕ ವಶಪಡಿಸಿಕೊಳ್ಳಲಿಲ್ಲ ಅಥವಾ ನೇರವಾಗಿ ಚುನಾಯಿತನಾಗಿ ಅಧಿಕಾರಕ್ಕೆ ಬರಲಿಲ್ಲ. ಇಲ್ಲೂ ಅವನು ತನ್ನ ಅನುಕೂಲಕ್ಕೆ ತಕ್ಕಂತೆ ವಿಷಯಗಳನ್ನು ತಿರುಚಿದನು. 1936 ರಲ್ಲಿ ಸಂಸತ್ ಚುನಾವಣೆ ನಡೆಯಬೇಕಿದ್ದಾಗ, ನಾಜ಼ಿ ಜರ್ಮನ್ ಆಡಳಿತವು ಸಾಮಾನ್ಯ ಚುನಾವಣೆಯ ಬದಲು, ಚಾನ್ಸಲರ್ ಮತ್ತು ಅಧ್ಯಕ್ಷರ ಹುದ್ದೆಗಳನ್ನು ಸಂಯೋಜಿಸುವುದನ್ನು ಮತದಾರರು ಅನುಮೋದಿಸುತ್ತಾರೆಯೇ ಎಂದು ಕೇಳುವ ಜನಮತಗಣನೆ (ನಿರ್ದಿಷ್ಟ ನೀತಿಯ ಮೇಲೆ ನೇರ ಮತ) ನಡೆಸಿತು. ಅಡಾಲ್ಫ್ ಹಿಟ್ಲರನನ್ನು ಫ್ಯೂರರ್ ಆಗಿ ಮತ್ತು ಅವನಿಗೆ ರೀಚ್ ಚಾನ್ಸಲರ್ ಆಗಿ ಅಧ್ಯಕ್ಷೀಯ ಅಧಿಕಾರ ನೀಡುವುದನ್ನು ಅವರು ಅನುಮೋದಿಸುತ್ತಾರೆಯೇ ಎಂದೂ ಕೇಳಲಾಯಿತು. ಅದಕ್ಕೂ ಮೊದಲು, 1936 ರ ಮಾರ್ಚ್ 7 ರಂದು, ಯಹೂದಿಗಳು ಮತ್ತು ರೋಮಾನಿ ಜನರ ಮತದಾನದ ಹಕ್ಕನ್ನು ಅಸಿಂಧುಗೊಳಿಸಲಾಯಿತು. 1934 ರಲ್ಲಿ ಇದ್ದಷ್ಟೇ ಪ್ರಮಾಣದ ಮತದಾರರನ್ನು ಖಚಿತಪಡಿಸಿಕೊಳ್ಳಲು ಮತ್ತು ನಾಜ಼ಿ ಆಡಳಿತಕ್ಕೆ ಯುವಜನರ ಉತ್ಸಾಹಭರಿತ ಬೆಂಬಲವನ್ನು ಬಳಸಿಕೊಳ್ಳಲು ನಾಜ಼ಿಗಳು ಮತದಾನದ ವಯಸ್ಸನ್ನು ಸಹ ಕಡಿಮೆ ಮಾಡಿದರು.

ಹಾಗಾಗಿ, ಆ ಜನಮತ ಗಣನೆಯು ಮುಕ್ತವೂ ಆಗಿರಲಿಲ್ಲ, ನ್ಯಾಯ ಸಮ್ಮತವೂ ಆಗಿರಲಿಲ್ಲ. ಆದರೆ ಹಲವಾರು ಜರ್ಮನ್ನರು ಪ್ರಾಮಾಣಿಕವಾಗಿ ಮತ್ತು ಉತ್ಸುಕತೆಯಿಂದ ಹಿಟ್ಲರ್ ಹಾಗೂ ನಾಜ಼ಿ ಆಡಳಿತಕ್ಕೆ ಬೆಂಬಲಿಸಿದರು. ಶೇ. 90ರಷ್ಟು ಮತದಾರರು ಹಿಟ್ಲರನ ಕ್ರಮಗಳನ್ನು ಅನುಮೋದಿಸಿದ್ದಾರೆ ಎಂದು ಫಲಿತಾಂಶವು ತೋರಿಸಿತು. ಇದರೊಂದಿಗೆ, ಆತನ ಅಧಿಕಾರಕ್ಕೆ ಕಾನೂನಾತ್ಮಕ ಅಥವಾ ಸಂವಿಧಾನಾತ್ಮಕ ಮಿತಿ ಎಂಬುದೇ ಇಲ್ಲವಾಯಿತು.

### ಯಹೂದಿ ದ್ವೇಷ ಮತ್ತು ರಾಷ್ಟ್ರಾಂಧತೆಯ ಅವಳಿ ತಂತ್ರಗಾರಿಕೆ

ಹಿಟ್ಲರ್‌ನ ರಾಷ್ಟ್ರವಾದದ ಪ್ರಮುಖ ಅಂಶವಾಗಿದ್ದದ್ದು ಯಹೂದಿ ದ್ವೇಷ. ಜನರನ್ನು ಒಗ್ಗೂಡಿಸಲು ಅವರ ಎಲ್ಲ ಆಕ್ರೋಶವನ್ನು ಒಂದೇ ಶತ್ರುವಿನ ವಿರುದ್ಧ ತಿರುಗಿಸುವುದು ಉತ್ತಮ ಎಂದು ಆತ ಗುರುತಿಸಿದ್ದ. ಈ ಶತ್ರು ಅವರ ಎಲ್ಲ ಕಷ್ಟಗಳಿಗೆ ಕಾರಣನಾಗಿರಬೇಕು ಎಂದು ಹಿಟ್ಲರ್ ನಂಬಿದ್ದ. ಹೀಗಾಗಿ, ಸಮಾಜದ ಎಲ್ಲ ತೊಂದರೆಗಳಿಗೆ ಯಹೂದಿಗಳೇ ಕಾರಣ ಎಂದು ಹೇಳಿ ಅವರನ್ನು ಬಲಿಪಶು ಮಾಡಿದ. ಜೊತೆಗೆ, ರಾಷ್ಟ್ರೀಯ ಉನ್ಮಾದವನ್ನು ಏರಿಸುವುದರೊಂದಿಗೆ, ಕೆಳಮಧ್ಯಮ ವರ್ಗ ಮತ್ತು ಕಾರ್ಮಿಕ ವರ್ಗವನ್ನು ಆಕರ್ಷಿಸಲು ಹಿಟ್ಲರ್ ಕಾರ್ಯಕ್ರಮಗಳನ್ನು ರೂಪಿಸಿದ. ಅವು ಬಹಿರಂಗವಾಗಿ ಕ್ರಾಂತಿಕಾರಿ ಸಮಾಜವಾದದ ಗುಣವನ್ನು ನಕಲು ಮಾಡಿದ್ದವು. ಸರಿಯಾದ ರಾಜಕೀಯ ಜಾಗೃತಿಯಿಲ್ಲದ ಸಾಮಾನ್ಯ ಜರ್ಮನ್‌ರು, ತಮ್ಮ ಬದುಕಿನ ಅಸ್ತವ್ಯಸ್ತತೆ ಮತ್ತು ಅಭದ್ರತೆಗೆ ಕಾರಣವಾದ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಸ್ಪಷ್ಟತೆ ಪಡೆಯಲಿಲ್ಲ.

ತತ್ಪರಿಣಾಮವಾಗಿ, ಅವರು ಹಿಟ್ಲರನ ಚಿತ್ತಾಕರ್ಷಕ ಪ್ರಚಾರದ ಅಬ್ಬರಕ್ಕೆ ಸುಲಭವಾಗಿ ಬಲಿಯಾದರು. ಅದೇ ಸಮಯದಲ್ಲಿ, ಜರ್ಮನಿಯ ವಾಸ್ತವಿಕ ಪರಿಸ್ಥಿತಿಯು ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಗೆ ವೇದಿಕೆಯು ಸಿದ್ಧವಾಗಿತ್ತು. ಆಡಳಿತಾರೂಢ ಜರ್ಮನ್ ಬೂರ್ಜ್ವಾ ವರ್ಗದ ಅತ್ಯಂತ ನಂಬಲರ್ಹ ರಾಜಕೀಯ ನಿರ್ವಾಹಕನಾಗಿದ್ದ ಹಿಟ್ಲರ್ ಇದನ್ನು ಗ್ರಹಿಸಿದ್ದ. ಹೀಗಾಗಿ, ಅಂತಹ ಕ್ರಾಂತಿಯ ಸಾಧ್ಯತೆಯು ವಾಸ್ತವದಲ್ಲಿ ನಿಜವಾಗದಂತೆ ತಡೆಗಟ್ಟಲು ಅವನು ಫ್ಯಾಷಿವಾದದ ಮೂಲಕ ಪ್ರಯತ್ನಿಸಿದ.

### ಜರ್ಮನ್ ಬಂಡವಾಳಶಾಹಿಗಳ ಒಟ್ಟಾರೆ ಹಿತ ಕಾಯುವ ಪಣ ತೊಟ್ಟ ಹಿಟ್ಲರ್

ಜರ್ಮನ್ ಬೂರ್ಜ್ವಾಗಳು ಅವನಲ್ಲಿ ತಮ್ಮ ಒಟ್ಟು ವರ್ಗ ಹಿತಾಸಕ್ತಿಗಳನ್ನು ರಕ್ಷಿಸಬಲ್ಲ ಏಕೈಕ ರಾಜಕೀಯ ಶಕ್ತಿಯನ್ನು ಕಂಡುಕೊಂಡರು. ಜರ್ಮನ್ ಬಂಡವಾಳಶಾಹಿ ವರ್ಗದ ಒಟ್ಟು ಹಿತಾಸಕ್ತಿಗಳನ್ನು ಪೂರೈಸಲು, ಹಿಟ್ಲರ್ ಎಲ್ಲಾ ಸಣ್ಣ ಬಂಡವಾಳದ ಹಿಡುವಳಿಗಳನ್ನು ವಿಸರ್ಜಿಸಿದನು ಮತ್ತು ಏಕಸ್ವಾಮ್ಯ ಬಂಡವಾಳದ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ನೀಡಿದನು. ಇದರ ಪರಿಣಾಮವಾಗಿ, ರಾಷ್ಟ್ರೀಯ ಮಟ್ಟದಲ್ಲಿ ಏಕಸ್ವಾಮ್ಯ ಬಂಡವಾಳಶಾಹಿಗಳ ಲಾಭವು 1932 ರಲ್ಲಿ 175 ದಶಲಕ್ಷ ಡಾಯಿಷ್ ಮಾರ್ಕ್‌ಗಳಿಂದ 1938 ರಲ್ಲಿ 5 ಶತಕೋಟಿ ಮಾರ್ಕ್‌ಗಳಿಗೆ ಏರಿತು, ಆದರೆ ಜೀವನ ವೆಚ್ಚ ಹೆಚ್ಚಾಗಿದ್ದರೂ ಸಹ ಕಾರ್ಮಿಕರ ವೇತನವನ್ನು ಮತ್ತಷ್ಟು ಕಡಿಮೆ ಮಾಡಲಾಯಿತು. ಇದು ಹಿಟ್ಲರ್‌ನ ಹುಸಿ ಸಮಾಜವಾದದ ಮಾದರಿ. ಹಿಟ್ಲರ್ ತನ್ನ ಪಕ್ಷದ ಅನುಯಾಯಿಗಳನ್ನು ಮತ್ತು ಜರ್ಮನ್ ಜನರನ್ನು ತಾನೇ ಸರ್ವೋಚ್ಚ ನಾಯಕನೆಂದು, ದೋಷರಹಿತನೆಂದು, ವರ್ಗಾತೀತನೆಂದು ಮತ್ತು ವಿಮರ್ಶೆಯನ್ನು ಮೀರಿದವನೆಂದು ಜನರು ನಂಬುವಂತೆ ಮಾಡುವಲ್ಲಿ ಯಶಸ್ವಿಯಾದನು. ಅವನು ರಾಷ್ಟ್ರದ ರಕ್ಷಕನಾಗಿದ್ದನು, ದೈವಿಕ ಇಚ್ಛೆಯನ್ನು ಪ್ರತಿನಿಧಿಸುತ್ತಿದ್ದನು, ಸ್ವಾತಂತ್ರ್ಯ, ಹಕ್ಕು, ನ್ಯಾಯ ಮತ್ತು ನೈತಿಕತೆಯ ಮಾನವ ಪರಿಕಲ್ಪನೆಗಳಿಗೆ ಅವನು ಬದ್ಧನಾಗ ಬೇಕಿರಲಿಲ್ಲ, ಎಲ್ಲರೂ ಅವನನ್ನು ಕಣ್ಣುಮುಚ್ಚಿಕೊಂಡು ಅನುಸರಿಸಬೇಕು ಮತ್ತು ಆತನ ಆಜ್ಞೆಯನ್ನು ಪಾಲಿಸಬೇಕು. ಸೂಪರ್‌ಮ್ಯಾನ್ ಮತ್ತು ಸರ್ವೋಚ್ಚ ತೀರ್ಪುಗಾರನಾಗಿ ನಾಯಕನ ಈ ಆರಾಧನೆಯು ನಿಗ್ರಹ ಮತ್ತು ಮನವೊಲಿಕೆಯ

11ನೇ ಪುಟಕ್ಕೆ....

## ಹೈದರಾಬಾದ್: 'ಭಾರತ್ ಸಮ್ಮಿಟ್'ನಲ್ಲಿ ಯುಎಫ್‌ಡಿಪಿಯು ಮಂಡನೆ: ಗಿಗ್ ಕಾರ್ಮಿಕರಿಗೆ ಕೆಲವೊಂದು ಹಕ್ಕುಗಳು ದತ್ತ:

# ಎಐಡಿವೈಓಗೆ ಸಂಯೋಜಿತ ಯುಎಫ್‌ಡಿಪಿಯು ನೇತೃತ್ವದ ಆಂದೋಳನದ ಫಲಶ್ರುತಿ!

ಪ್ರಪಂಚದಾದ್ಯಂತ ಬದಲಾಗುತ್ತಿರುವ ಕಾರ್ಮಿಕ ಮಾರುಕಟ್ಟೆಯ ಬೇಡಿಕೆಯೊಂದಿಗೆ ಹೊಸ ಹೊಸ ಉದ್ಯೋಗಗಳು ಸಹ ಸೃಷ್ಟಿಯಾಗುತ್ತಿವೆ. ಇದರ ಒಂದು ಉದಾಹರಣೆಯೆಂದರೆ ಮೊಬೈಲ್ ಅಪ್ಲಿಕೇಶನ್ ಆಧಾರಿತ ಗಿಗ್ ಕೆಲಸಗಳು. ಈ ರೀತಿಯ ಕೆಲಸಗಳು ದಿನೇದಿನೇ ಹೆಚ್ಚಾಗುತ್ತಿರುವುದು ವಾಸ್ತವ. ಕೇಂದ್ರ ಸರ್ಕಾರದ ನೀತಿ ಆಯೋಗದ ಒಂದು ವರದಿಯ ಪ್ರಕಾರ 2030ರ ಹೊತ್ತಿಗೆ ಈ ದೇಶದಲ್ಲಿ ಸುಮಾರು 2 ಕೋಟಿ 30 ಲಕ್ಷಕ್ಕೂ ಹೆಚ್ಚಿನ ಉದ್ಯೋಗಗಳು ಈ ರೀತಿಯ ಉದ್ಯೋಗಗಳಾಗಿರುತ್ತವೆ.

ಸ್ವಿಗ್ಗಿ, ಜೊಮಾಟೋ, ಓಲಾ, ಊಬರ್, ರ್‍ಯಾಪಿಡೊ, ಅರ್ಬನ್ ಕಂಪನಿ, ಪೋರ್ಟರ್ ಹೀಗೆ ಹಲವು ಸೇವಾಧಾರಿತ ಕಂಪನಿಗಳು ಲಕ್ಷಾಂತರ ಜನರನ್ನು ಉದ್ಯೋಗದಲ್ಲಿ ತೊಡಗಿಸಿಕೊಂಡಿವೆ. ಬಹುರಾಷ್ಟ್ರೀಯ ಬಂಡವಾಳವು ಈ ಪ್ಲಾಟ್‌ಫಾರ್ಮ್ ಕಂಪನಿಗಳಲ್ಲಿ ಹೂಡಿಕೆಯಾಗಿದೆ. ಅಲ್ಲದೆ ಅಂತರರಾಷ್ಟ್ರೀಯ ಬಂಡವಾಳ, ಅಂದರೆ ವಿವಿಧ ರಾಷ್ಟ್ರಗಳ ಹೂಡಿಕೆದಾರರು ಹುಟ್ಟುಹಾಕಿರುವ ವಿತ್ತೀಯ ಸಂಸ್ಥೆಗಳು ಇದರಲ್ಲಿ ಹೂಡಿಕೆ ಮಾಡಿವೆ. ಉದಾಹರಣೆಗೆ ANT Financial, Alibaba ಹೀಗೆ ಹತ್ತು ಹಲವು.

ಇತ್ತೀಚಿನ ದಿನಗಳಲ್ಲಿ ಇನ್ನೊಂದು ಹೊಸ ರೀತಿಯ ಹೂಡಿಕೆಯನ್ನು ಕಾಣುತ್ತೇವೆ, ಅದೆಂದರೆ 'ವೆಂಚರ್ ಕ್ಯಾಪಿಟಲ್'. ಇದರ ಸ್ವರೂಪವೆಂದರೆ, ಒಂದು ಪ್ರಮಾಣದ ಹೂಡಿಕೆ ಮಾಡಿ ಅತೀ ಹೆಚ್ಚು ಲಾಭವನ್ನು ಗಳಿಸುವ ಸಾಹಸಕ್ಕೆ ಕೈಹಾಕುವುದು. ಉದಾಹರಣೆಗೆ ಹತ್ತು ರೂಪಾಯಿ ಹೂಡಿಕೆ ಮಾಡಿ, ಇಪ್ಪತ್ತು ರೂಪಾಯಿ ಲಾಭ ಮಾಡಬೇಕು ಎಂದು ಅಲ್ಲ, ಬದಲಿಗೆ ನೂರು ರೂಪಾಯಿ ಲಾಭ ಗಳಿಸಬೇಕು ಎಂದು. ಈ ಪ್ರಯೋಗದಲ್ಲಿ ಹತ್ತು ರೂಪಾಯಿ ಕಳೆದುಕೊಳ್ಳಲು ಬಂಡವಾಳಿಗರು ತಯಾರಿರುತ್ತಾರೆ.

ಓಲಾ, ಊಬರ್‌ನಂತಹ ಪ್ಲಾಟ್‌ಫಾರ್ಮ್ ಕಂಪನಿಗಳು ಸ್ವಂತದ ಒಂದು ಕಾರನ್ನೂ ಇಟ್ಟುಕೊಳ್ಳದೆ ವಿಶ್ವದಾದ್ಯಂತ ಕ್ಯಾಬ್ ಸೇವೆಯನ್ನು ನೀಡುತ್ತವೆ. ಜೊಮಾಟೋ ಒಂದು ಹೋಟೆಲನ್ನೂ ನಡೆಸದೆ 27 ರಾಷ್ಟ್ರಗಳಲ್ಲಿ ಆಹಾರ ಸರಬರಾಜು ಸೇವೆಯಲ್ಲಿ ತೊಡಗಿದೆ.

ಒಂದು ಸಣ್ಣ ಕೈಗಾರಿಕೆ ತೆರೆದರೂ ಅದಕ್ಕೆ ಫ್ಯಾಕ್ಟರೀಸ್ ಕಾಯ್ದೆ ಅಥವಾ ಒಂದು ಕಿರಾಣಿ ಅಂಗಡಿ ತೆಗೆದರೆ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ ಅನ್ವಯವಾಗುತ್ತದೆ. ಆದರೆ, ಕೋಟಿಗಟ್ಟಲೆ ವಹಿವಾಟು ಇರುವ, ಲಕ್ಷಾಂತರ ಜನ ಕೆಲಸ ಮಾಡುವ ಗಿಗ್ ಕ್ಷೇತ್ರದ ಕಾರ್ಮಿಕರಿಗೆ ಯಾವುದೇ ಕಾನೂನುಗಳು ಇಲ್ಲದ ಪರಿಸ್ಥಿತಿಯಲ್ಲಿ ನಾವಿದ್ದೇವೆ.

### ಹೋರಾಟದ ಫಲವಾಗಿ ಕೆಲವೊಂದು ಕಾಯ್ದೆಗಳು ಜಾರಿ

ರಾಜಸ್ಥಾನದ ರಾಜ್ಯ ಸರ್ಕಾರವು 2023ರಲ್ಲಿ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಿದ್ದು ಒಂದೆಡೆಯಾದರೆ, ಕರ್ನಾಟಕ, ತೆಲಂಗಾಣ ಮತ್ತು ಇನ್ನಿತರ ರಾಜ್ಯ ಸರ್ಕಾರಗಳು ಸಹ ಈ ಕೆಲಸಕ್ಕೆ ಮುಂದಾಗಿವೆ. ತೆಲಂಗಾಣ ರಾಜ್ಯ ಸರ್ಕಾರವು ಏಪ್ರಿಲ್ 24, 25 ಮತ್ತು 26, 2025 ರಂದು 'ಭಾರತ್ ಸಮ್ಮಿಟ್' ಸಂಘಟಿಸಿತ್ತು. ಈ ಸಮ್ಮಿಟ್‌ನಲ್ಲಿ ಹಲವು ಗೋಷ್ಠಿಗಳನ್ನು ಹಮ್ಮಿಕೊಂಡಿತ್ತು. ಅದರಲ್ಲಿ "App Worker Power" ಎಂದು ಒಂದು ಗೋಷ್ಠಿಯನ್ನು ಗಿಗ್ ಕಾರ್ಮಿಕರ ಕುರಿತಾಗಿ ಏರ್ಪಡಿಸಿತ್ತು. ಅದರಲ್ಲಿ ನಡೆದ ವಿವಿಧ ಚರ್ಚೆಗಳಲ್ಲಿ "Access to information and Grievance" (ಮಾಹಿತಿ ಲಭ್ಯತೆ ಮತ್ತು ದೂರು ನಿವಾರಣೆ) ಎನ್ನುವ ಚರ್ಚೆಯಲ್ಲಿ ಪ್ಯಾನೆಲಿಸ್ಟ್ ಆಗಿ ನಮ್ಮ ಯುವಜನ ಸಂಘಟನೆ, ಎಐಡಿವೈಓಗೆ ಸಂಯೋಜಿತ ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್ (ಯುಎಫ್‌ಡಿಪಿಯು) ನ ಕರ್ನಾಟಕ ರಾಜ್ಯಾಧ್ಯಕ್ಷರಾದ ಕಾ. ವಿನಯ್ ಸಾರಥಿ ಹಲವು ವಿಚಾರಗಳನ್ನು ಮಂಡಿಸಿದರು.

### ಗಿಗ್ ಕಾರ್ಮಿಕರ ಬವಣೆಯ ಒಂದು ನೋಟ!

ಪ್ಲಾಟ್‌ಫಾರ್ಮ್ ಕಂಪನಿಗಳ ವಾದವೆಂದರೆ, 'ಈ ಕ್ಷೇತ್ರದಲ್ಲಿ ಬಹುತೇಕರು ತಮ್ಮ ನಿತ್ಯದ ಕೆಲಸದ ನಂತರ ಸ್ವಲ್ಪ ಹೆಚ್ಚು ಗಳಿಕೆಗಾಗಿ ಈ ಕೆಲಸವನ್ನು ಮಾಡುತ್ತಾರೆ' ಎಂದು. ಆದರೆ ವಾಸ್ತವವೇ ಬೇರೆ. ನಿತ್ಯದ ಗಳಿಕೆಗೆ ಈ ದುಡಿಮೆಯ ಮೇಲೆ ಅವಲಂಬಿತರಾಗಿರುವವರೇ ಹೆಚ್ಚು, ಕಂಪನಿಗೂ ಸಹ ಈ ವಿಷಯದ ಅರಿವಿದೆ. ಗಿಗ್ ಕಾರ್ಮಿಕರಿಗೆ ಹಲವಾರು ಮಾಹಿತಿ ಪಡೆಯುವ ಅಧಿಕಾರವೇ ಇರುವುದಿಲ್ಲ. ಅವರ ಗೋಳು ಹೇಳತೀರದ್ದು. ವಿಶೇಷವಾಗಿ ಫುಡ್ ಡೆಲಿವರಿ ಪಾರ್ಟ್ನರ್‌ಗಳ ಕೆಲಸದಲ್ಲಿ ಹಲವಾರು ಸೂಕ್ಷ್ಮತೆಗಳು ಉಂಟು.

### ಕ್ಷೀಣಿಸುತ್ತಿರುವ ಪೇ ಔಟ್

ಈ ಕೆಲಸದಲ್ಲಿ ಪೆಟ್ರೋಲ್ ಖರ್ಚು, ಮೊಬೈಲ್ ರಿಚಾರ್ಜ್‌ನ ಖರ್ಚು, ಕಂಪನಿಯ ಯುನಿಫಾರ್ಮ್‌ನ, ಟಿ-ಶರ್ಟ್‌ನ ಖರ್ಚು, ಪಾರ್ಸೆಲ್ ಕೊಂಡೊಯ್ಯುವ ಬ್ಯಾಗ್‌ನ ಖರ್ಚು, ಮಳೆ ಬಂದಾಗ ರಕ್ಷಣೆಗಾಗಿ ಬಳಸುವ ಕಂಪನಿಯ ಲೋಗೋ ಇರುವ ರೈನ್‌ಕೋಟ್‌ನ ಖರ್ಚು ಎಲ್ಲವೂ ಈ ಕಾರ್ಮಿಕರದ್ದೇ. ಈ ಖರ್ಚುಗಳು ಒಂದೆಡೆಯಾದರೆ, ಇನ್ನೊಂದೆಡೆ, ಪ್ರತಿ ಡೆಲಿವರಿ ಮಾಡಿದ್ದಕ್ಕಾಗಿ ಕಾರ್ಮಿಕರಿಗೆ ಸಿಗುವ ವೇತನ ದಿನೇದಿನೇ ಕ್ಷೀಣಿಸುತ್ತಿದೆ. ಈ ವೇತನಕ್ಕೆ ಪೇ ಔಟ್ (Pay-Out) ಎನ್ನುತ್ತಾರೆ. ಸುಮಾರು 6 ವರ್ಷಗಳ ಹಿಂದೆ, ಬೆಂಗಳೂರಿನ ಪ್ರಮುಖ ಝೋನ್‌ಗಳಲ್ಲಿ, ಮೊದಲ 5 ಕಿ.ಮೀ. ಅಥವಾ ಅದಕ್ಕಿಂತ ಕಮ್ಮಿ ಕ್ರಮಿಸಿ ಕೈಗೊಂಡ ಪ್ರತಿ ಡೆಲಿವರಿಗೆ ರೂ.40 ರಿಂದ ರೂ.50 ದೊರಕುತ್ತಿತ್ತು. ಅದಕ್ಕಿಂತ ಹೆಚ್ಚಿನ ದೂರದ ಆರ್ಡರ್ ಆದರೆ, 5ಕಿ.ಮೀ. ನಂತರ ಕ್ರಮಿಸಿದ ಪ್ರತೀ ಕಿಲೋಮೀಟರ್‌ಗೆ ರೂ.10 ರಂತೆ ದೊರೆಯುತ್ತಿತ್ತು. ಆದರೆ, ಕಂಪನಿಯು ಈ ವೇತನವನ್ನು ಆಗಾಗ ಪರಿಷ್ಕರಣೆ ಮಾಡುತ್ತಲೇ ಇರುತ್ತದೆ. ಹೀಗಾಗಿ ಇವತ್ತಿಗೆ ಇದು 12 ರಿಂದ 15 ರೂಪಾಯಿಗೆ ಇಳಿದಿದೆ. ಅಂತೆಯೇ, ನಂತರದ ಪ್ರತಿ ಕಿಲೋಮೀಟರ್‌ಗೆ ರೂ. 5 ಕ್ಕೆ ಇಳಿದಿದೆ. ಇದು ಸದಾ ಪರಿಷ್ಕರಣೆಗೊಳ್ಳುತ್ತಿರುತ್ತದೆ. ಮಳೆ ಬರುವ ಸಂದರ್ಭಗಳಲ್ಲೂ ಕೆಲಸ ಮಾಡಿದರೆ ಪ್ರತಿ ಡೆಲಿವರಿಗೆ ರೂ.10 ಹೆಚ್ಚುವರಿ ಹಣ ಕಾರ್ಮಿಕರಿಗೆ ಸಿಗುತ್ತಿತ್ತು. ಆದರೆ, ಇತ್ತೀಚೆಗೆ ಬೆಂಗಳೂರಿನಲ್ಲಿ ತಿಳಿದು ಬಂದ ವಿಷಯವೆಂದರೆ, ಈ ಹೆಚ್ಚುವರಿ ದರವನ್ನು 10% ಎಂದು ಪರಿಷ್ಕರಣೆ ಮಾಡಲಾಗಿದೆ. ಅಂದರೆ ಮೊದಲ 5 ಕಿಮೀ ಗೆ ದೊರೆಯುವ ಹಣದ 10% ಹೆಚ್ಚುವರಿಯಾಗಿ ದೊರೆಯುತ್ತದೆ. ಅಂದರೆ, ರೂ.10 ಬದಲಿಗೆ ಈಗ ರೂ.1.20 ಇಂದ ರೂ.1.5 ಮಾತ್ರ ಹೆಚ್ಚುವರಿಯಾಗಿ ಸಿಗುತ್ತದೆ. ಕಂಪನಿಯು ಈ ಪರಿಷ್ಕರಣೆಯಿಂದಾಗಿ ರೂ.8.5 ಹೆಚ್ಚುವರಿ ಲಾಭಗಳಿಕೆ ಮಾಡಬಹುದು. ಪೇ ಔಟ್ ಪರಿಷ್ಕರಣೆ ಮಾಡುವಾಗ ಕಾರ್ಮಿಕರ ಅಭಿಪ್ರಾಯಕ್ಕೆ ಯಾವ ಮನ್ನಣೆಯೂ ಇರುವುದಿಲ್ಲ. ಕಂಪನಿಯು ಏಕಾಏಕಿ ಮನಸೋಇಚ್ಛೆ ದರ ಪರಿಷ್ಕರಣೆ ಮಾಡುತ್ತಲೇ ಇರುತ್ತದೆ. ಈ ಮಾಹಿತಿಯನ್ನು ದರ ಪರಿಷ್ಕರಣೆಯಾದ ನಂತರ ಕಾರ್ಮಿಕರಿಗೆ ಆಪ್‌ನಲ್ಲಿ ನೋಟಿಫಿಕೇಶನ್ ಮೂಲಕ ನೀಡಲಾಗುತ್ತದೆ.

### ಪೆನಾಲ್ಟಿ ಎಂಬ ಬರೆ!

### ಹಲವು ಬಾರಿ ಕಾರ್ಮಿಕರಿಗೆ ಸಕಾರಣಗಳನ್ನು ನೀಡದೆ ದಂಡ ವಿಧಿಸುವುದು ಸರ್ವೇಸಾಮಾನ್ಯ.

### ಕೈಕೊಟ್ಟ ಇನ್ಸೆಂಟಿವ್

10 ಡೆಲಿವರಿಗಳನ್ನು ಕೈಗೊಂಡರೆ, ರೂ.150 ರಿಂದ ರೂ.200ವರೆಗೂ ಇನ್ಸೆಂಟಿವ್ ದೊರಕುವುದೆಂದು ಕಂಪನಿಯ ನಿಯಮ ಹೇಳುತ್ತದೆ. ಆದರೆ, ಎಂಟರಿಂದ ಒಂಭತ್ತು ಡೆಲಿವರಿಗಳು ಮುಗಿದ ಮೇಲೆ ಇನ್ಸೆಂಟಿವ್ ದೊರಕಿಸಿಕೊಡುವ ಹತ್ತನೇ ಡೆಲಿವರಿಯು ಸುಲಭವಾಗಿ ಸಿಗುವುದಿಲ್ಲ. ಕೆಲವೊಮ್ಮೆ ಗಂಟೆಗಟ್ಟಲೆ ಕಾಯಬೇಕು. ಹಲವಾರು ಬಾರಿ ಇನ್ಸೆಂಟಿವ್ ಇಲ್ಲದೆ ಹಿಂದಿರುಗುವ ಪ್ರಸಂಗಗಳೂ ಉಂಟು. 2025ರ ಹೊಸ ವರ್ಷದ ಸಂದರ್ಭದಲ್ಲಿ, ಡಿಸೆಂಬರ್ 31 ಮತ್ತು ಜನವರಿ 1, ಇಂತಿಷ್ಟು ಡೆಲಿವರಿಗಳನ್ನು ಕೈಗೊಂಡ ಕಾರ್ಮಿಕರಿಗೆ ಪ್ಲಾಟ್‌ಫಾರ್ಮ್ ಕಂಪನಿಯೊಂದು ಹೆಚ್ಚು ಇನ್ಸೆಂಟಿವ್ ನೀಡುವುದಾಗಿ ಘೋಷಣೆ ಮಾಡಿತ್ತು. ಆ ಎರಡು ದಿನಗಳು ಕಾರ್ಮಿಕರು ಕೆಲಸ ನಿರ್ವಹಿಸಿದ ನಂತರ ಹಲವಾರು ಕಾರ್ಮಿಕರ ಐಡಿಗಳನ್ನು ಏಕಾಏಕಿ ಬ್ಲಾಕ್ ಮಾಡಿ, ಕುಂಟು ನೆಪಗಳನ್ನು ನೀಡಿ ಘೋಷಣೆ ಮಾಡಿದ್ದ ಇನ್ಸೆಂಟಿವ್ ಕಾರ್ಮಿಕರಿಗೆ ಕೈಗೆ ಸಿಗಲೇ ಇಲ್ಲ.



ಕಾ.ವಿನಯ್ ಸಾರಥಿ

### ಐ ಡಿ ಬ್ಲಾಕ್ ಎಂಬ ಬ್ರಹ್ಮಾಸ್ತ್ರ!

ಹಲವು ಸಂದರ್ಭಗಳಲ್ಲಿ ಕಾರ್ಮಿಕರ ಐಡಿಗಳನ್ನು ಕಂಪನಿಗಳು ಬ್ಲಾಕ್ ಮಾಡುತ್ತಲೇ ಇರುತ್ತವೆ. ಗ್ರಾಹಕರು ಏನೇ ದೂರು ನೀಡಿದ್ದಲ್ಲಿ ಸರಿಯಾದ ವಿಚಾರಣೆಯಾಗಲಿ, ವಿವರಣೆ ಆಗಲಿ ನೀಡದೆ ಕಂಪನಿ ಐಡಿ ಬ್ಲಾಕ್ ಮಾಡಿಬಿಡುತ್ತದೆ. ಐಡಿ ಬ್ಲಾಕ್ ಆದ ಪಕ್ಷದಲ್ಲಿ ಕಾರ್ಮಿಕರಿಗೆ ಕೆಲಸ ನಿರ್ವಹಿಸಲು ಆಗುವುದಿಲ್ಲ. ಈ ಕ್ರಮವು ಕೆಲಸಗಾರರನ್ನು ವಜಾಗೊಳಿಸಿದಂತೆ. ಆದರೆ ಇಲ್ಲಿ ಯಾವುದೇ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳು ಅಸ್ತಿತ್ವದಲ್ಲಿ ಇಲ್ಲ. ಒಂದು ಪ್ಲಾಟ್‌ಫಾರ್ಮ್ ಕಂಪನಿಯಂತೂ ರಾಜಾರೋಷವಾಗಿ, ಕಾರ್ಮಿಕರು ಸಂಘ ಕಟ್ಟುವ ಯತ್ನ ಮಾಡಿದರೆ ಅಂಥವರ ಐಡಿ ಬ್ಲಾಕ್ ಮಾಡಲಾಗುತ್ತದೆ ಎಂದು ತಮ್ಮ ನಿಬಂಧನೆಯಲ್ಲಿಯೇ ಹಾಕಿಕೊಂಡಿತ್ತು. ಈ ವಿಷಯವನ್ನು ಕಾರ್ಮಿಕ ಇಲಾಖೆಯ ಗಮನಕ್ಕೆ ತಂದ ನಂತರ ಕಂಪನಿಯು ಈ ನಿಬಂಧನೆಯನ್ನು ತೆಗೆದುಹಾಕಿದೆ. ಆದರೆ ನಿರ್ದಾಕ್ಷಿಣ್ಯವಾಗಿ ಕಂಪನಿಯು ಈ ಕ್ರಮವನ್ನು ಈಗಲೂ ಕೈಗೊಳ್ಳುತ್ತದೆ.

### ಕೈಗೆಟುಕದ ದ್ರಾಕ್ಷಿ ಹುಳಿ ಎಂಬಂತೆ ಪ್ಲಾಟ್‌ಫಾರ್ಮ್ ಕಂಪನಿ ಘೋಷಣೆ ಮಾಡಿರುವ ವಿಮೆ

ಹಲವು ಬಾರಿ ಯುಎಫ್‌ಡಿಪಿಯು ಕಾರ್ಮಿಕ ಸಂಘವು ಆರೋಗ್ಯ ಭದ್ರತೆ ಮತ್ತು ಅಪಘಾತ ವಿಮೆ ವಿಚಾರವಾಗಿ ಕಾರ್ಮಿಕ ಇಲಾಖೆಯೊಂದಿಗೆ ಚರ್ಚಿಸಿ ಕಂಪನಿ ಕೈಗೊಳ್ಳಬೇಕಾದ ಕ್ರಮಕ್ಕೆ ತಾಕೀತು ಮಾಡಿತ್ತು. ಈ ಒತ್ತಡದ ಹಿನ್ನೆಲೆಯಲ್ಲಿ ಕಂಪನಿಗಳು ವಿಮೆ ಯೋಜನೆ ಘೋಷಿಸಿವೆ. ಆದರೆ ಈ ವಿಮೆ ಪಡೆಯುವುದು ಕಷ್ಟ ಸಾಧ್ಯ. ಕಂಪನಿ ಘೋಷಿಸಿದ ವಿಮೆ ಪಡೆದವರು ಬೆರಳೆಣಿಕೆಯಷ್ಟು ಜನ ಮಾತ್ರ. ವಿಮೆಯ ನಿಬಂಧನೆಗಳು ಅಸ್ಪಷ್ಟ. ನಗದುರಹಿತ ವಿಮೆ ಯೋಜನೆ ಘೋಷಣೆ ಮಾಡಿದ್ದೇವೆ ಎಂದು ಕಂಪನಿಯು ಬೀಗುತ್ತದೆ. ಆದರೆ ಆಸ್ಪತ್ರೆಗಳಿಗೆ ಕಾರ್ಮಿಕರು ಹೋದಾಗ ಮೊದಲು ದುಡ್ಡು ಕಟ್ಟಬೇಕು, ನಂತರ ಮುಂದಿನ ಚಿಕಿತ್ಸೆ ಎಂಬ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಕಂಪನಿ ಘೋಷಿಸಿರುವ ವಿಮೆಯನ್ನು ಪಡೆಯುವ ಕ್ರಮ ಫೀಲ್ಡ್ ಮ್ಯಾನೇಜರ್‌ಗಳಿಗೆ ಸ್ಪಷ್ಟ ಇರುವುದಿಲ್ಲ. ಇಂತಹ ಹಲವು ವಿಷಯಗಳ ಮಾಹಿತಿ ಕಾರ್ಮಿಕರಿಗೆ ದೊರೆಯುವುದಿಲ್ಲ ಅಥವಾ ದೊರೆತರೂ ಆಪ್‌ನಲ್ಲಿ ನೋಟಿಫಿಕೇಶನ್ ಮೂಲಕ ಕಂಪನಿಯ ಘೋಷಣೆಯನ್ನು ತಿಳಿಸಲಾಗುತ್ತದೆ. ಇವುಗಳು ಎಷ್ಟೋ ಬಾರಿ ಅಸ್ಪಷ್ಟ. ಮುಖ್ಯವಾಗಿ ಈ ಎಲ್ಲಾ ವಿಚಾರಗಳಲ್ಲೂ ಕಂಪನಿಗಳು ಏಕಪಕ್ಷೀಯವಾಗಿ ನಿರ್ಧಾರಗಳನ್ನು ಕೈಗೊಂಡು ಕಾರ್ಮಿಕರ ಎಲ್ಲಾ ಹಕ್ಕುಗಳನ್ನು ಮೊಟಕುಗೊಳಿಸಿವೆ.

ಜೊತೆಗೆ ಕುಂದು-ಕೊರತೆ ಪರಿಹಾರ ಕಾರ್ಯವಿಧಾನವು (grievance redressal mechanism) ಅಸ್ತಿತ್ವದಲ್ಲೇ ಇಲ್ಲ. ಹೀಗಾಗಿ ಕಾರ್ಮಿಕರ ಕುಂದು-ಕೊರತೆ ದೂರುಗಳು ನಿವಾರಣೆಯಾಗುವ ಪ್ರಶ್ನೆಯೇ ಇಲ್ಲ. ಕಂಪನಿಯ ತೀರ್ಮಾನಗಳೇ ಅಂತಿಮ. ಅಪಘಾತಗಳ ಸಂದರ್ಭದಲ್ಲಿಯೋ ಅಥವಾ ಗ್ರಾಹಕರೊಂದಿಗೆ ವಾಗ್ವಾದ ನಡೆದ ಸಮಯದಲ್ಲಿಯೋ ಇರಬಹುದು, ಎಂತಹದ್ದೇ ತುರ್ತು ಪರಿಸ್ಥಿತಿಯಲ್ಲೂ ಸಹಾಯವಾಣಿ ಎಂಬುದು ಇಲ್ಲ. Chatbot ನೊಂದಿಗೆ ಮೆಸೇಜ್ ಕಳಿಸುವ ಅವಕಾಶವನ್ನು ಮಾತ್ರ ಕಂಪನಿ ನೀಡಿದೆ.

ಈ ಮೇಲಿನ ವಿಚಾರಗಳನ್ನು ಗೋಷ್ಠಿಯಲ್ಲಿ ಕಾ. ವಿನಯ್ ಸಾರಥಿ ಮಂಡಿಸಿದರು. ಜೊತೆಗೆ ತೆಲಂಗಾಣ ರಾಜ್ಯ ಸರ್ಕಾರವು ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಕುರಿತು ತರಲು ಇಚ್ಛಿಸಿದ್ದ ಕಾಯ್ದೆಯಲ್ಲಿ, ಈ ಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಕಾರ್ಮಿಕರು ಎಂದು ಪರಿಗಣಿಸಬೇಕು ಮತ್ತು ಕೈಗಾರಿಕಾ ವಿವಾದಗಳ ಕಾಯ್ದೆ (industrial disputes act) ಅನ್ವಯವಾಗುವಂತೆ ಹೊಸ ಕಾಯ್ದೆಯನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಈ ಹಕ್ಕುಗಳಿಗಾಗಿಯ ಹಲವು ಹೋರಾಟಗಳ ಪರಿಣಾಮದಿಂದ, ರಾಜಸ್ಥಾನದಂತೆ, ಕೇಂದ್ರ ಸರ್ಕಾರ, ಕರ್ನಾಟಕ ಮತ್ತು ತೆಲಂಗಾಣ ಸರ್ಕಾರಗಳು ಮತ್ತು ದೇಶದ ವಿವಿಧ ರಾಜ್ಯ ಸರ್ಕಾರಗಳು ಕಾನೂನು ತರಲು ಮುಂದಾಗಿವೆ. ಆದರೆ ಈ ಕಾನೂನುಗಳು ಕ್ಷೇಮಾಭಿವೃದ್ಧಿ ಮಂಡಳಿ ಮತ್ತು ಸಾಮಾಜಿಕ ಭದ್ರತೆಗೆ ಸೀಮಿತವಾಗಿವೆ. ಹಾಗಾಗಿ, ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಕಾರ್ಮಿಕರು ಎಂದು ಗುರುತಿಸಿ ಎಲ್ಲಾ ಕಾರ್ಮಿಕ ಹಕ್ಕುಗಳು ಅನ್ವಯವಾಗುವಂತೆ ಸರ್ಕಾರಗಳು ಕ್ರಮ ಕೈಗೊಳ್ಳುವುದು ಅವಶ್ಯಕ. ■

10ನೇ ಪುಟದಿಂದ

## ಹಿಟ್ಲರನ ಫ್ಯಾಸಿವಾದವನ್ನು ಹತ್ತಿಕ್ಕಿದ ವಿಜಯಕ್ಕೆ 80 ವರ್ಷ

ನೀತಿಯೊಂದಿಗೆ ಫ್ಯಾಸಿವಾದದ ಒಂದು ವಿಶಿಷ್ಟ ಗುಣಲಕ್ಷಣವಾಗಿದೆ.

ಅಂದಿನಿಂದ, ಯುದ್ಧದ ಕಾರ್ಮೋಡಗಳು ಕವಿಯಲಾರಂಭಿಸಿದವು. ಆದರೆ, ಹಿಟ್ಲರ್‌ನ ನೈಜ ಉದ್ದೇಶದ ವ್ಯಾಪ್ತಿಯನ್ನು ಅಳೆಯಲು ಸಾಧ್ಯವಾಗದ ಬ್ರಿಟನ್, ಫ್ರಾನ್ಸ್ ಮತ್ತು ಇಟಲಿ 1938ರಲ್ಲಿ ಮ್ಯೂನಿಚ್‌ನಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದವು, ಇದು ನಾಜಿ ಜರ್ಮನಿಗೆ ಜರ್ಮನ್ ಮಾತನಾಡುವ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಚೆಕೊಸ್ಲೊವಾಕಿಯಾದ ಸುಡೆಟೆನ್‌ಲ್ಯಾಂಡ್ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಬ್ರಿಟನ್ ಮತ್ತು ಫ್ರಾನ್ಸ್‌ನ ಓಲೈಕೆಯ ನೀತಿಯಿಂದ ಪ್ರೇರಿತವಾದ ಈ ನಿರ್ಧಾರವು ದೊಡ್ಡ ಪ್ರಮಾಣದ ಯುದ್ಧವನ್ನು ತಡೆಯುವ ದೃಷ್ಟಿಯಿಂದ ವಿಫಲವಾಯಿತು. ಏಕೆಂದರೆ ಹಿಟ್ಲರ್ ತನ್ನ ಪ್ರಾದೇಶಿಕ ವಿಸ್ತರಣೆಯ ನೀತಿಯನ್ನು ಮುಂದುವರೆಸಿದ.

### ಹಿಟ್ಲರ್ ಜೊತೆಗೆ ಸೇರಿದ ಇಟಲಿ ಮತ್ತು ಜಪಾನ್

ಮತ್ತೊಂದೆಡೆ, ಮೊದಲನೆಯ ಮಹಾಯುದ್ಧದ ನಂತರ ಇಟಲಿಯಲ್ಲಿ ಫ್ಯಾಸಿಸ್ಟ್ ಪಕ್ಷವನ್ನು ರಚಿಸಿದ ಬೆನಿಟೊ ಮುಸೊಲಿನಿ 1922ರಲ್ಲಿ ಇಟಲಿಯಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಿದ್ದ ಮತ್ತು "ರಾಜ್ಯ ಮತ್ತು ಅದರ ಎಲ್ಲಾ ರೂಪಗಳನ್ನು ಕೆಡವಿ ಹಾಕಿ" ಎಂಬ ಘೋಷಣೆಯನ್ನು ಮೊಳಗಿಸಿದ. ಅದರಂತೆ, ಅವನು ಪ್ರಜಾಸತ್ತಾತ್ಮಕ ಸರ್ಕಾರದ ಸಂಸ್ಥೆಗಳನ್ನು ನಾಶ ಮಾಡಿದ ಮತ್ತು 1925ರಲ್ಲಿ ತನ್ನನ್ನು ತಾನೆ 'ಸರ್ವಾಧಿಕಾರಿ' ಎಂದು ಘೋಷಿಸಿಕೊಂಡ. ಅವನ ರಾಜಕೀಯ ವಿರೋಧಿಗಳನ್ನು ಬೆದರಿಸಲು, 'ಕಪ್ಪು ಅಂಗಿ ದಳ' ಎಂಬ ಶಸ್ತ್ರಸಜ್ಜಿತ ಗೂಂಡಾಪಡೆಯನ್ನು ರಚಿಸಲಾಯಿತು. 1935ರಲ್ಲಿ ಅಬಿಸ್ಸಿನಿಯಾವನ್ನು(ಈಗ ಇಥಿಯೋಪಿಯಾ) ಆಕ್ರಮಿಸಿಕೊಂಡ ನಂತರ ಮತ್ತು ಸ್ಪಾನಿಷ್ ಅಂತರ್ಯುದ್ಧದಲ್ಲಿ ಸರ್ವಾಧಿಕಾರಿ ಫ್ರಾಂಕೋಗೆ ಮಿಲಿಟರಿ ಬೆಂಬಲವನ್ನು ನೀಡಿದ ನಂತರ ಅವನು 1939ರಲ್ಲಿ ಹಿಟ್ಲರ್‌ನೊಂದಿಗೆ ಕೈಜೋಡಿಸಿದ. ಜಪಾನ್, ಅಧಿಕೃತವಾಗಿ 27 ಸೆಪ್ಟೆಂಬರ್ 1940ರಂದು ಜರ್ಮನಿ ಮತ್ತು ಇಟಲಿಯೊಂದಿಗೆ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಫ್ಯಾಸಿಸ್ಟ್ ಕೂಟವನ್ನು ಸೇರಿಕೊಂಡಿತು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯಲಿದೆ)

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಬಳ್ಳಾರಿ: ನರೇಗಾ ಕಾರ್ಮಿಕರ ಪ್ರತಿಭಟನೆ




ನರೇಗಾ ಕೂಲಿ ಕಾರ್ಮಿಕರಿಗೆ ಎರಡು ತಿಂಗಳಿನಿಂದ ಬಾಕಿ ಇರುವ ಕೂಲಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು, ಪ್ರತೀ ಕುಟುಂಬಕ್ಕೆ ಒಂದು ನೂರು ದಿನ ಕೆಲಸ ಮತ್ತು ಪೂರ್ಣ ಕೂಲಿ ರೂ. 370 ಸಂದಾಯ ಮಾಡಬೇಕು ಮತ್ತು ಕೆಲಸದ ವೇಳೆಯಲ್ಲಿ ನರೇಗಾ ಯೋಜನೆಯ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಬೇಡಿಕೆಗಳಿಗಾಗಿ ಬಳ್ಳಾರಿಯಲ್ಲಿ ಎಐಕೆಕೆಎಂಎಸ್ ರೈತ–ಕೃಷಿ ಕಾರ್ಮಿಕ ಸಂಘಟನೆಯಿಂದ ಬೃಹತ್ ಪ್ರತಿಭಟನೆ ಮಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲಾಯಿತು

## ಪ್ರಥಮ ಮೈಸೂರು ಜಿಲ್ಲಾ ರೈತ ಕೃಷಿ ಕಾರ್ಮಿಕರ ಸಮ್ಮೇಳನ




ಎಐಕೆಕೆಎಂಎಸ್ ಮೈಸೂರು ಜಿಲ್ಲಾ ಸಮ್ಮೇಳನದ ಅಂಗವಾಗಿ ರೈತರ ಮೆರವಣಿಗೆ

# ಸರ್ಕಾರಿ ಶಾಲೆಗಳನ್ನು ಬಲಪಡಿಸಿ–ವಿದ್ಯಾರ್ಥಿ–ಪೋಷಕರ ಆಗ್ರಹ!

ಸಂಯೋಜನೆ ಹೆಸರಿನಲ್ಲಿ ರಾಜ್ಯ ಸರ್ಕಾರವು ರಾಜ್ಯದಲ್ಲಿ 6 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವುದರ ವಿರುದ್ಧ ಎಐಡಿಎಸ್ಓ ನೇತೃತ್ವದಲ್ಲಿ ಹೋರಾಟ ನಡೆ–ಯುತ್ತಿದೆ. ವಿದ್ಯಾರ್ಥಿ ಕಾರ್ಯಕರ್ತರು ಸಾರ್ವಜನಿಕ ಸ್ಥಳಗಳಲ್ಲಿ ಸಹಿ ಸಂಗ್ರಹಿಸುವುದರೊಂದಿಗೆ, ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಆಗ್ರಹಿಸಿ ಹಲವಾರು ಸಾರ್ವಜನಿಕ ಸಭೆಗಳನ್ನು ಸಂಘಟಿಸುತಿದ್ದಾರೆ. ಈಗಾಗಲೇ ಸಾವಿರಾರು ಸಾರ್ವಜನಿಕರನ್ನು ತಲುಪಲಾಗಿದೆ. ಎಲ್ಲೆಡೆ ಜನರು ಭಾವನಾತ್ಮಕವಾಗಿ ಪ್ರತಿಕ್ರಿಯಿಸುತ್ತಿದ್ದಾರೆ, ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿ ತಮ್ಮ ಸಹಿ ನೀಡುತ್ತಿದ್ದಾರೆ. ರಾಜ್ಯದ ಹಲವೆಡೆ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಮುಂದೆ ಬಂದು ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

### ಪೋಷಕರ ಸಭೆಗಳು

ಮುಚ್ಚುವ ಪಟ್ಟಿಯಲ್ಲಿರುವ ಮತ್ತು ಸೌಕರ್ಯಗಳ ಕೊರತೆಯಿರುವ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಎಐಡಿಎಸ್ಓ, ಪೋಷಕರ ಸಭೆಗಳನ್ನು ನಡೆಸುತ್ತಿದೆ. ಈ ಸಭೆಗಳಲ್ಲಿ ಭಾಗವಹಿಸುತ್ತಿರುವ ಪೋಷಕರು 'ನಮ್ಮ ಊರಿನ ಶಾಲೆ ಮುಚ್ಚಲು ಬಿಡೋದಿಲ್ಲ, ನಮ್ಮ ಶಾಲೆಯನ್ನು ನಾವು ಉಳಿಸಲು ಹೋರಾಡುತ್ತೇವೆ' ಎಂದು ಶಾಲೆಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ವಿರುದ್ಧ ಕಿಡಿ ಕಾರುತ್ತಿದ್ದಾ–ರೆ. 'ಸರ್ಕಾರಿ ಶಾಲೆ ಉಳಿಸಿ' ಸಮಿತಿಗಳ ಮೂಲಕ ತಮ್ಮ ಊರಿನ, ಬಡಾವಣೆಯ, ತಾಲ್ಲೂಕಿನ, ಜಿಲ್ಲೆಯ ಶಾಲೆಗಳನ್ನು ಉಳಿಸಲು ಹೋರಾಟವನ್ನು ಕಟ್ಟಲು ಮುಂದಾಗುತ್ತಿದ್ದಾರೆ. "ಸರ್ಕಾರಿ ಶಾಲೆಗಳು ಉಳಿಯಬೇಕು, ಸರ್ಕಾರಿ ಶಾಲೆಗಳು ಮುಚ್ಚಿದರೆ ನಮ್ಮಂತಹ ಬಡವರ ಪಾಡೇನು? ಸರ್ಕಾರ ಶಾಲೆಗಳನ್ನು ಅಭಿವೃದ್ಧಿ ಪಡಿಸಬೇಕೇ ಹೊರತು ಈ ರೀತಿ ಮುಚ್ಚಬಾರದು. ಮುಚ್ಚುವುದಕ್ಕೆ ನಾವು ಬಿಡುವುದಿಲ್ಲ, ಈ ಬಾರಿ ಹೋರಾಟಕ್ಕೆ ನಮ್ಮ ಮಕ್ಕಳೊಂದಿಗೆ ನಾವು ಸಹ ಬರುತ್ತೇವೆ" ಎಂದು ಸಭೆಗಳಲ್ಲಿ ಪೋಷಕರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಪೋಷಕರು, ಎಐಡಿಎಸ್ಓ ಮತ್ತು ತಮ್ಮ 'ಸರ್ಕಾರಿ ಶಾಲೆ ಉಳಿಸಿ ಹೋರಾಟ ಸಮಿತಿ'ಗಳ ಮೂಲಕ ರಾಜ್ಯದ ಕೆಲವೆಡೆ, ತಮ್ಮ ಹಳ್ಳಿಗಳ ಮತ್ತು ಬಡಾವಣೆಯ ಶಾಲೆ ಉಳಿಸಲು, ಹೋರಾಟ ಮತ್ತು ಪ್ರತಿಭಟನೆಗಳ ಮೂಲಕ ಕ್ಷೇತ್ರದ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಮುಚ್ಚುವ ಪಟ್ಟಿಯಲ್ಲಿರುವ ಮೂರು ಶಾಲೆಗಳನ್ನು ಉಳಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಇಡೀ ರಾಜ್ಯದಾದ್ಯಂತ ನೂರಕ್ಕೂ ಹೆಚ್ಚು ಪೋಷಕರ ಸಭೆಗಳು ನಡೆದಿವೆ. ಈ ಸಭೆಗಳಲ್ಲಿ ಪೋಷಕರು ತಮ್ಮ ಶಾಲೆ ಉಳಿಯಬೇಕು ಮತ್ತು ಶಾಲೆಗೆ ಮೂಲಭೂತ ಸೌಕರ್ಯ ಕೊಡಬೇಕೆಂದು ಆಗ್ರಹಿಸಲು ಹೋರಾಟದ ಹೊಸ ಹೊಸ ರೂಪುರೇಷೆಗಳೊಂದಿಗೆ ಮುಂದಿನ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.


### ಹೋರಾಟದಿಂದ ಉಳಿದ ಕರ್ನಾಟಕದ ಮೊದಲ ಸರ್ಕಾರಿ ಶಾಲೆ

ಶಹಾಬಾದ್ ತಾಲೂಕಿನ ಧಕ್ಕಾಫೈಲ್‌ನಲ್ಲಿ ಇರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ನೂತನ ಕಟ್ಟಡ, ಕುಡಿಯುವ ನೀರು ಸೇರಿದಂತೆ ಇನ್ನಿತರ ಮೂಲಭೂತ ಸೌಕರ್ಯಕ್ಕಾಗಿ ಆಗ್ರಹಿಸಿ ಎಐಡಿಎಸ್ಓ ನೇತೃತ್ವದಲ್ಲಿ ನೂರಾರು ಜನರು ಹಾಗೂ ವಿದ್ಯಾರ್ಥಿಗಳು ನೆಹರೂ ಚೌಕದಲ್ಲಿ ಪ್ರತಿಭಟನೆ ನಡೆಸಿದರು. ಈ ಹೋರಾಟದ ಪ್ರತಿಫಲವಾಗಿ ಉಳಿಸಿಕೊಂಡ ಮೊದಲ ಸರ್ಕಾರಿ ಶಾಲೆ ಇದಾಗಿದೆ. ಶಹಾಬಾದ್ ತಾಲೂಕಿನ ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ ಬಿಇಓ ಅಧಿಕಾರಿಗಳು ಶಾಲೆಯನ್ನು ಯಾವುದೇ ಕಾರಣಕ್ಕೂ ಮುಚ್ಚುವುದಿಲ್ಲ, ವಿದ್ಯಾರ್ಥಿಗಳ ಹಾಗೂ ಪೋಷಕರ ಬೇಡಿಕೆಗಳ ಮೇರೆಗೆ ಶಾಲೆಯನ್ನು ಸೂಕ್ತ ಸೌಲಭ್ಯಗಳೊಂದಿಗೆ ಅಭಿವೃದ್ಧಿ ಪಡಿಸಲಾಗುವುದು ಎಂದು ಭರವಸೆ ನೀಡಿದರು.

### ಸರ್ಕಾರಿ ಶಾಲೆ ಉಳಿಸಲು ಸಮಾವೇಶ!

ದಾವಣಗೆರೆ ಜಿಲ್ಲೆಯ ನರಸಿಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ನೀಡಲು ಆಗ್ರಹಿಸಿ ಎಐಡಿಎಸ್ಓ ನೇತೃತ್ವದಲ್ಲಿ ಸಮಾವೇಶ ನಡೆಸಲಾಯಿತು. ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶೇರ್ ಅಲಿಯವರು ಸಮಾವೇಶದಲ್ಲಿ ಹಾಜರಿದ್ದರು. 15 ವಿದ್ಯಾರ್ಥಿಗಳು ಓದುತ್ತಿರುವ ಈ ಶಾಲೆಯು ತುಂಬಾ ಚಿಕ್ಕದಾಗಿದ್ದು, ಮಕ್ಕಳಿಗೆ ಆಡಲು ಮೈದಾನವಿಲ್ಲ, ಶೌಚಾಲಯ ಸರಿಯಿಲ್ಲ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಬಡ ವಿದ್ಯಾರ್ಥಿಗಳಿಗೆ ಆಸರೆಯಾಗಬೇಕಾದ ಸರ್ಕಾರಿ ಶಾಲೆಯು ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ ಈ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ಮಕ್ಕಳ ಬೆಳವಣಿಗೆಯನ್ನು ವೃದ್ಧಿಸಲು ಕನ್ನಡ ಮಾಧ್ಯಮದ ಜೊತೆಗೆ ಅಂಗ್ಲ ಮಾಧ್ಯಮ ಶಿಕ್ಷಣ ಒದಗಿಸಬೇಕೆಂದು ಎಐಡಿಎಸ್ಓ ಜಿಲ್ಲಾ ಸಮಿತಿ ಹಾಗೂ ನರಸೀಪುರದ ಗ್ರಾಮಸ್ಥರಿಂದ ಅಧಿಕಾರಿಗಳನ್ನು ಆಗ್ರಹಿಸಲಾಯಿತು. ಜನಾಗ್ರಹದ ಫಲವಾಗಿ, ಶಾಲೆಗೆ ತ್ವರಿತಗತಿಯಲ್ಲಿ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಹಾಗೂ ಮೈದಾನಕ್ಕೆ ಸಂಬಂಧಿಸಿದ ಹಕ್ಕು ಪತ್ರಗಳನ್ನು ಪರಿಶೀಲಿಸಿ ಕಂದಾಯ ಇಲಾಖೆಯ ಜೊತೆಗೆ ಮಾತನಾಡಿ ಕ್ರಮಕೈಗೊಳ್ಳುತ್ತೇವೆ ಮತ್ತು ಶಾಲೆಯನ್ನು ಮುಚ್ಚುವುದಿಲ್ಲವೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಶ್ವಾಸನೆ ನೀಡಿದರು.


















Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucic-karnataka.org EDITOR: K.RADHAKRISHNA